

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 12 ಗುರುವಾರ 2023

ಸಂಪುಟ: 44 | ಸಂಚಿಕೆ: 177 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ದಸರಾ ಮಹೋತ್ಸವಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದಸರಾ ಉದ್ಘಾಟಕರಾದ ಶ್ರೀಯುತ ಹಂಸಲೇಖ ಸೇರಿ ಗಣ್ಯರಿಗೆ

ಮೈಸೂರು ಜಿಲ್ಲಾಡಳಿತದಿಂದ ವಿಧ್ಯುಕ್ತ ಆಹ್ವಾನ









ಮೈಸೂರು, ಅ. 11(ಆರ್‌ಕೆ)– ಅಕ್ಟೋಬರ್ 15ರಿಂದ ಆರಂಭವಾಗಲಿರುವ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಮೈಸೂರು ಜಿಲ್ಲಾಡಳಿತದಿಂದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉದ್ಘಾಟಕರಾದ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಸೇರಿದಂತೆ ಹಲವು ಗಣ್ಯರಿಗೆ ಇಂದು ಅಧಿಕೃತ ಆತ್ಮೀಯ ಆಮಂತ್ರಣ ನೀಡಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮೇಯರ್ ಶಿವಕುಮಾರ್, ಶಾಸಕ ರವಿಶಂಕರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಮೈಸೂರು ಜಿಪಂ ಸಿಇಓ ಗಾಯಿತ್ರಿ ನೇತೃತ್ವದ ನಿಯೋಗವು, ಇಂದು ಬೆಳಗ್ಗೆ ಬೆಂಗಳೂರಿನ ರಾಜಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಮೈಸೂರು ಪೇಟ ತೊಡಿಸಿ ಫಲತಾಂಬೂಲ ನೀಡಿ ದಸರಾ ಆಮಂತ್ರಣ ಪತ್ರ ನೀಡಿದರು. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿ 2023ರ ದಸರಾ ಮಹೋತ್ಸವಕ್ಕೆ ಆಹ್ವಾನ ನೀಡಿದ ಜಿಲ್ಲಾಡಳಿತದ ನಿಯೋಗವು, ನಂತರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಿತು. ಈ ಬಾರಿಯ ದಸರಾ ಮಹೋತ್ಸವದ ಉದ್ಘಾಟಕರಾದ ಪ್ರಸಿದ್ಧ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೂ ವಿಧ್ಯುಕ್ತ ಆಹ್ವಾನ ನೀಡಿತು.

ತದನಂತರ ರಾಜ್ಯ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಆಯ್ಕೆಯಾಗಿರುವ ಡಾ.ಪದ್ಮಾ ಮೂರ್ತಿ ಸೇರಿದಂತೆ ಸಚಿವರು, ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೇರಿದಂತೆ ಹಲವು ಗಣ್ಯರಿಗೂ ಜಿಲ್ಲಾಡಳಿತದಿಂದ ದಸರಾ ಮಹೋತ್ಸವಕ್ಕೆ ಆಹ್ವಾನಿಸಿತು.

ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಮೈಸೂರು ಮಹಾನಗರ ಪಾಲಿಕೆ ಉಪಆಯುಕ್ತೆ (ಆಡಳಿತ) ಎಂ.ಜೆ.ರೂಪಾ ಸೇರಿದಂತೆ ಹಲವು ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು. ಅಕ್ಟೋಬರ್ 15ರಂದು ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 10.15ರಿಂದ 10.36 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡುವರು. ಅಂದು ದಸರಾ ಮಹೋತ್ಸವದ ಬಹುತೇಕ ಎಲ್ಲಾ ಕಾರ್ಯಕ್ರಮಗಳೂ ಉದ್ಘಾಟನೆಗೊಳ್ಳಲಿದ್ದು, ದಸರಾ ವಿಶೇಷ ದೀಪಾಲಂಕಾರಕ್ಕೆ ಚಾಲನೆ ದೊರೆಯಲಿದೆ. ಸಂಜೆ 7 ಗಂಟೆಗೆ ಅರಮನೆ ಆವರಣದಲ್ಲಿ ಉದ್ಘಾಟನೆಯಾಗಲಿರುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದುಷಿ ಡಾ. ಪದ್ಮಾಮೂರ್ತಿ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ದಸರಾ ಮಹೋತ್ಸವದ ಆಕರ್ಷಣೆಯಾದ ಯುವ ದಸರಾ, ಮಹಾರಾಜ ಕಾಲೇಜು ಮೈದಾನದಲ್ಲಿ ಅ.18ರಿಂದ 21ರವರೆಗೆ ನಡೆಯಲಿದ್ದು, ಅ.23ರಂದು ಸಂಜೆ 4 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಏರ್‌ಶೋ ಆಯೋಜಿಸಲಾಗಿದೆ.

> " ದಸರಾ ನನ್ನೂರ ಹಬ್ಬ, ನಾನು ಬಾಲ್ಯದಲ್ಲಿ ಅಪ್ಪನ ಹೆಗಲು ಮೇಲೆ ಕೂತು ದಸರಾ ನೋಡುತ್ತಿದ್ದೆ. ಈಗ ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ದಸರಾದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತದ್ದು ನನ್ನ ಸೌಭಾಗ್ಯ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ನೇತೃತ್ವದ ನಿಯೋಗವು ವಿಶ್ವ ವಿಖ್ಯಾತ ದಸರಾದ ಆಹ್ವಾನಪತ್ರಿಕೆ ನೀಡಿದ ಸಂದರ್ಭದಲ್ಲಿ ಅತ್ಯಂತ ಸಂತೋಷದಿಂದ ಅವರ ಆಹ್ವಾನ ಸ್ವೀಕರಿಸಿದ್ದೇನೆ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಮತ್ತೆ 20 ಸಾವಿರ ಶಿಕ್ಷಕರ ನೇಮಕ

ಮುಂದಿನ ಶೈಕ್ಷಣಿಕ ವರ್ಷ 500 ಇಂಗ್ಲಿಷ್ ಸರ್ಕಾರಿ ಶಾಲೆ ಪ್ರಾರಂಭ

ಬೆಂಗಳೂರು, ಅ.11(ಕೆಎಂಶಿ)– ಹೊಸದಾಗಿ 20 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಾಗಿ ತಿಳಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ 500 ಇಂಗ್ಲಿಷ್ ಸರ್ಕಾರಿ ಶಾಲೆ(ಕೆಪಿಎಸ್) ತೆರೆಯುವುದಾಗಿ ಇಂದಿಲ್ಲಿ ಪ್ರಕಟಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 13,500 ಪ್ರೌಢಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿದೆ. ಹೈಕೋರ್ಟ್ ಆದೇಶ ನೀಡಿದ ಕೂಡಲೇ ಇವುಗಳನ್ನು ಭರ್ತಿ ಮಾಡಲಾಗುವುದು.

ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಮತ್ತೆ 20 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲು ಮುಖ್ಯಮಂತ್ರಿ ಅವರ ಅನುಮೋದನೆ ಪಡೆಯಲಾಗುವುದು ಎಂದರು. ಕೆಪಿಎಸ್ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವಿದ್ದರೂ ಕನ್ನಡ ಭಾಷೆ ಪ್ರಥಮ ಭಾಷೆ ● 6ನೇ ಪುಟಕ್ಕೆ



ನಾಗರಹೊಳೆ ಸೇರಿದಂತೆ ಅಭಯಾರಣ್ಯಗಳ ಅಂಚಿನಲ್ಲಿ ರೆಸಾರ್ಟ್, ಸೌಧಗಳ ನಿರ್ಮಾಣಕ್ಕೆ

ಇನ್ನು ಅಡ್ಡಿಯಿಲ್ಲ!

■ ಅರಣ್ಯ ಸಚಿವ ಈಶ್ವರ ಖಂಡ್ರೆ ನೇತೃತ್ವದ ಸಂಪುಟ ಉಪ ಸಮಿತಿ ನಿರ್ಧಾರ ■ ವಾಣಿಜ್ಯ ಚಟುವಟಿಕೆಗೆ ಇನ್ನು ಆಸ್ಪದ; ಸಾಮಿಲ್ ತೆರೆಯಲೂ ಅವಕಾಶ

ಬೆಂಗಳೂರು, ಅ.11(ಕೆಎಂಶಿ)– ನಾಗರಹೊಳೆ ಸೇರಿದಂತೆ ರಾಜ್ಯದ ಪಶ್ಚಿಮಘಟ್ಟ ಅರಣ್ಯಗಡಿ ಭಾಗದಲ್ಲೇ ವಾಣಿಜ್ಯ ಚಟುವಟಿಕೆ ಹಾಗೂ ಮನೆಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.



ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಉಪಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದ್ದು, ಅರಣ್ಯ ಬದಿಯಲ್ಲಿರುವ ಖಾಸಗಿ ಭೂಮಾಲೀಕರು ಮನೆ ನಿರ್ಮಿಸಲು ಇನ್ನು ಮುಂದೆ ಯಾವುದೇ ಅಭ್ಯಂತರವಿಲ್ಲ.

ಅರಣ್ಯ ಮತ್ತು ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ರೆಸಾರ್ಟ್‌ಗಳ ನಿರ್ಮಾಣಕ್ಕೂ ಸಭೆ ಸಮ್ಮತಿಸಿರುವುದಲ್ಲದೆ, ವಿದ್ಯುತ್ ಉತ್ಪಾದನೆಗೆ ವಿಂಡ್‌ವ್ಹೀಲ್‌ಗಳನ್ನು ಪ್ರಾರಂಭಿಸಬಹುದು. ದಟ್ಟ ಅರಣ್ಯಗಡಿ ಭಾಗದಲ್ಲೇ ಸಾ ಮಿಲ್ ತೆರೆಯಲು ಸಂಪುಟದ ಉಪ ಸಮಿತಿ ಅವಕಾಶ ಮಾಡಿಕೊಟ್ಟಿದೆ. ಅರಣ್ಯಗಡಿಯಿಂದ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳನ್ನು ನಿರ್ಮಿಸಲು ಇದ್ದ ನಿರ್ಬಂಧವನ್ನು ಸರ್ಕಾರ ಸಡಿಲಿಸಲಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧುಬಂಗಾರಪ್ಪ, ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳನ್ನು ನಿರ್ಮಿಸಲು ಅನುಮತಿ ಇರಲಿಲ್ಲ.



ರಾಜ್ಯದಲ್ಲಿ ಸುಮಾರು ಮೂವತ್ತೈದು ಪ್ರದೇಶಗಳನ್ನು ಗುರುತಿಸಲಾಗಿದ್ದು, ಈ ಪೈಕಿ ಇಪ್ಪತ್ತೊಂಬತ್ತು ಪ್ರದೇಶಗಳಲ್ಲಿ ಇಂತಹ ಚಟುವಟಿಕೆಗಳಿಗೆ ಅನುಮತಿ ಕೊಡಲು ಸಹಮತ ವ್ಯಕ್ತವಾಗಿತ್ತು. ನಾಗರಹೊಳೆ ಸೇರಿದಂತೆ ಇನ್ನೂ ಆರು ಪ್ರದೇಶಗಳಲ್ಲಿ ಈ ನಿಯಮವನ್ನು ಸಡಿಲಿಸುವ ಕುರಿತು ಇಂದು ಸಹಮತ ವ್ಯಕ್ತವಾಗಿದೆ ಎಂದು ವಿವರಿಸಿದರು. ಶರಾವತಿ ಯೋಜನೆಯಿಂದ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಭೂಮಿ ನೀಡುವ ಸಂಬಂಧ ಇದ್ದ ಸಮಸ್ಯೆಯನ್ನು ಪರಿಹರಿಸಲು ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಮಲೆನಾಡು ಭಾಗದ ರೈತರಿಗೆ ಸಾಗುವಳಿ ಹಕ್ಕುಪತ್ರ ನೀಡುವ ಸಂಬಂಧ ಆಗಿರುವ ಗೊಂದಲವನ್ನು ಪರಿಹರಿಸಲು ನಮ್ಮ ಸರ್ಕಾರ ಸಜ್ಜಾಗಿದೆ. ರೈತರಿಗೆ ಸಾಗುವಳಿ ಹಕ್ಕುಪತ್ರ ನೀಡಲು ಎಪ್ಪತ್ತೈದು ವರ್ಷಗಳ ಅನುಭೋಗದ ದಾಖಲೆ ನೀಡಬೇಕು ಎಂದು ಈ ಹಿಂದೆ ಷರತ್ತು ವಿಧಿಸಲಾಗಿತ್ತು. ಆದರೆ ಈ ಷರತ್ತನ್ನು ಪೂರೈಸುವುದು ಕಷ್ಟ, ಹೀಗಾಗಿ ಈ ವಿಷಯದಲ್ಲಿರುವ ಗೊಂದಲವನ್ನು ಪರಿಹರಿಸಲು ಸೂಕ್ತ ಕಾನೂನುಗಳನ್ನು ಜಾರಿಗೆ ತರಲು ತಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ತಮಿಳುನಾಡಿಗೆ ಮತ್ತೆ ಪ್ರತಿದಿನ 3 ಸಾವಿರ ಕ್ಯೂಸೆಕ್ ನೀರು ಬಿಡಿ

ಕರ್ನಾಟಕಕ್ಕೆ ಸಿಡಬ್ಲ್ಯೂಆರ್‌ಸಿ ಸೂಚನೆ

ಬೆಂಗಳೂರು,ಅ.11–ತಮಿಳುನಾಡಿಗೆ ನೀರು ಹರಿಸದಿರುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಕಾವೇರಿ ಜಲಾನಯನ ಪ್ರದೇಶದಲ್ಲಿ ಪ್ರತಿಭಟನೆ ಮುಂದುವರೆದಿರುವಂತೆಯೇ ಕರ್ನಾಟಕಕ್ಕೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಆರ್‌ಸಿ) ಮತ್ತೆ ಶಾಕ್ ನೀಡಿದೆ. ಮುಂದಿನ 15 ದಿನಗಳ ಕಾಲ ಪ್ರತಿದಿನ ಮತ್ತೆ ತಮಿಳುನಾಡಿಗೆ 3,000 ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಸೂಚನೆ ನೀಡಿದೆ.



ನವದೆಹಲಿಯಲ್ಲಿಂದು ನಡೆದ ಸಿಡಬ್ಲ್ಯೂಆರ್‌ಸಿಯ 88ನೇ ಸಭೆಯಲ್ಲಿ ಅಕ್ಟೋಬರ್ 16 ರಿಂದ 31ರವರೆಗೆ ಬಿಳಿಗುಂಡ್ಲುವಿನಲ್ಲಿ ನಿತ್ಯ 3,000 ಕ್ಯೂಸೆಕ್ ನೀರಿನ ಹರಿವನ್ನು ಖಚಿತಪಡಿಸಿಕೊಳ್ಳಬೇಕೆಂದು ನಿರ್ಧರಿಸಲಾಗಿದೆ.

ಸಭೆಯಲ್ಲಿ ರಾಜ್ಯದಲ್ಲಿ ನೀರಿನ ಕೊರತೆಯಾಗಿದ್ದು, ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಕರ್ನಾಟಕದ ಅಧಿಕಾರಿಗಳು ವಾದಿಸಿದರು. ಅ.10ರವರೆಗೆ ನಾಲ್ಕು ಜಲಾಶಯಗಳಿಗೆ ಶೇ.50.891ರಷ್ಟು ಒಳಹರಿವಿನ ಕೊರತೆಯಾಗಿದ್ದು, ಅನಿಯಂತ್ರಿತ ನೀರಿನ ಹರಿವು ಹೊರತುಪಡಿಸಿ ಬಿಳಿಗುಂಡ್ಲು ತಲುಪಲು ಕರ್ನಾಟಕ ತನ್ನ ಜಲಾಶಯಗಳಿಂದ ಯಾವುದೇ ನೀರನ್ನು ಬಿಡುಗಡೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಆದರೆ, ಮುಂದಿನ 15 ದಿನಗಳವರೆಗೆ ಕರ್ನಾಟಕ 16,000 ಕ್ಯೂಸೆಕ್ (20.75 ಟಿಎಂಸಿ) ನೀರು ಬಿಡುಗಡೆ ಮಾಡಬೇಕೆಂದು ತಮಿಳುನಾಡು ವಾದಿಸಿತು. ಅಂತಿಮವಾಗಿ ಕರ್ನಾಟಕ ತನ್ನ ಜಲಾಶಯಗಳಿಂದ ಅ.16ರಿಂದ 31ರವರೆಗೆ ಬಿಳಿಗುಂಡ್ಲುವಿನಲ್ಲಿ 3,000 ಕ್ಯೂಸೆಕ್ ನೀರಿನ ಹರಿವನ್ನು ಖಚಿತ ಪಡಿಸಿಕೊಳ್ಳಬೇಕೆಂದು ಸಿಡಬ್ಲ್ಯೂಆರ್‌ಸಿ ತೀರ್ಮಾನ ಮಾಡಿತು.

ರಾಜ್ಯ ರೈತರ ಹಿತ ಕಾಯಲು ಸರ್ಕಾರ ಬದ್ಧ

ಮೈಸೂರು,ಅ.11(ಪಿಎಂ)– ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ), ಕರ್ನಾಟಕವು ತಮಿಳುನಾಡಿಗೆ ಅ.16 ರಿಂದ 31ರವರೆಗೆ ಪ್ರತಿ ದಿನ 3 ಸಾವಿರ ಕ್ಯೂಸೆಕ್ ಕಾವೇರಿ ನೀರನ್ನು ಹರಿಸಬೇಕೆಂದು ಬುಧವಾರ ಸೂಚನೆ ನೀಡಿರುವ ಸಂಬಂಧ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಏನೇ ಸೂಚನೆ ಇದ್ದರೂ ನಮ್ಮ ರೈತರ ಹಿತ ಕಾಯುವಲ್ಲಿ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎರಡೂ ರಾಜ್ಯಗಳ ನೀರಿನ ಪ್ರಮಾಣದ ದಾಖಲೆಗಳನ್ನು ಸಮಿತಿ ಪಡೆದಿದ್ದು, 3 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸಲು ತಿಳಿಸಿದೆ. ನಮ್ಮ ಅಣೆಕಟ್ಟುಗಳ ಒಳಹರಿವು ಇಂದು 10 ಸಾವಿರ ಕ್ಯೂಸೆಕ್ ಇದ್ದು, ನಮ್ಮ ರೈತರ ಹಿತಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಎಲ್ಲಾ ವ್ಯವಸ್ಥೆ ಮಾಡಲಿದೆ ಎಂದು ತಿಳಿಸಿದರು. ರಾಜ್ಯದ ಅಣೆಕಟ್ಟೆಗಳಿಂದ ನೀರು ಬಿಟ್ಟಿದ್ದರೂ ಒಂದೆರಡು ದಿನಗಳು ಬಿಳಿಗುಂಡ್ಲುಗೆ ಕಡಿಮೆ ನೀರು ಹೋಗಿದೆ. ಜೊತೆಗೆ ಒಂದೆರಡು ● 6ನೇ ಪುಟಕ್ಕೆ





ಅ.15ರಿಂದ ದಸರಾ ಕುಸ್ತಿ ಪಂದ್ಯಾವಳಿ

ನಾಡ ಕುಸ್ತಿ, ಪಾಯಿಂಟ್ ಕುಸ್ತಿ, ಪಂಜ ಕುಸ್ತಿಯಲ್ಲಿ ಸಾಹಸಿಗರು ಸೆಣಸಾಡುವ ಅವಕಾಶ

● ಅಖಾಡದಲ್ಲಿ ಹರಿಯಾಣ, ಮಹಾರಾಷ್ಟ್ರ ದೆಹಲಿ ಕುಸ್ತಿ ಪಟುಗಳು ● ಆಯ್ಕೆಗೆ ತೂಕವೇ ಮಾನದಂಡ: ಮಾರ್ಫಿಟ್ ರೋಚಕತೆ ● ನಾಡ ಕುಸ್ತಿಯಲ್ಲಿ 205 ಜೋಡಿಗಳ ಸೆಣಸಾಟ

ಮೈಸೂರು, ಅ.11(ಬಿಎಲ್‌ಯು)–ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಅಕ್ಟೋಬರ್ 15 ರಿಂದ 21 ರವರೆಗೆ 7 ದಿನಗಳು ದಸರಾ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕರೂ ಆದ ದಸರಾ ಕುಸ್ತಿ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಬಿ.ನಂದಿನಿ ತಿಳಿಸಿದರು.

ಮೈಸೂರು ಜಿಲ್ಲಾ ಪೊಲೀಸ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ದೊಡ್ಡಕೆರೆ ಮೈದಾನದ ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಅ.15 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡುವರು ಎಂದು ಹೇಳಿದರು.

ಮಣ್ಣಿನಲ್ಲಿ ಆಡುವ ನಾಡ ಕುಸ್ತಿ, ಮ್ಯಾಟ್‌ನಲ್ಲಿ ಆಡುವ ಪಾಯಿಂಟ್ ಕುಸ್ತಿ ಹಾಗೂ ಕೈ ಬಲ ಶಕ್ತಿ ಪ್ರದರ್ಶಿಸುವ ಪಂಜ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಪುರುಷರು,



ಮಹಿಳೆಯರು ಹಾಗೂ ವಿಶೇಷ ಚೇತನರಿಗೆ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ. ಕರ್ನಾಟಕದ ಎಲ್ಲಾ ಜಿಲ್ಲೆಯ ಕುಸ್ತಿ ಪಟುಗಳು ಸೇರಿದಂತೆ ಹರಿಯಾಣ, ಮಹಾರಾಷ್ಟ್ರ ಹಾಗೂ ದೆಹಲಿಯಿಂದ ಬರುವ ಕುಸ್ತಿಪಟುಗಳು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ನಂದಿನಿ ವಿವರಿಸಿದರು. ಆಯಾ ವಿಭಾಗದ ಅಂತಿಮ ಕಣದಲ್ಲಿ ಗೆಲವು ಸಾಧಿಸಿದ ಕುಸ್ತಿ ಪಟುಗಳಿಗೆ ದಸರಾ ಕಿಶೋರ್, ದಸರಾ ಕೇಸರಿ, ದಸರಾ ಕಂಠೀರವ ಹಾಗೂ ಮೈಸೂರು ವಿಭಾಗದ ದಸರಾ ಕುಮಾರ್ ಮತ್ತು ದಸರಾ ಕಿಶೋರಿ ಪ್ರಶಸ್ತಿಗಳನ್ನು ನೀಡಲಾಗುವುದು ಎಂದರು. ಜೊತೆಗೆ ಪ್ರತಿ ವರ್ಷದಂತೆ ಈ ಬಾರಿ ಕೂಡ ಸಿಎಂ ಕಪ್ ಕುಸ್ತಿ ಪಂದ್ಯಾವಳಿ ಕೂಡ ಆಯೋಜಿಸಲಾಗುವುದು ಎಂದು ಹೇಳಿದರು. ರಾಜ್ಯ ಮಟ್ಟದ ದಸರಾ ಕಿಶೋರ ಸ್ಪರ್ಧೆಯಲ್ಲಿ ಭಾಗವಹಿಸುವರು 57ರಿಂದ 65 ಕೆ.ಜಿ.ತೂಕ ಹೊಂದಿರಬೇಕು, ವಿಜೇತರಿಗೆ ಅರ್ಧ ಕೆ.ಜಿ. ಬೆಳ್ಳಿ ಗದೆ ಹಾಗೂ ನಗದು ಬಹುಮಾನ ನೀಡ ಲಾಗುವುದು. ದಸರಾ ಕಂಠೀರವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವರು 86 ಕೆ.ಜಿ.ಗಿಂತ ಹೆಚ್ಚು ತೂಕವುಳ್ಳವರಾಗಿರಬೇಕು. ● 6ನೇ ಪುಟಕ್ಕೆ

ಬರೀ ಮೂರು ದಿನ ಬಾಕಿ ಇದ್ರೂ ಅನುದಾನ ಬಂದಿಲ್ಲ

ಪ್ರತಿ ವರ್ಷ ಕುಸ್ತಿ ಪಂದ್ಯಾವಳಿಗೆ ಹತ್ತು ದಿನಗಳ ಮೊದಲೇ ಅನುದಾನ ನೀಡಲಾಗುತ್ತಿತ್ತು. ಆದರೆ ಈ ಬಾರಿ ದಸರಾ ಉದ್ಘಾಟನೆಗೆ ಇನ್ನು ಬರೀ ಮೂರು ದಿನ ಇದ್ದರೂ ದಸರಾ ಕುಸ್ತಿ ಸಮಿತಿಗೆ ಇನ್ನು ನಯಾ ಪೈಸೆ ಹಣ ಬಿಡುಗಡೆಯಾಗಿಲ್ಲ. ಹಣವಿಲ್ಲದ ಕಾರಣ ಕುಸ್ತಿ ಪಂದ್ಯಾವಳಿಯ ಸಿದ್ಧತೆಗಳು ಹಾಗೆ ನಿಂತಿವೆ.

ಕಳೆದ ಬಾರಿ ಸರ್ಕಾರ ಕುಸ್ತಿ ಆಯೋಜನೆಗಾಗಿ 35 ಲಕ್ಷ ರೂ. ನೀಡಿತ್ತು. ಆದರೆ ಈ ಬಾರಿ 45 ಲಕ್ಷ ರೂ. ನೀಡುವಂತೆ ಕೋರಲಾಗಿದೆ. ಆದರೆ ಎಷ್ಟು ಹಣ ದೊರೆಯುತ್ತದೆ ಎಂಬ ಖಚಿತ ಮಾಹಿತಿ ಇಲ್ಲ ಎಂದು ನಂದಿನಿ ತಿಳಿಸಿದರು.

ಹಾಗಾದರೆ ಸರ್ಕಾರ ಅನುದಾನ ಕೊಡುವುದು ಯಾವಾಗ, ಆ ಹಣದಲ್ಲಿ ಸಿದ್ಧತಾ ಕಾರ್ಯಗಳನ್ನು ಕೈಗೊಳ್ಳುವುದು ಯಾವಾಗ ಎಂಬ ಪ್ರಶ್ನೆ ಎದುರಾಗಿದೆ.

ಬರಗಾಲದ ಹಿನ್ನೆಲೆಯಲ್ಲಿ ಈ ವರ್ಷ ಅದ್ದೂರಿಯಲ್ಲದ ಸರಳ ಹಾಗೂ ಸಾಂಪ್ರದಾಯಿಕ ದಸರಾ ನಡೆಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಆದರೆ ಸರಳವಾಗಿಯಾದರೂ ದಸರಾ ಕುಸ್ತಿ ಪಂದ್ಯಾವಳಿ ಆಚರಣೆಗೆ ಇನ್ನು ಹಣ ಬಂದಿಲ್ಲ.

ಈಗಾಗಲೇ ಸರ್ಕಾರದಿಂದ 30 ಕೋಟಿ ರೂ. ಬಂದಿದೆ. ಈ ಹಣದಲ್ಲಾದರೂ ಕುಸ್ತಿಗೆ ಹಣ ನೀಡಬಹುದಿತ್ತು. ಆದರೆ ಕುಸ್ತಿ ಉದ್ಘಾಟನೆಗೆ ಒಂದೆರಡು ದಿನವಿದ್ದರೂ ಇನ್ನು ಯಾಕೆ ಹಣ ನೀಡಿಲ್ಲ ಎಂಬುದು ತಿಳಿದು ಬಂದಿಲ್ಲ.

ನಿಗಮ–ಮಂಡಳಿ ಅಧ್ಯಕ್ಷರ ನೇಮಕಕ್ಕೆ ಆಸಕ್ತಿ ತೋರದ ಕಾಂಗ್ರೆಸ್ ಹೈಕಮಾಂಡ್

ಬೆಂಗಳೂರು, ಅ.11– ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳ ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಈಗಾಗಲೇ ಪ್ರಕಟವಾಗಿದ್ದು, ರಾಜ್ಯದಲ್ಲಿ ಅನೇಕ ತಿಂಗಳಿಂದ ಬಾಕಿ ಉಳಿದಿರುವ ನಿಗಮ–ಮಂಡಳಿ ಅಧ್ಯಕ್ಷರ ನೇಮಕ ಮತ್ತಷ್ಟು ವಿಳಂಬವಾಗಲಿದೆ.

ನಿಗಮ–ಮಂಡಳಿ ಅಧ್ಯಕ್ಷರುಗಳ ನೇಮಕಕ್ಕೆ ಹಲವು ತೊಂದರೆಗಳು ಇರುವ ಕಾರಣ ನೇಮಕ ಮಾಡಲು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ, ಹಾಗಾಗಿ ಕಾಂಗ್ರೆಸ್ ಕೇಂದ್ರ ನಾಯಕರು ಸದ್ಯ ಗಮನ ಹರಿಸುತ್ತಿಲ್ಲ ಎಂದು ಮೂಲಗಳು ತಿಳಿಸಿವೆ. ಅಧ್ಯಕ್ಷರ ನೇಮಕಕ್ಕೆ ಎರಡರಿಂದ ಮೂರು ವಾರಗಳು ಬೇಕಾಗಬಹುದು ಎಂದು ಕಾಂಗ್ರೆಸ್‌ನ ಕೆಲವರು ಹೇಳಿದರೆ, ಇನ್ನು ಕೆಲವರು 5 ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗುವವರೆಗೆ ಅಂದರೆ ಡಿಸೆಂಬರ್‌ವರೆಗೆ ವಿಳಂಬವಾಗಬಹುದು ಎಂದು ಹೇಳಿದ್ದಾರೆ. ● 6ನೇ ಪುಟಕ್ಕೆ

ದಸರಾ ಗಜಪಡೆಗೆ ಮೊದಲ ಬಾರಿಯ ಕುಶಾಲತೋಪು ತಾಲೀಮು ಯಶಸ್ವಿ

- ದಸರಾ ವಸ್ತು ಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ನಡೆದ ಪ್ರಯೋಗ
- 7 ಫಿರಂಗಿಗಳಲ್ಲಿ 3 ಸುತ್ತಿನಂತೆ 21 ಬಾರಿ ಸಿಡಿಮದ್ದು
- ಬೆಚ್ಚಿದ ಹೊಸ ಆನೆ ರೋಹಿತ,ಮುಂದಿನ ಎರಡೂ ಕಾಲೂರಿ ರೋದನ
- ಧೈರ್ಯ ತೋರಿದ ಮಹೇಂದ್ರ, ಕಂಜನ್, ಭೀಮ



ಮೈಸೂರು, ಅ.11 (ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆ ಹಾಗೂ ಅಶ್ವಪಡೆಗೆ ಈ ಬಾರಿ ಮೊದಲ ಕುಶಾಲ ತೋಪು ಸಿಡಿಸುವ ತಾಲೀಮು ಯಶಸ್ವಿಯಾಗಿ ನೆರವೇರಿದ್ದು, ಸಿಡಿಮದ್ದಿನ ಶಬ್ದಕ್ಕೆ ಹೊಸ ಆನೆ ರೋಹಿತ ಹಾಗೂ ಧನಂಜಯ ಬೆಚ್ಚಿದರೆ ಉಳಿದ ಆನೆಗಳು ದಿಟ್ಟತನದ ಮೂಲಕ ಗಮನ ಸೆಳೆದವು.

ನವರಾತ್ರಿ ಆರಂಭಕ್ಕೆ(ಅ.15) ಕೇವಲ 3 ದಿನ ಮಾತ್ರವಿದ್ದು, ಜಂಬೂಸವಾರಿಗೆ (ಅ.24) 12 ದಿನವಿದೆ. ಈ ಹಿನ್ನೆಲೆಯಲ್ಲಿ ಗಜಪಡೆ ಮತ್ತು ಅಶ್ವ ಪಡೆಯನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಅಂತಿಮ ಸುತ್ತಿನ ತಾಲೀಮು ಆರಂಭಿಸಲಾಗಿದ್ದು, ಅದರಲ್ಲಿ ಬುಧವಾರ ದಸರಾ ವಸ್ತುಪ್ರದರ್ಶನದ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ಮೊದಲ ಫಿರಂಗಿ ತಾಲೀಮು ಯಶಸ್ವಿಯಾಗಿ ನೆರವೇರಿತು.

ಪ್ರತಿ ವರ್ಷ ಮೂರು ಬಾರಿ ಸಿಡಿಮದ್ದು ತಾಲೀಮು ನಡೆಸುವ ಪದ್ಧತಿ ಅನುಸರಿಸಲಾಗುತ್ತಿದ್ದು, ಈ ಬಾರಿ ಮೊದಲ ತಾಲೀಮಿನಲ್ಲಿ ಎಂದಿನಂತೆ 7 ಫಿರಂಗಿ ಬಳಸಿ 3 ಸುತ್ತಿನ ಮೂಲಕ 21 ಕುಶಾಲತೋಪು ಸಿಡಿಸಲಾಯಿತು. ಪ್ರತಿಯೊಂದು ಫಿರಂಗಿಗೂ 1.2 ಕೆಜಿ ಗನ್ ಪೌಡರ್ ಬಳಸಿ ತಯಾರಿಸಿದ್ದ ಸಿಡಿಮದ್ದನ್ನು ಸಿಡಿಸಿ ತಾಲೀಮು ನಡೆಸಲಾಯಿತು. ಕಳೆದ ಬಾರಿ ಅರಮನೆಯ ಕೋಟೆ ಮಾರಮ್ಮ ದೇವಾಲಯದ ಬಳಿ ಅರಮನೆ ಕಾಂಪೌಂಡ್ ಕುಸಿದಿದ್ದ ಹಿನ್ನೆಲೆಯಲ್ಲಿ ಕುಶಾಲತೋಪು ಸಿಡಿಸುವ ತಾಲೀಮು ಸ್ಥಳ ಬದಲಿಸಲಾಯಿತು. ಫಿರಂಗಿ ದಳದ ಸಿಬ್ಬಂದಿ ಬೆಳಗ್ಗೆ 10 ಗಂಟೆಗೆ ತಾಲೀಮಿಗಾಗಿ ಬಳಸಲು ಆಯ್ಕೆ ಮಾಡಿದ್ದ 7 ಫಿರಂಗಿಗಳನ್ನು ಅರಮನೆಯಿಂದ ನಿಗದಿತ ಸ್ಥಳಕ್ಕೆ ತಂದು ಸಿದ್ಧತೆ ಮಾಡಿಕೊಂಡಿದ್ದರು.

ಅರಮನೆಯಿಂದ ನಡೆದ ಗಜಪಡೆ: ಕುಶಾಲತೋಪು ಸಿಡಿಸುವ ತಾಲೀಮಿಗೆ ಫಿರಂಗಿ ದಳ ಹಾಗೂ ಅಶ್ವಪಡೆ ದಸರಾ ವಸ್ತು ಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ಹಾಜರಿದ್ದವು. ಈ ವೇಳೆ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆ ಜಯ ಮಾರ್ತಾಂಡ ದ್ವಾರದ ಮೂಲಕ ಬಿ.ಎನ್. ರಸ್ತೆ ಹಾದು ದಸರಾ ವಸ್ತು ಪ್ರದರ್ಶನದ ದ್ವಾರದಿಂದ ಆಗಮಿಸಿದವು. ಗಜಪಡೆ ಫಿರಂಗಿ ಸಮೀಪ ನಿಗದಿತ ಸ್ಥಳದಲ್ಲಿ ಎರಡು ಸಾಲಿನಲ್ಲಿ ನಿಂತವು. ಅದರಲ್ಲಿ ಮೊದಲ ಸಾಲಿನಲ್ಲಿ ಅಭಿಮನ್ಯು, ಅರ್ಜುನ, ವಿಜಯಾ, ವರಲಕ್ಷ್ಮಿ, ಭೀಮ, ಗೋಪಿ, ಕಂಜನ್, ಮಹೇಂದ್ರ ಆನೆಗಳನ್ನು ನಿಲ್ಲಿಸಿದ್ದರೆ, ಎರಡನೇ ಸಾಲಿನಲ್ಲಿ ನಿಂತಿದ್ದ ಸುಗ್ರೀವ, ರೋಹಿತ, ಪ್ರಶಾಂತ ಹಾಗೂ ಹಿರಣ್ಯ ಆನೆಯನ್ನು ನಿಲ್ಲಿಸಲಾಗಿತ್ತು. ಮತ್ತೊಂದು ಬದಿಯಲ್ಲಿ ಅಶ್ವಪಡೆಯ 28 ಕುದುರೆಗಳನ್ನು ಸಾಲಾಗಿ ನಿಲ್ಲಿಸಲಾಗಿತ್ತು.

ಮೂರು ಹಂತದಲ್ಲಿ ಸಿಡಿಮದ್ದು ಸಿಡಿತ: ತಾಲೀಮಿನ ವೇಳೆ 7 ಫಿರಂಗಿಗಳನ್ನು ಬಳಸಿ 3 ಹಂತದಲ್ಲಿ ಸಿಡಿಮದ್ದು ಸಿಡಿಸಲಾಯಿತು. ಮೊದಲ ಸುತ್ತಿನಲ್ಲಿ 7 ಸಿಡಿಮದ್ದು ಸಿಡಿಸಿದ ಬಳಿಕ ವಿರಾಮ ನೀಡಲಾಯಿತು. ನಂತರ 2ನೇ ಹಂತದಲ್ಲಿ ಸಿಡಿಮದ್ದು ಸಿಡಿಸಲಾಯಿತು. ಬಳಿಕ 2 ನಿಮಿಷದ ನಂತರ 3ನೇ ಸುತ್ತಿನಲ್ಲಿ ಸಿಡಿಸಲಾಯಿತು.

ಬೆಚ್ಚಿದ ರೋಹಿತ, ನಡುಗಿದ ಧನಂಜಯ: ದಸರಾ ಗಜಪಡೆಯ 14 ಆನೆಗಳಲ್ಲಿ ಅತೀ ಚಿಕ್ಕ ವಯಸ್ಸಿನ ಬಂಡೀಪುರದ ರಾಂಪುರ ಕ್ಯಾಂಪ್‌ನ ರೋಹಿತ ಸಿಡಿಮದ್ದಿನ ಶಬ್ದಕ್ಕೆ ಬೆದರಿತು. ಮೊದಲ ಸುತ್ತಿನ ಸಿಡಿಮದ್ದು ಸಿಡಿಸಿದ ವೇಳೆ ಬೆಚ್ಚಿದ ರೋಹಿತ ಎರಡನೇ ಸುತ್ತಿನ ಸಿಡಿಮದ್ದು ಸಿಡಿತದ ಸದ್ದಿಗೆ ಮತ್ತಷ್ಟು ಭೀತಿಗೊಳಗಾಯಿತು. ಅತ್ತಿಂದಿತ್ತ, ಇತ್ತಿಂದತ್ತ ತಿರುಗುತ್ತಿದ್ದ ರೋಹಿತನನ್ನು ಸಮಾಧಾನ ಮಾಡಲು ಮಾವುತ ಮಹದೇವ ಹಾಗೂ ಕಾವಾಡಿ ಮಣಿ ಹರಸಾಹಸಪಡಬೇಕಾಯಿತು. ಈ ವೇಳೆ ಮುಗ್ಗರಿಸಿದಂತಾಗಿ ಮುಂದಿನ ಎರಡೂ ಕಾಲೂರಿ ಆತಂಕ ವ್ಯಕ್ತಪಡಿಸಿತು. ಈ ಸಂದರ್ಭದಲ್ಲಿ ಆನೆ ಮೇಲಿದ್ದ ಕಾವಾಡಿ ಮಣಿ ಕೆಳಕ್ಕೆ ಹಾರಿದರು. ತಾಲೀಮು ಮುಗಿದರೂ ರೋಹಿತ ಮಾತ್ರ ಬೆದರಿದ ಸ್ಥಿತಿಯಲ್ಲೇ ಇದ್ದ. ಈ ಹಿನ್ನೆಲೆಯಲ್ಲಿ ಮಾವುತ ಮಹದೇವ ಹಾಗೂ ಮಣಿ ಅವರನ್ನು ಮೇಲೇರಿ ಕೂರಲು ಅವಕಾಶ ನೀಡಲಿಲ್ಲ. ಬಳಿಕ ಹಿರಿಯ ಆನೆ ಅರ್ಜುನ ಹಾಗೂ ಭೀಮ ಸೊಂಡಿಲಿನಿಂದ ರೋಹಿತ ತಲೆ ಸವರುತ್ತಾ ಸಮಾಧಾನ ಮಾಡುವಲ್ಲಿ ಯಶಸ್ವಿಯಾದವು. ಅಲ್ಲದೆ, ತಮ್ಮೊಂದಿಗೆ ಅರಮನೆಯತ್ತ ಕರೆದೊಯ್ದರು.

ತಾಲೀಮಿನ ವೇಳೆ ಸಿಡಿಮದ್ದಿನ ಶಬ್ದಕ್ಕೆ ಧನಂಜಯ ಹೆದರಿತು. ಅದಕ್ಕೆ ಕಬ್ಬು ನೀಡಿ ಸಮಾಧಾನ ಮಾಡಲಾಯಿತು. ಇದರೊಂದಿಗೆ ಸುಗ್ರೀವ, ಪ್ರಶಾಂತ ಹಾಗೂ ಹಿರಣ್ಯ ವರ್ತನೆಯಲ್ಲೂ ವ್ಯತ್ಯಾಸ ಕಂಡುಬಂದಿತು. ಈ ಆನೆಗಳು ಸಿಡಿಮದ್ದಿನ ಸದ್ದಿಗೆ ಸ್ವಲ್ಪ ಪ್ರಮಾಣದಲ್ಲಿ ಬೆಚ್ಚಿದವು.

ನಿಯಂತ್ರಣ ಕಳೆದುಕೊಂಡ ಕುದುರೆಗಳು: ಅಶ್ವಪಡೆಯ ಕೆಲವು ಕುದುರೆಗಳು ಸಿಡಿಮದ್ದಿನ ಶಬ್ದಕ್ಕೆ ಬೆದರಿದವು. ಒಂದೆಡೆ ಆನೆ ರೋದಿಸುತ್ತಿದ್ದರೆ, ಮತ್ತೊಂದೆಡೆ 4–5 ಕುದುರೆಗಳು ಮುಸುಕಾಡಿದವು. ಅವುಗಳನ್ನು ನಿಯಂತ್ರಿಸಲು ಮೌಂಟೆಡ್ ಪೊಲೀಸರು ಹರಸಾಹಸ ಪಡಬೇಕಾಯಿತು.

ಫಿರಂಗಿ ದಳದ ಚಾಕಚಕ್ಯತೆ: ಕಳೆದೊಂದು ವಾರದಿಂದ ಒಣ ತಾಲೀಮು ಮಾಡಿದ್ದ ಫಿರಂಗಿದಳದ ಸಿಬ್ಬಂದಿಗಳು ಮೊದಲ ತಾಲೀಮಿನಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. 7 ಫಿರಂಗಿಗಳ ಸಿಬ್ಬಂದಿ ಪರಸ್ಪರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ, ಯಶಸ್ವಿಯಾಗಿ ಸಿಡಿಮದ್ದು ಸಿಡಿಸಿದರು. ಈ ಸಂದರ್ಭದಲ್ಲಿ ಡಿಸಿಎಫ್ ಸೌರಭ್ ಕುಮಾರ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ರಂಗರಾಜು, ಅಕ್ರಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂಸದ ಪ್ರತಾಪ್ ಸಿಂಹರ ತಹಬದಿಗೆ ತರುವಂತೆ ವರಿಷ್ಠರಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ಪದಾಧಿಕಾರಿಗಳ ಆಗ್ರಹ



ಮೈಸೂರು, ಅ.11–ಸಂಸದ ಪ್ರತಾಪ್ ಸಿಂಹ ಅವರು ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿ ಹೇಳಿಕೆಗಳನ್ನು ನೀಡುತ್ತಿರುವ ಜೊತೆಗೆ ಶೋಷಿತ ಸಮುದಾಯಗಳ ಸ್ವಾಭಿಮಾನವನ್ನು ಕೆಣಕುತ್ತಿರುವುದನ್ನು ಖಂಡಿಸುವುದಾಗಿ ಹೇಳಿದ ಬಿಜೆಪಿ ಎಸ್ಸಿ ಮೋರ್ಚಾ ಪದಾಧಿಕಾರಿಗಳು, ಈ ಬಗ್ಗೆ ಪಕ್ಷದ ವರಿಷ್ಠರು ಮಧ್ಯೆ ಪ್ರವೇಶಿಸಿ ಪ್ರತಾಪ್ ಸಿಂಹ ಅವರನ್ನು ತಹಬದಿಗೆ ತರಬೇಕೆಂದು ಆಗ್ರಹಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ನಗರ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಸಿ.ಈಶ್ವರ್, ಎಲ್ಲಾ ವರ್ಗಗಳೂ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ಮುಕ್ತವಾಗಿ ನಡೆಸಲು ಸಂವಿಧಾನ ಅವಕಾಶ ಕೊಟ್ಟಿದ್ದರೂ, ಸಂಸದರು ಶೋಷಿತ ಹಾಗೂ ಹಿಂದುಳಿದ ವರ್ಗಗಳ ಭಾವನೆಗಳನ್ನು ಕೆಣಕುವ ಹೇಳಿಕೆಗಳನ್ನು ನೀಡುವ ಮೂಲಕ ಈ ವರ್ಗಗಳ ಸಂವಿಧಾನದತ್ತವಾದ ಹಕ್ಕನ್ನು ಕಿತ್ತುಕೊಳ್ಳಲು ಹುನ್ನಾರ ನಡೆಸುತ್ತಿರುವುದು ಖಂಡನೀಯ ಎಂದರು.

ಒಂದು ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಅಸಂವಿಧಾನಿಕ ಪದಗಳನ್ನು ಬಳಸುವ ಮೂಲಕ ಪ್ರತಾಪ್ ಸಿಂಹ ತಮ್ಮ ಸ್ಥಾನಕ್ಕೆ ತಾವೇ ಕುತ್ತು ತಂದುಕೊಳ್ಳುತ್ತಿದ್ದಾರೆ ಎಂದ ಅವರು, ಹಿಂದುಳಿದ ಸಮುದಾಯಗಳ ಮಾನಸಿಕ ಸ್ಥೈರ್ಯ ಕುಗ್ಗಿಸುವ ಹೇಳಿಕೆಗಳನ್ನು ನೀಡಿರುವುದು ಹಾಗೂ ದಲಿತರ ಹೆಗ್ಗುರುತಾಗಿರುವ ಅಶೋಕಪುರಂ, ದಲಿತ ನಾಯಕರ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನಾರ್ಹ ಎಂದು ಹೇಳಿದರು.

ಸಂಸದರ ಇಂತಹ ನಡವಳಿಕೆಗಳಿಂದ ಪಕ್ಷಕ್ಕೆ ತುಂಬಲಾರದ ನಷ್ಟವಾಗಲಿದೆ. ಪಕ್ಷದಲ್ಲಿರುವ ಪರಿಶಿಷ್ಟ ಜಾತಿಯ ಹಿರಿಯ ಕಾರ್ಯಕರ್ತರು ಮುಜುಗರ ಹಾಗೂ ನೋವು ಅನುಭವಿಸುವಂತಾಗಿದೆ. ಇವರ ನಡವಳಿಕೆ ಹೀಗೇ ಮುಂದುವರಿದರೆ ಪಕ್ಷ ಸಂಕಷ್ಟಕ್ಕೆ ಸಿಲುಕುವ ಅಪಾಯವಿರುವುದರಿಂದ ವರಿಷ್ಠರು ಪ್ರತಾಪ್ ಸಿಂಹ ಅವರನ್ನು ತಹಬದಿಗೆ ತರಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಎಂ.ನರಸಿಂಹಮೂರ್ತಿ, ಉಪಾಧ್ಯಕ್ಷರಾದ ನಾಗರಾಜು ಬಿಲ್ಲಯ್ಯ, ಸತ್ಯಪ್ರಕಾಶ್, ಮಾಜಿ ಕಾರ್ಪೊರೇಟರ್ ಪಿ.ಟಿ.ಕೃಷ್ಣ, ಮುಡಾ ಮಾಜಿ ಸದಸ್ಯ ವಿಶ್ವೇಶ್ವರಯ್ಯ, ಕೆ.ಆರ್.ಕ್ಷೇತ್ರ ಎಸ್ಸಿ ಮೋರ್ಚಾ ಅಧ್ಯಕ್ಷ ಜೆ.ರವಿ, ಪ್ರಧಾನ ಕಾರ್ಯದರ್ಶಿ ರಾಜು, ವಾರ್ಡ್ ಅಧ್ಯಕ್ಷರಾದ ಮಧುಸೂದನ್, ದೀಪುಕುಮಾರ್, ಮುಖಂಡರಾದ ರಾಜಣ್ಣ, ರಾಜೇಶ್ ಉಪಸ್ಥಿತರಿದ್ದರು.

ಮಹಿಳೆಯರು ಸಾಧಕರಾಗಲು ಪುರುಷರ ಸಹಕಾರ ಅತ್ಯವಶ್ಯ

ಡಾ.ಎ.ಎನ್.ರಾಜೇಂದ್ರ ಅಭಿಮತ



ಮೈಸೂರು, ಅ. 11– ಮಹಿಳೆಯರು ಸಾಧಕರಾಗಿ ಹೊರ ಹೊಮ್ಮಲು ಪುರುಷರ ಸಹಕಾರ ಅತ್ಯವಶ್ಯ ಎಂದು ವಿಷನ್ ಆಸ್ಪತ್ರೆಯ ಮಕ್ಕಳ ತಜ್ಞ ಡಾ. ಎ.ಎನ್. ರಾಜೇಂದ್ರ ಅಭಿಪ್ರಾಯಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಪ್ರಯುಕ್ತ ಐಕ್ಯೂಎಸಿ ಸಮಾನ ಅವಕಾಶಗಳ ಕೋಶ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಹೆಣ್ಣು ತನ್ನದೇ ಆದ ಕ್ಷೇತ್ರದಲ್ಲಿ ಯಶಸ್ಸು ಸಾಧಿಸುವ ಮೊದಲು ಅದರ ಬಗ್ಗೆ ಕನಸು ಕಂಡು, ಧನಾತ್ಮಕವಾಗಿ ಚಿಂತಿಸಿ ಗುರಿ ಮುಟ್ಟಬೇಕು ಎಂದರು.

ವಿಷನ್ ಆಸ್ಪತ್ರೆಯ ಮಕ್ಕಳ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ.ರವೀಶ್ ಮಾತನಾಡಿ, ಹದಿಹರೆಯದ ವಯಸ್ಸಿನಲ್ಲಿ ಹೆಣ್ಣು ಮಕ್ಕಳು ದುಶ್ಚಟಗಳಿಂದ ದೂರವಾಗಿ ಉತ್ತಮ ಸ್ನೇಹಿತರ ಒಡನಾಟ ಹೊಂದಿದರೆ ಜೀವನ ಸುಗಮವಾಗುತ್ತದೆ. ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಮಾಜದಲ್ಲಿ ಸೂಕ್ತ ಸ್ಥಾನಮಾನ ನೀಡಿದರೆ ಸುಭದ್ರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಮಕ್ಕಳ ನರರೋಗ ತಜ್ಞರಾದ ಡಾ. ಅನುಷ ಕೆ.ರಾಜ್ ಮಾತನಾಡಿ, ಹೆಣ್ಣು ಬುದ್ಧಿವಂತಳಾಗಿ ಜಾಗೃತಳಾಗಬೇಕಾದರೆ ಅದಕ್ಕೆ ಶಿಕ್ಷಣ ಅತೀ ಮುಖ್ಯ. ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಡಾ.ಭಾರತಿ ಅವರು ರಾಷ್ಟ್ರಪತಿ ಪದಕ ಪಡೆಯಲು ಶಿಕ್ಷಣವೇ ಕಾರಣವಾಗಿತ್ತು ಎಂದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ಮರೀಗೌಡ ಅಧ್ಯಕ್ಷತೆ ವಹಿಸಿದ್ದರು.


ಬನ್ನಿಮಂಟಪ, ಹನುಮಂತನಗರ, ಹುಡ್ಕೋ ಪ್ರದೇಶ, ಸಿ–ಲೇಔಟ್, ಹಲೀಮ್‌ನಗರಗಳ ರಸ್ತೆ, ವೃತ್ತಗಳಲ್ಲಿ ದೀಪಾಲಂಕಾರಕ್ಕೆ ಮನವಿ



ಮೈಸೂರು,ಅ. 11– ಮೈಸೂರಿನ ಬನ್ನಿಮಂಟಪ ಹಿಂಭಾಗದ ಪ್ರದೇಶ, "ಸಿ" ಲೇಔಟ್, ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ವೃತ್ತ, ಮುಖ್ಯ ರಸ್ತೆ, ಹುಡ್ಕೋ ಮುಖ್ಯ ರಸ್ತೆ, ಶ್ರೀನಿವಾಸ ಸರ್ಕಲ್, ಹಲೀಮ್ ನಗರ, ಕೆಎಸ್‌ಆರ್‌ಟಿಸಿ ಬ್ಲಾಕ್, ಇಂಡಸ್ಟ್ರಿಯಲ್ ಏರಿಯಾ ಎ ಬ್ಲಾಕ್, ಅನೇಕ ಫ್ಯಾಕ್ಟರಿಗಳು ಇರುವ ಈ ಪ್ರದೇಶಗಳಲ್ಲಿ ಸಾವಿರಾರು ಜನರು ವಾಸಿಸುತ್ತಿದ್ದಾರೆ. ಪ್ರತಿನಿತ್ಯ ಈ ರಸ್ತೆಗಳಲ್ಲಿ ಸಂಚರಿಸುತ್ತಿದ್ದು, ಈ ಪ್ರದೇಶಗಳಲ್ಲಿ ದಸರಾ ಸಂದರ್ಭದಲ್ಲಿ ದೀಪಾಲಂಕಾರವನ್ನು ಮಾಡದೇ ಕಡೆಗಣಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಶಾಸಕ ತನ್ವೀರ್ ಸೇಠ್, ಜಿಲ್ಲಾ ಆಡಳಿತ ಮತ್ತು ಮೈಸೂರು ದಸರಾ ಮಹೋತ್ಸವ ದೀಪಾಲಂಕಾರ ಉಪಸಮಿತಿ, ಆಫೀಸರ್, ಕಾರ್ಯಾಧ್ಯಕರು, ಸೆಸ್ಕ್ ಅಧೀಕ್ಷಕ ಇಂಜಿನಿಯರ್, ಸೆಸ್ಕ್ ಎನ್.ಆರ್. ಮೊಹಲ್ಲಾ ಕಾರ್ಯಪಾಲಕ ಅಭಿಯಂತರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ, ದೀಪಾಲಂಕಾರಕ್ಕೆ ಟೆಂಡರ್ ಕರೆಯುವ ಮುನ್ನ ಈ ಬಗ್ಗೆ ಪರಿಶೀಲಿಸಿ, ದಸರಾ ಸಂದರ್ಭದಲ್ಲಿ ದೀಪಾಲಂಕಾರ ಮಾಡಬೇಕೆಂದು, ಬನ್ನಿಮಂಟಪ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಸ್.ಕೆ. ಮುದಾಸಿರ್ ಪಾಷ, ಟ್ರಸ್ಟಿಗಳಾದ ಸೈಯದ್ ಮಸೂದ್, ಸಲೀಂ, ಮುದಸಿರ್ ಜಮೀಲ್, ಅಬ್ದುಲ್ ಶಕೂರ್ ಮನವಿ ಮಾಡಿದ್ದಾರೆ.

ಹೆಣ್ಣು ಚಿರತೆ ಕಳೇಬರ ಪತ್ತೆ

ಅಪಘಾತದಲ್ಲಿ ಸಾವಿನ ಶಂಕೆ



ಮೈಸೂರು,ಅ.11(ಎಂಟಿವೈ)–ಸರಗೂರು ತಾಲೂಕಿನ ಮುಳ್ಳೂರು–ಹೆಡಿಯಾಲ ಸಂಪರ್ಕ ರಸ್ತೆಯ ಚಂಗೌಡನಹಳ್ಳಿ ಸಮೀಪದ ಜಮೀನೊಂದರಲ್ಲಿ 4 ವರ್ಷದ ಹೆಣ್ಣು ಚಿರತೆ ಕಳೇಬರ ಪತ್ತೆಯಾಗಿದೆ. ಇದನ್ನು ಗಮನಿಸಿದ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ರಸ್ತೆ ದಾಟುವಾಗ ಅಪರಿಚಿತ ವಾಹನ ಡಿಕ್ಕಿ ಹೊಡೆದಿರುವ ಶಂಕೆ ವ್ಯಕ್ತವಾಗಿದೆ. ವಾಹನ ಡಿಕ್ಕಿ ಹೊಡೆದು ಗಾಯಗೊಂಡ ಚಿರತೆ ರಸ್ತೆ ಪಕ್ಕದ ಜಮೀನಿನಲ್ಲಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವೈದ್ಯಾಧಿಕಾರಿ ಡಾ. ಮಿರ್ಜಾ ವಾಸೀಮ್ ಚಿರತೆ ಮರಣೋತ್ತರ ಪರೀಕ್ಷೆ ನಡೆಸಿದರು. ಈ ಸಂದರ್ಭದಲ್ಲಿ ಹೆಡಿಯಾಲ ಆರ್‌ಎಫ್‌ಓ ನಾರಾಯಣ್ ಹಾಗೂ ಇನ್ನಿತರರು ಇದ್ದರು.

ಅ.18ರವರೆಗೆ ಉಚಿತ ತಪಾಸಣಾ, ಸಲಹಾ ಶಿಬಿರ

ಮೈಸೂರು,ಅ.11–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಅ.18ರವರೆಗೆ ಪೈಲ್ಸ್, ಮೂಲವ್ಯಾಧಿ, ಪಿಸ್ತುಲ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ, ಸಲಹಾ ಶಿಬಿರ ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ.9663591100, ದೂ. 0821–2548231 ಸಂಪರ್ಕಿಸಬಹುದು.

ಸ್ವಾತಂತ್ರ್ಯ ಹೋರಾಟಗಾರ ಸಿ.ಆರ್.ರಂಗಶೆಟ್ಟಿ ನಿಧನ



ಮೈಸೂರು, ಅ.11– ಮೈಸೂರು ದೇವಾಂಬ ಅಗ್ರಹಾರ ನಿವಾಸಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸಿ.ಆರ್.ರಂಗಶೆಟ್ಟಿ(98) ಮಂಗಳವಾರ ನಿಧನರಾದರು. ಮೃತರು, ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದತಪ್ಪಲಿನಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಸಂತಾಪ ಸೂಚಿಸಿದ್ದಾರೆ.

ಮುಂದುವರೆದ ಕಾವೇರಿ ಕ್ರಿಯಾ ಸಮಿತಿ ಧರಣಿ



ಮೈಸೂರು, ಅ.11(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವುದನ್ನು ವಿರೋಧಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಟೌನ್‌ಹಾಲ್ ಮುಂಭಾಗ ನಡೆಸುತ್ತಿರುವ ಪ್ರತಿಭಟನಾ ಧರಣಿ ಮುಂದುವರೆದಿದ್ದು, ಕರ್ನಾಟಕ ರಕ್ಷಣಾ ಪರಿಷತ್, ರಾಜ್ಯ ಅಸಂಘಟಿತ ಕಾರ್ಮಿಕರ ಸಂಘಟನೆ ಮತ್ತು ಮಂಡ್ಯದ ರೈತ ಮುಖಂಡರು ಬೆಂಬಲ ಸೂಚಿಸಿದರು.

ಕೂಡಲೇ ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ಇಲ್ಲವಾದರೆ, ಶಾಂತಿಯುತವಾಗಿ ನಡೆಯುತ್ತಿರುವ ಪ್ರತಿಭಟನೆ ಕ್ರಾಂತಿಯ ರೂಪ ಪಡೆದುಕೊಳ್ಳಲಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾವೇರಿ ಕಣಿವೆ ಭಾಗದ ಜನತೆ ಉತ್ತರ ನೀಡಲಿದ್ದಾರೆ. ತಮಿಳುನಾಡು ಕಾವೇರಿ ಕಣಿವೆಯ ವಸ್ತುಸ್ಥಿತಿ ತಿಳಿದಿದ್ದರೂ ನಮಗೆ ನೀರು ಬಿಡಿ ಎಂದು ಹಠ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ರಾಜ್ಯದಲ್ಲಿ ಸೂಕ್ತ ಮಳೆಯಾಗದೆ ಬರಗಾಲ ಆವರಿಸಿದ್ದರೂ ಸರ್ಕಾರ ರೈತರ ನೆರವಿಗೆ ಧಾವಿಸದೆ ನಿರ್ಲಕ್ಷ್ಯವಹಿಸಿದೆ. ತಮಿಳುನಾಡು ಸರ್ಕಾರದ ಒತ್ತಡಕ್ಕೆ ಮಣಿದು ರಾಜ್ಯವನ್ನು ಬಲಿಕೊಡಲಾಗುತ್ತಿದೆ. ಆದ್ದರಿಂದ ದಸರಾ ಮಹೋತ್ಸವ ಉದ್ಘಾಟನೆಗೂ ಮುನ್ನ ಮುಖ್ಯಮಂತ್ರಿಗಳು ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಗೌರವ ಕಾರ್ಯದರ್ಶಿ ಮೆಲ್ಲಹಳ್ಳಿ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಮೋಹನ್‌ಕುಮಾರ್‌ಗೌಡ, ಮಹದೇವಸ್ವಾಮಿ, ಬಾಲಕೃಷ್ಣ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸವಿತಾ ಸಮಾಜದ ರಮೇಶ್ ಡೋಲು, ಶ್ರೀನಿವಾಸ್, ಕುಮಾರ್, ನಾಗೇಂದ್ರ, ಕರ್ನಾಟಕ ಕನ್ನಡ ಸೇನೆಯ ಶೈಲಜಾ, ಯಶೋಧ, ಸುಷ್ಮಾ, ಮಲ್ಲೇಶ್ ಮತ್ತು ಕರ್ನಾಟಕ ರಕ್ಷಣಾ ಪರಿಷತ್, ರಾಜ್ಯ ಅಸಂಘಟಿತ ಕಾರ್ಮಿಕರ ಸಂಘಟನೆ ಪದಾಧಿಕಾರಿಗಳು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ ಕಣ್ಣು, ಕಿವಿ ಇಲ್ಲ

ಮೈಸೂರು,ಅ.11–ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಕಣ್ಣು, ಕಿವಿ ಇಲ್ಲದ ಕೇವಲ ಕೂಡಿ ಕಳೆಯುವ ಸಂಸ್ಥೆಯಾಗಿದೆ ಎಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ. ಸುದರ್ಶನ ಹೇಳಿದ್ದಾರೆ.

ಮೈಸೂರಿನ ಟೌನ್ ಹಾಲ್ ಬಳಿ ಕಾವೇರಿ ಕ್ರಿಯಾ ಸಮಿತಿಯು ಕಾವೇರಿ ನೀರು ಸಂರಕ್ಷಣೆಗಾಗಿ ನಡೆಯುತ್ತಿರುವ ಧರಣಿಯಲ್ಲಿ ಭಾಗವಹಿಸಿ, ಮಾತನಾಡಿದರು. ಮೋಹನ ಕಾತರಕಿ ಅವರ ಅನಿಸಿಕೆಯನ್ನು ಆಧಾರವಾಗಿ ಹೇಳುವುದಾದರೆ ಪ್ರಾಧಿಕಾರವು ಈ ಬಾರಿ ಶೇ.56ರಷ್ಟು ಮಳೆಯ ಕೊರತೆಯಾಗಿದೆ ಎಂಬುದನ್ನು ಒಪ್ಪಿಕೊಂಡು ಅದಕ್ಕೆ ಅನುಪಾತವಾಗಿ ನೀರನ್ನು ಹಂಚಿದೆ ಎಂದು ಹೇಳಿದ್ದಾರೆ. ಇದನ್ನು ನೋಡಿದಾಗ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕಣ್ಣು, ಕಿವಿ ಇಲ್ಲದ ಕೇವಲ ಕೂಡಿ ಕಳೆಯುವ, ಗುಣಿಸಿ ಭಾಗಿಸುವ ಒಂದು ಘಟಕವಾಗಿರುವಂತೆ ಕಂಡು ಬರುತ್ತಿದೆ. ಪ್ರಾಧಿಕಾರವು ಗಣಿತದ ಲೆಕ್ಕಾಚಾರದ ಮೇಲೆ ನೀರು ಹಂಚುವ ಯಾಂತ್ರಿಕ ಘಟಕವಾಗದೆ ಮಾನವೀಯತೆ, ಸಾಮಾಜಿಕ ಹಾಗೂ ಸಮಾನತೆಯ ನ್ಯಾಯವನ್ನು ಆಧರಿಸಿ ನೀರನ್ನು ಹಂಚಬೇಕು. ಜೂನ್‌ನಿಂದ ಹರಿಸುವ ಕಾವೇರಿ ನೀರು ಕರ್ನಾಟಕಕ್ಕೆ ಮೊದಲ ಬೆಳೆಗೆ ಬಳಕೆ ಆದರೆ ತಮಿಳುನಾಡಿಗೆ ಎರಡನೆಯ ಬೆಳೆಗೆ ಬಳಕೆಯಾಗುತ್ತದೆ ಎಂಬುದನ್ನು ಪ್ರಾಧಿಕಾರ ಮೊದಲು ಅರ್ಥಮಾಡಿಕೊಳ್ಳಬೇಕು ಎಂದರು.

ಜುಲೈನಲ್ಲಿ ಮೆಟ್ಟೂರಿನಲ್ಲಿ 60 ಅಡಿ ನೀರಿದ್ದಾಗ್ಯೂ, ಕರ್ನಾಟಕಕ್ಕೆ ಮೊದಲ ಬೆಳೆಗೆ ನೀರು ತಪ್ಪಿಸಿ ತಮಿಳುನಾಡಿನ ಎರಡನೆಯ ಬೆಳೆಗೆ ಸುಮಾರು 50 ಟಿಎಂಸಿಯಷ್ಟು ನೀರು ಹರಿಸಿರುವುದು ಅಕ್ಷಮ್ಯ. ಇದನ್ನು ಕರ್ನಾಟಕ ಸರ್ವೋಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿ ಪ್ರಬಲವಾಗಿ ಪ್ರತಿಪಾದಿಸಬೇಕು. ಆದರೆ ಕರ್ನಾಟಕ ಸರ್ಕಾರ ಮಧ್ಯಂತರ ಅರ್ಜಿ ಸಲ್ಲಿಸದೆ ಕೇವಲ ಅಫಿಡವಿಟ್ ಸಲ್ಲಿಸಿದೆ ಎಂಬ ಮಾಹಿತಿ ನಿಜವಾಗಿದ್ದರೆ ಅದು ಅತ್ಯಂತ ವಿಷಾದನೀಯ ಎಂದರು.

ಸಿಲಬಂನಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



ಮೈಸೂರು, ಅ.11– ಮೈಸೂರಿನ ದಟ್ಟಗಳ್ಳಿ ಬಡಾವಣೆಯಲ್ಲಿರುವ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಸಿಲಬಂ ಕ್ರೀಡಾ ಸ್ಪರ್ಧೆ ನಡೆಯಿತು.

ಈ ಸ್ಪರ್ಧೆಯಲ್ಲಿ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್ ಕಾಲೇಜಿನ ವಿದ್ಯಾರ್ಥಿಗಳು ವಿಜೇತರಾಗುವ ಮೂಲಕ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಕುಮಾರಿ ಸಿ ರಂಜಿತ, ಪ್ರಥಮ ಪಿಯುಸಿ ವಾಣಿಜ್ಯ ವಿಭಾಗದ ಕುಮಾರಿ ಪೂಜಿತ, ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ಕುಮಾರಿ ಶ್ರೀಲೋಕ್ಯ ಹಾಗೂ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಮಾಸ್ಟರ್ ಚಿರಾಗ್ ದೇವ್ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲ ರಚನ್ ಅಪ್ಪಣ್ಣಯ್ಯ, ದೈಹಿಕ ನಿರ್ದೇಶಕ ಹರೀಶ್ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.10.2023 ಗುರುವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ.ಜಿ.ಎಂ.ಹೆಗಡೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 10.00 ವಿಜಯಲಕ್ಷ್ಮಿ ಸುಬ್ರಹ್ಮಣ್ಯಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಬಾಲಾಜಿ ಶಂಕರ್, ಉಮಾ ಬಾಲು, 1.20 ಭಾವಗೀತೆ–ಸಾವಿತ್ರಿ ಪ್ರಭಾಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ–ದೊಡ್ಡಗವಿ ಬಸಪ್ಪ ಮತ್ತು ಸಂಗಡಿಗರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಭೌಗೋಳಿಕವಾಗಿ ಗುರುತಿಸಲ್ಪಟ್ಟ ಬೆಳೆಗಳ ಬೇಸಾಯ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ, 8.00 ಯುವವಾಣಿ ಇ–ವೇಸ್ಟ್ ಜಾಗೃತಿ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ–ಮೈಸೂರಿನ ಶಾರದಾ ಕಲಾ ಕೇಂದ್ರದ ವಿದ್ಯಾರ್ಥಿಗಳು ವಿದುಷಿ ರೇಖಾ ವೆಂಕಟೇಶ್, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ಬಾಳು ಬೆಳಗಿದ ಕಿರು ಕಾಮಧೇನು", ರಚನೆ–ಡಾ.ರವಿಕುಮಾರ್ ಮತ್ತು ಶಶಿಕಲಾ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ

- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಪೈಲ್ಸ್, ಮೂಲವ್ಯಾಧಿ, ಪಿಸ್ತುಲ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ, ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಹಿರಿಯ ನಾಗರಿಕ ಮಂಡಳಿ, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ :** ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಸನ್ಮಾನ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಸನ್ಮಾನಿತರು: ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಉಪಸ್ಥಿತರು: ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಅಧ್ಯಕ್ಷ ಎಸ್.ವಿ.ಗೌಡಪ್ಪ, ಅಧ್ಯಕ್ಷತೆ: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ನಾಗರಾಜು, ಸ್ಥಳ: ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ
- **ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ :** ಟಿವಿಎಸ್ ಇನ್‌ಸ್ಟಿಟ್ಯೂಟ್ ಫಾರ್ ಕ್ವಾಲಿಟಿ ಅಂಡ್ ಲೀಡರ್‌ಶಿಪ್, ಟಿವಿಎಸ್ ಮೋಟಾರ್ ಕಂಪನಿ ನಿರ್ದೇಶಕ ಡಾ. ವಿ. ಕೋವೈಚೆಲನ್ ಅವರಿಂದ ಸಂಸ್ಥಾಪಕ ದಿನದ ಉಪನ್ಯಾಸ ಕಾರ್ಯಕ್ರಮ, ಸ್ಥಳ: ಎಸ್‌ಡಿಎಂ–ಐಎಂಡಿ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ :** ಗಾಂಧಿ ಜಯಂತಿ ಪ್ರಯುಕ್ತ ಮಾವುತರ ಮಕ್ಕಳಿಗೆ ಪಠ್ಯ ಸಾಮಗ್ರಿಗಳ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ಅರಮನೆ ಒಳ ಆವರಣದಲ್ಲಿರುವ ಮಾವುತರ ಮಕ್ಕಳ ಶಾಲೆ, ಬೆಳಗ್ಗೆ 11.30ಕ್ಕೆ.
- **ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ:** ಕೌಶಲ ಘಟಿಕೋತ್ಸವ–2023, ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಮಾಣ ಪತ್ರ ವಿತರಣೆ: ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಮಧ್ಯಾಹ್ನ 2ಕ್ಕೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 108ನೇ ಜಯಂತಿ ಮಹೋತ್ಸವ, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ನುಡಿ ನಮನ : ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು ಉಪನ್ಯಾಸಕ ಹೆಚ್.ಬಿ. ಶ್ರೀಧರ್, ವಿಶೇಷ ಆಹ್ವಾನಿತರು : ಚಲನಚಿತ್ರ ನಟ ಸುಪ್ರೀತ್, ಅಖಿಲ ಕರ್ನಾಟಕ ವೀರಶೈವ ಲಿಂಗಾಯತ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಎಲ್. ರುದ್ರಮೂರ್ತಿ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಸಮಾಜ ಸೇವಕರಾದ ಶ್ರೀಮತಿ ವಿದ್ಯಾ, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.
- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್:** ವಿದುಷಿ ಎಂ.ಎ.ಜ್ಯೋತಿ ಅವರಿಂದ ಗಾಯನ ಕಾರ್ಯಕ್ರಮ, ವಿದುಷಿ ಸಿ.ವಿ.ಶ್ರುತಿ–ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್ –ಮೃದಂಗ, ವಿದ್ವಾನ್ ಎಸ್.ದಾಸಪ್ಪ–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಕುವೆಂಪುನಗರ, ಸಂಜೆ 6 ಗಂಟೆಗೆ
- **ಚಿನ್ಮಯ ಮಿಷನ್:** ಗೀತಾ ಜ್ಞಾನ ಯಜ್ಞ, ಧರ್ಮಸಂಸ್ಥಾನ ಯೋಗ (ಭಗವದ್ಗೀತೆಯ 5ನೇ ಅಧ್ಯಾಯ), ಸ್ವಾಮಿ ದತ್ತಪಾದಾನಂದ ಅವರಿಂದ ಸ್ಥಳ: ಚಿನ್ಮಯ ಮಿಷನ್, ವಿದ್ಯಾರಣ್ಯಪುರಂ, ಸಂಜೆ 6.30ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಶ್ರೀ ಕಪಿಲಾಚಾರ್ಯ ಹಲಗಲಿ ಅವರಿಂದ ಭಗವದ್ಗೀತೆ 12ನೇ ಅಧ್ಯಯನ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ಶ್ರೀ ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಭಗವದ್ಗೀತಾ ಅಭಿಯಾನ, ಪಂ. ಶ್ರೀ ಕಪಿಲಾಚಾರ್ಯ ಗಲಗಲಿ ಅವರಿಂದ ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿದಾನ, ಶ್ರೀ ಉತ್ತರಾಧಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರಲ್ಲಿ ಜಂಬೋ ಸರ್ಕಸ್



ಮೈಸೂರು, ಅ.11– ಮೈಸೂರಲ್ಲಿ ದಸರಾ ಸಂಭ್ರಮಕ್ಕೆ ಜಂಬೋ ಸರ್ಕಸ್ ಮತ್ತಷ್ಟು ಮೆರಗು ನೀಡಲಿದೆ. 40 ದಿನಗಳ ಸರ್ಕಸ್‌ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅ.13ರ ಸಂಜೆ 6.30ಕ್ಕೆ ನಜರ್‌ಬಾದ್‌ನ ಕಾರಂಜಿ ಕೆರೆ ಬಳಿ (ಮೃಗಾಲಯದ ಹಿಂಭಾಗ)ಯ ಹಾರ್ಸ್ ಪಾರ್ಕ್ ಮೈದಾನದಲ್ಲಿ ಚಾಲನೆ ನೀಡಲಿದ್ದಾರೆ. ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಕಾರ್ಪೊರೇಟರ್ ಛಾಯಾದೇವಿ ಮುಖ್ಯ ಅತಿಥಿಗಳಾಗಿರುವರು. ಉದ್ಘಾಟನಾ ಪ್ರದರ್ಶನ ಅಂದು ಸಂಜೆ 7 ಗಂಟೆಗೆ ಇದೆ. ಪ್ರತಿ ದಿನ ಮಧ್ಯಾಹ್ನ 1 ಗಂಟೆ, ಅಪರಾಹ್ನ 4 ಹಾಗೂ ಸಂಜೆ 7 ಗಂಟೆಗೆ –ಹೀಗೆ 3 ಪ್ರದರ್ಶನವಿರಲಿದೆ.


ಇಂದು ನವೀಕೃತ ಫೌಂಟನ್ ಸರ್ಕಲ್ ಉದ್ಘಾಟನೆ

ಮೈಸೂರು,ಅ.11(ಆರ್‌ಕೆ)–ನವೀಕೃತಗೊಂಡಿರುವ ಮೈಸೂರಿನ ಫೌಂಟನ್ ಸರ್ಕಲ್ ಅನ್ನು ನಾಳೆ(ಅ.12) ಸಂಜೆ 6 ಗಂಟೆಗೆ ಉದ್ಘಾಟಿಸಲಾಗುವುದು. ಝುಡ್ ಮಾರ್ಕ್ ಕಂಪನಿಯವರು ಅಭಿವೃದ್ಧಿಪಡಿಸಿ ಸಂರಕ್ಷಿಸಿರುವ ಮೈಸೂರು–ಬೆಂಗಳೂರು ರಸ್ತೆಯ ಫೌಂಟನ್ ವೃತ್ತವನ್ನು ಮೈಸೂರು ಮಹಾನಗರಪಾಲಿಕೆ ಆಯುಕ್ತರು ಹಾಗೂ ಕಾರ್ಪೊರೇಟರ್‌ಗಳು ಗುರುವಾರ ಸಂಜೆ 6 ಗಂಟೆಗೆ ಉದ್ಘಾಟಿಸುವರು ಎಂದು ಕಂಪನಿಯ ಮೈಸೂರು ಕೇಂದ್ರದ ಮುಖ್ಯಸ್ಥರು ತಿಳಿಸಿದ್ದಾರೆ.



ಸರ್ಕಲ್‌ನ ಕಾರಂಜಿಯ ಎರಡೂ ಬದಿಯಲ್ಲಿ ಗಾರ್ಡನ್ ಮಾಡಿ ಕಬ್ಬಿಣದ ಗ್ರಿಲ್ ಅಳವಡಿಸಿ ಪೇಂಟಿಂಗ್ ಮಾಡಲಾಗಿದ್ದು, ಬೆಂಗಳೂರು ಕಡೆಯಿಂದ ಬರುವವರ ಮನಸೆಳೆಯುತ್ತಿರುವ ಫೌಂಟನ್ ಸ್ವಾಗತಿಸುತ್ತಿದೆ. ದಸರಾ ಮಹೋತ್ಸವ ಉದ್ಘಾಟನೆಗೂ ಮುನ್ನ ಈ ನವೀಕೃತ ಪಾರಂಪರಿಕ ಸರ್ಕಲ್ ಉದ್ಘಾಟನೆಯಾಗುತ್ತಿರುವುದು ಮೈಸೂರಿನ ಸೌಂದರ್ಯಕ್ಕೆ ಮೆರಗು ನೀಡಿದೆ.

ಮಾಜಿ ಸಿಎಂ ಚಂದ್ರಬಾಬು ನಾಯ್ಡುಗೆ ಜಾಮೀನು



ಹೈದರಾಬಾದ್: ಆಂಧ್ರಪ್ರದೇಶದ ಮಾಜಿ ಸಿಎಂ ಚಂದ್ರಬಾಬು ನಾಯ್ಡು ಅವರಿಗೆ ಆಂಧ್ರಪ್ರದೇಶ ಹೈಕೋರ್ಟ್ ಬುಧವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಅಮರಾವತಿ ಇನ್ನರ್ ರಿಂಗ್ ರೋಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಚಂದ್ರಬಾಬು ನಾಯ್ಡುಗೆ ಜಾಮೀನು ನೀಡಲಾಗಿದೆ. ಚಂದ್ರಬಾಬು ನಾಯ್ಡು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ವಾದ ಆಲಿಸಿದ ನ್ಯಾಯಾಲಯ ತಾತ್ಕಾಲಿಕ ಜಾಮೀನು ಮಂಜೂರು ಮಾಡಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅ.16ರವರೆಗೆ ಚಂದ್ರಬಾಬು ನಾಯ್ಡು ಅವರನ್ನು ಬಂಧಿಸದಂತೆ ನ್ಯಾಯಾಲಯ ಮಧ್ಯಂತರ ಆದೇಶವನ್ನು ನೀಡಿದೆ.

ಇನ್ನು ಅಂಗಲ್ಲು ಹಿಂಸಾಚಾರ ಪ್ರಕರಣದಲ್ಲಿ ನಾಳೆವರೆಗೆ ಯಾರನ್ನೂ ಬಂಧಿಸದಂತೆ ಸಿಐಡಿಗೆ ನ್ಯಾಯಾಲಯ ಸೂಚನೆ ನೀಡಿದೆ. ಸಿಐಡಿ ವಿಜಯವಾಡ ಎಸಿಬಿ ನ್ಯಾಯಾಲಯ ಸಲ್ಲಿಸಿದ್ದ ಇನ್ನರ್ ರಿಂಗ್ ರೋಡ್ ಅರ್ಜಿಗೆ ಹೈಕೋರ್ಟ್ ತಡೆ ನೀಡಿದೆ. 2014–19ರ ಅವರ ಅವಧಿಯಲ್ಲಿ ಇವರು ನೇತೃತ್ವದಲ್ಲಿ ಸರ್ಕಾರ ಆಂಧ್ರ ಪ್ರದೇಶ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಬಹುಕೋಟಿ ಹಗರಣವನ್ನು ನಡೆಸಿದೆ ಎಂದು ಆರೋಪಿಸಿ, ಸೆಪ್ಟೆಂಬರ್ 9ರಂದು ನಂದ್ಯಾಲ್‌ನಿಂದ ರಾಜ್ಯ ಸಿಐಡಿ ಬಂಧಿಸಿತ್ತು. ನಂತರ ಚಂದ್ರಬಾಬು ನಾಯ್ಡು ಅಮರಾವತಿ ಇನ್ನರ್ ರಿಂಗ್ ರೋಡ್, ಫೈಬರ್ ನೆಟ್ ಮತ್ತು ಅಂಗಲ್ಲು ಹಿಂಸಾಚಾರ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಸಲ್ಲಿಸಿದ್ದರು.

ಇಸ್ರೇಲ್‌ನಿಂದ ಭಾರತೀಯರನ್ನು ಕರೆತರಲು 'ಆಪರೇಷನ್ ಅಜಯ' ಆರಂಭಿಸಿದ ಭಾರತ



ನವದೆಹಲಿ: ಯುದ್ಧ ಪೀಡಿತ ಇಸ್ರೇಲ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಮರಳಿ ಕರೆತರಲು 'ಆಪರೇಷನ್ ಅಜಯ'ವನ್ನು ಪ್ರಾರಂಭಿಸುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ ಪ್ರಕಟಿಸಿದ್ದಾರೆ. ವಿಶೇಷ ಚಾರ್ಟರ್ ವಿಮಾನಗಳು ಮತ್ತು ಇತರ ವ್ಯವಸ್ಥೆಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಇಸ್ರೇಲ್‌ನಿಂದ ಹಿಂದಿರುಗಲು ಬಯಸುವ ನಮ್ಮ ನಾಗರಿಕರಿಗೆ ಮರಳಲು ಅನುಕೂಲವಾಗುವಂತೆ 'ಆಪರೇಷನ್ ಅಜಯ' ಪ್ರಾರಂಭಿಸಲಾಗುತ್ತಿದೆ. ವಿಶೇಷ ಚಾರ್ಟರ್ ವಿಮಾನಗಳು ಮತ್ತು ಇತರ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ವಿದೇಶದಲ್ಲಿರುವ ನಮ್ಮ ಪ್ರಜೆಗಳ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಮುಂಬೈನಲ್ಲಿರುವ ಇಸ್ರೇಲ್‌ನ ಕಾನ್ಸುಲ್ ಜನರಲ್ ಕೊಬ್ಬಿ ಶೋಶಾನಿ ಅವರು ಇಸ್ರೇಲಿನಲ್ಲಿ 20,000ಕ್ಕೂ ಹೆಚ್ಚು ಭಾರತೀಯರು ವಾಸಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಪ್ರಸ್ತುತ ಇಸ್ರೇಲ್ ಹಾಗೂ ಪ್ಯಾಲೆಸ್ತೀನ್ ಗುಂಪು ಹಮಾಸ್ ನಡುವೆ ಯುದ್ಧ ನಡೆಯುತ್ತಿದೆ. ಇಸ್ರೇಲ್‌ನಲ್ಲಿ ಸಿಲುಕಿರುವ ಭಾರತೀಯರ ನಿಖರವಾದ ಸಂಖ್ಯೆ ತನಗೆ ತಿಳಿದಿಲ್ಲ ಎಂದು ಶೋಶಾನಿ ಹೇಳಿದರು.

ಮಂಗಳವಾರ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಜೈಶಂಕರ ಅವರಿಗೆ ಪತ್ರ ಬರೆದು ರಾಜ್ಯದ ಸುಮಾರು 7,000 ಜನರು ಇಸ್ರೇಲ್‌ನಲ್ಲಿದ್ದಾರೆ ಮತ್ತು ಅವರ ಸುರಕ್ಷತೆಗಾಗಿ ಮಧ್ಯಪ್ರವೇಶಿಸಲು ಕೋರಿದ್ದಾರೆ.

ರಾಜಸ್ಥಾನದಲ್ಲಿ ನವೆಂಬರ್ 25ಕ್ಕೆ ಮತದಾನ

ನವದೆಹಲಿ: ಭಾರತೀಯ ಚುನಾವಣಾ ಆಯೋಗ ರಾಜಸ್ಥಾನ ವಿಧಾನಸಭಾ ಚುನಾವಣೆಯ ದಿನಾಂಕವನ್ನು ನ.23ರಿಂದ ನ.25ಕ್ಕೆ ಶನಿವಾರ ಬದಲಾಯಿಸಿದೆ.

ನ.23ರಂದು ಮದುವೆ, ಸಾಮಾಜಿಕ ನಿಶ್ಚಿತಾರ್ಥದಂತಹ ಕಾರ್ಯಕ್ರಮಗಳು ಹೆಚ್ಚಾಗಿರುವುದರಿಂದ ಜನರಿಗೆ ಅನಾನುಕೂಲತೆ ಉಂಟಾಗಬಹುದು, ಚುನಾವಣೆ ವೇಳೆಯಲ್ಲಿ ಜನರು ಮತದಾನದಲ್ಲಿ ಭಾಗವಹಿಸದೆ ಮತದಾನ ಪ್ರಮಾಣ ಕಡಿಮೆಯಾಗಬಹುದೆಂದು ವಿವಿಧ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ವಿವಿಧ ಮಾಧ್ಯಮ ವೇದಿಕೆಗಳಲ್ಲಿ ಅಭಿಪ್ರಾಯ ಕೇಳಿಬಂದಿತ್ತು. ಇವುಗಳನ್ನು ಪರಿಗಣಿಸಿ ಚುನಾವಣಾ ದಿನಾಂಕವನ್ನು ಬದಲಾಯಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ಎಲ್ಲಾ ಅಂಶಗಳು ಮತ್ತು ಆದ್ಯತೆಗಳನ್ನು ಪರಿಗಣಿಸಿದ ಆಯೋಗವು, ನ.23, (ಗುರುವಾರ)ರಿಂದ ನ.25, 2023 (ಶನಿವಾರ) ಕ್ಕೆ ಮತದಾನದ ದಿನಾಂಕವನ್ನು ಬದಲಾಯಿಸಲು ನಿರ್ಧರಿಸಿದೆ. ಡಿ.3ರಂದು ಮತ ಎಣಿಕೆ ನಡೆಯಲಿದೆ.

ಚುನಾವಣಾ ಆಯೋಗವು ಮಿಜೋರಾಂ, ಛತ್ತೀಸ್‌ಗಢ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ತೆಲಂಗಾಣ ವಿಧಾನಸಭೆ ಚುನಾವಣೆ ವೇಳಾಪಟ್ಟಿಯನ್ನು ಸೋಮವಾರ ಪ್ರಕಟಿಸಿತ್ತು. ಈ ಹಿಂದೆ ರಾಜಸ್ಥಾನದಲ್ಲಿ ನ.23ರಂದು ವಿಧಾನಸಭೆ ಚುನಾವಣೆ ನಡೆಯಲಿದೆ ಎಂದು ಆಯೋಗ ತಿಳಿಸಿತ್ತು.

ಜೈನ ಬ್ರಾಹ್ಮಣ ಸಮಾಜದ ಪದಾಧಿಕಾರಿಗಳ ಆಯ್ಕೆ

ಮೈಸೂರು, ಅ.11(ಎಸ್‌ಪಿಎನ್)– ಜೈನ ಬ್ರಾಹ್ಮಣ ಸಮಾಜದ 2023–28ನೇ ಸಾಲಿನ ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಿದ್ದ 12 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕೊ.ಸು.ನರಸಿಂಹಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯಕಾರಿ ಸಮಿತಿಗೆ ಎನ್.ಜ್ಞಾನಚಂದ್ರ, ಬಿ.ಎಸ್.ದೇವಚಂದ್ರ, ಬಿ.ಎಸ್.ವಿಜಯಭಾಸ್ಕರ್, ಎಂ.ಎಸ್.ವಿಜಯಭಾಸ್ಕರ್, ಎಂ.ಎನ್.ರವೀಂದ್ರ ಕುಮಾರ್, ಸುಮಂಗಲಾದೇವಿ, ಎಂ.ಎ.ರಾಜೇಶ್, ಸಿ.ಎನ್.ರಮೇಶ್, ಎಂ.ಪಿ.ಭರತೇಶ್, ಕಮಲಾಕ್ಷಿ, ಡಿ.ಪುರುಷೋತ್ತಮ್, ಕೆ.ಜೆ.ಶ್ರೇಯಾಂಸ್ ಕುಮಾರ್, ಕೆ.ಭಾಸ್ಕರ್ ಪಂಡಿತ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಕೊಡಗು ಹೆಗ್ಗಡೆ ಸಮಾಜದ ವಾರ್ಷಿಕ ಸಭೆ

ಮೈಸೂರು, ಅ.11–ಮೈಸೂರಿನ ಕೊಡಗು ಹೆಗ್ಗಡೆ ಸಮಾಜದ ವಾರ್ಷಿಕ ಮಹಾಸಭೆ ಅ.15ರಂದು ಬೆಳಗ್ಗೆ 10 ಗಂಟೆಗೆ ಬೋಗಾದಿ ರಿಂಗ್ ರಸ್ತೆ ಬಳಿ ಇರುವ ಕೋಸ್ಟಲ್ ರಾಕ್ ರೆಸ್ಟೋರೆಂಟ್‌ನಲ್ಲಿ ನಡೆಯಲಿದೆ. ಸಮಾಜದ ಅಧ್ಯಕ್ಷ ಪಂದಿಕಂಡ ಸಿ.ವಿಠಲ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ನಿವೃತ್ತ ಪೊಲೀಸ್ ಅಧಿಕಾರಿ ಪೊಳ್ಳಂಡ ಡಿ.ಸುರೇಶ್, ವಿರಾಜಪೇಟೆ ಮಹಿಳಾ ಕಾಂಗ್ರೆಸ್ ಅಧ್ಯಕ್ಷರೂ ಆದ ವಿರಾಜಪೇಟೆ ಟೈಲರ್ಸ್ ಅಸೋಸಿಯೇಷನ್ ಅಧ್ಯಕ್ಷೆ ತೋರೆರ ಪೊನ್ನಕ್ಕಿ ಗಣೇಶ್ ಭಾಗವಹಿಸಲಿದ್ದಾರೆ. ವಿವರಗಳಿಗಾಗಿ ಮೊ.ಸಂ. 73536 57787 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಾಡಿನ ಜೀವನದಿ ಕಾವೇರಿ ಒಡನಾಟ ಸಾರಿ; ಕಲೆ, ಸಾಹಿತ್ಯ, ಸಂಸ್ಕೃತಿ, ಜಾನಪದ ನೃತ್ಯ ವೈಭವ

'ಯುವ ಸಂಭ್ರಮ'ದಲ್ಲಿ ಸಂಗೀತದ ಅಲೆಯಲ್ಲಿ ಮಿಂದೆದ್ದ ಯುವ ಸಮೂಹ

ಮೈಸೂರು,ಅ.11(ಎಂಕೆ)–ಕನ್ನಡ ನಾಡಿನ ಜೀವನದಿ 'ಕಾವೇರಿ'... ಕರುನಾಡು ಸಾಮರಸ್ಯದ ಬೀಡೆಂಬ ಉದ್ಘೋಷದೊಂದಿಗೆ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಕಲಾಪ್ರಕಾರಗಳ ನೃತ್ಯ ವೈಭವ ಯುವ ಮನಸುಗಳ ಹೃನ್ಮನ ಸೆಳೆಯಿತು....!

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮ ಸಾಂಸ್ಕೃತಿಕ ವೇದಿಕೆಯಲ್ಲಿ ಜಾನಪದ ಝೇಂಕಾರದೊಂದಿಗೆ ಕನ್ನಡ ಕಸ್ತೂರಿಯ ಕಂಪು ಎಲ್ಲೆಡೆ ಆವರಿಸಿತು. ಕಾಲಿಗೆ ಗೆಜ್ಜೆ ಕಟ್ಟಿ 'ಗಲ್ಲು ಗಲ್ಲೆನುತಾ ಗೆಜ್ಜೆ' ಎಂದು ಹೆಜ್ಜೆ ಹಾಕಿದ ಹತ್ತಾರು ಕಾಲೇಜು ವಿದ್ಯಾರ್ಥಿಗಳು ಯುವ ಸಮೂಹವನ್ನು ಸಂಗೀತದ ಅಲೆಯಲ್ಲಿ ತೇಲಿಸಿದರು.


ಹುಣಸೂರು ಗೌಡಗೆರೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಜಾನಪದ ಕಲಾಪ್ರಕಾರಗಳ ಅನಾವರಣ ಮಾಡಿದರು. ಲಂಬಾಣಿಯರ ಜನಪದ ನೃತ್ಯಗಳು, ಕೋಲಾಟ, ಸುಗ್ಗಿಯ ಕುಣಿತ, ವೀರಭದ್ರ ಕುಣಿತ, ಕಂಸಾಳೆ, ನಂದಿ ಕಂಬದ ಕುಣಿತ, ಕರಗದ ಕುಣಿತ, ಡೊಳ್ಳು ಕುಣಿತ ದುರ್ಗೆ ಅವತಾರ ಸೇರಿದಂತೆ ಜಾನಪದದ ಎಲ್ಲಾ ನೃತ್ಯ ಪ್ರಕಾರಗಳನ್ನು ಒಂದೇ ವೇದಿಕೆಯಲ್ಲಿ ಪ್ರಸ್ತುತಪಡಿಸುವ ಮೂಲಕ ಜಾನಪದ ಝೇಂಕಾರ ಮೊಳಗಿಸಿದರು.

ನಾಗಮಂಗಲದ ಶ್ರೀ ಆದಿಚುಂಚನಗಿರಿ ಕಲಾ ಮತ್ತು ವಾಣಿಜ್ಯ ಕಾಲೇಜು ವಿದ್ಯಾರ್ಥಿಗಳು ಜಾನಪದ ಪರಂಪರೆಯ ಜೊತೆಗೆ ಕನ್ನಡ ಚಿತ್ರರಂಗದ ಖ್ಯಾತ ನಟ ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಗಳನ್ನು ಹಿಡಿದು ಸ್ಮರಿಸಿದರೆ, ಹೊಳೆನರಸೀಪುರದ ಸರ್ಕಾರಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಜಾನಪದ ನೃತ್ಯದ ಮೂಲಕ ಮುದ್ದು ಮಾದಪ್ಪನ ಗುಣಗಾನ ಮಾಡಿದರು.

ಕರಾವಳಿ ವೈಭವ: ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಕರಾವಳಿ ಜಾನಪದ ಕಲಾ ಪ್ರಕಾರಗಳ ಅಮೋಘ ನೃತ್ಯ ಪ್ರದರ್ಶನ ನೀಡಿದರು. ಯಕ್ಷಗಾನ, ಹುಲಿವೇಷ ಕುಣಿತ, ಕೊಡವ ಸಾಂಪ್ರದಾಯಿಕ ನೃತ್ಯದ ಮೂಲಕ 'ಕಾವೇರಮ್ಮ ದೇವಿ ನಮ್ಮನ್ನು ಕಾಪಾಡು' ಎಂದು ಪ್ರಾರ್ಥಿಸಿದರೆ, ಗುಂಡ್ಲುಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಬೆಳವಾಡಿ ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳು 'ಕನ್ನಡ ನಾಡಿನ ಜೀವನದಿ ಕಾವೇರಿ', 'ಕರುನಾಡು ಸಾಮರಸ್ಯದ ಬೀಡೆಂದು' ಸಾರಿದರು.



ಮಂಡ್ಯ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಜೈ ಜವಾನ್ ಜೈಕಿಸಾನ್ ನೃತ್ಯ.



ಹುಣಸೂರು ಗೌಡಗೆರೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಜಾನಪದ ಕಲಾಪ್ರಕಾರಗಳ ಅನಾವರಣ.



ತಿಲಕ್‌ನಗರದ ಅಂಧ ಮಕ್ಕಳ ಸರ್ಕಾರಿ ಪಾಠ ಶಾಲೆಯ ವಿಶೇಷಚೇತನ ಮಕ್ಕಳಿಂದ ದಸರಾ ಪರಂಪರೆ ನೃತ್ಯ.



ಬೆಳವಾಡಿ ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳಿಂದ 'ಕನ್ನಡ ನಾಡಿನ ಜೀವನದಿ ಕಾವೇರಿ' ನೃತ್ಯ

ಗ್ಯಾರಂಟಿ... ಗ್ಯಾರಂಟಿ...!

ಬಹುತ್ವದ ಸಮಾಜಕ್ಕೆ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತ ವಿಶೇಷ ನೃತ್ಯ ಪ್ರದರ್ಶನ ನೀಡಿದ ಬಿಳಿಕೆರೆ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಅಪಾರ ಮೆಚ್ಚುಗೆ ಪಡೆದರು. 'ಭರಾಟೆ' ಚಿತ್ರದ 'ಮಣ್ಣಿನ ಮಗನು ಇವನು, ಕೊಡುಗೈ ದಾನಿ' ಎಂಬ ಹಾಡಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ಲೆ ಕಾರ್ಡ್‌ಗಳನ್ನು ಪ್ರದರ್ಶಿಸಿದ ವಿದ್ಯಾರ್ಥಿಗಳು ಜನಪರ ಯೋಜನೆಗಳ ಉಪಯುಕ್ತತೆ ಬಗ್ಗೆ ಬೆಳಕು ಚೆಲ್ಲಿದರು.

ಹಾಗೆಯೇ 'ಹಚ್ಚೇವು ಕನ್ನಡದ ದೀಪ' ಹಾಡಿನೊಂದಿಗೆ ಕನ್ನಡ ದೀಪಗಳನ್ನು ಬೆಳಗಿಸಿದ ಮಂಡ್ಯ ಅರ್ಕೇಶ್ವರನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು ಕನ್ನಡ ಕಂಪನ್ನು ರಂಗಮಂದಿರದೆಲ್ಲೆಡೆ ಪಸರಿಸಿದರು.

ಶಿವ ಜಪ, ಶಕ್ತಿ ಆರಾಧನೆ: 'ಹರ ಹರ ಶಿವ ಶಿವ ಶಂಕರಾ..' ಹಾಡಿನ ಮೂಲಕ ಶಿವತಾಂಡವ ನೃತ್ಯ ಪ್ರದರ್ಶನ ನೀಡಿದ ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಶಿವ ಜಪ ಮಾಡಿದರೆ, ಮೈಸೂರಿನ ಮಾತೃ ಮಂಡಳಿ ಶಿಶು ವಿಕಾಸ ಕೇಂದ್ರದ ವಿಶೇಷಚೇತನ ಮಕ್ಕಳು ನವದುರ್ಗೆಯರ ಅವತಾರದೊಂದಿಗೆ ಶಕ್ತಿ ಆರಾಧನೆ ಮಾಡಿದರು.

ದೇಶ ಭಕ್ತಿ, ಸೇನಾನಿಗಳ ಸ್ಮರಣೆ: ಬಿಡದಿ ಶ್ರೀ ಬಸವೇಶ್ವರ ಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಜೈ ಹಿಂದೂಸ್ಥಾನಿ' ಹಿಂದಿ ಹಾಡಿಗೆ ಭರ್ಜರಿ ನೃತ್ಯದ ಮೂಲಕ ದೇಶಾಭಿಮಾನ ಹೆಚ್ಚಿಸಿದರೆ, ಮೈಸೂರಿನ ರಾಮನ್ ಕಾಲೇಜು ಆಫ್ ನರ್ಸಿಂಗ್ ವಿದ್ಯಾರ್ಥಿ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಸ್ವಾತಂತ್ರ್ಯ ಹೋರಾಟ ಹಾಗೂ ದೇವಲಾಪುರದ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋ ಕೆಮಿಕಲ್ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ವೀರ ಸೇನಾನಿಗಳಿಗೆ ನಮಿಸಿದರು.

ದಸರಾ ಪರಂಪರೆ: ಮಂಚೇಗೌಡನ ಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಮೈಸೂರು ದಸರಾ ಎಷ್ಟೊಂದು ಸುಂದರ' ಹಾಡಿನೊಂದಿಗೆ ದಸರಾ ಪರಂಪರೆ, ಒಡೆಯರ ಕೊಡುಗೆಗಳನ್ನು ಸ್ಮರಿಸಿದರೆ, ತಿಲಕ್ ನಗರದ ಅಂಧ ಮಕ್ಕಳ ಸರ್ಕಾರಿ ಪಾಠ ಶಾಲೆಯ ವಿಶೇಷಚೇತನ ಮಕ್ಕಳು ದಸರಾ ಆನೆ ಬಲರಾಮನ ಸಾಹಸವನ್ನು ಕೊಂಡಾಡಿದರು. ನಂತರ ಟಿ.ನರಸೀಪುರ ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಹಾಗೂ ಮಂಡ್ಯದ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡ ರೈತರ ಕೊಡುಗೆಯನ್ನು ವಿಶಿಷ್ಟ ನೃತ್ಯ ಸಂಯೋಜನೆ ಮೂಲಕ ಶ್ಲಾಘಿಸಿದರು.

ಮೊಬೈಲ್ ಬಿಡಿ, ಪುಸ್ತಕ ಹಿಡಿ..!: ತಂತ್ರಜ್ಞಾನದ ಯುಗದಲ್ಲಿ ಮೊಬೈಲ್‌ನಿಂದಾಗುತ್ತಿರುವ ತೊಂದರೆಗಳ ಕುರಿತು ಅರ್ಥಗರ್ಭಿತವಾಗಿ ತಿಳಿಸುವುದರ ಜೊತೆ ಜೊತೆಗೆ ಪುಸ್ತಕಗಳ ಮಹತ್ವ ಸಾರಿದ ಮೈಸೂರು ಶಿವರಾತ್ರೀಶ್ವರನಗರದ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪುಸ್ತಕಗಳನ್ನು ಪ್ರೀತಿಸಿದರೆ ಅವುಗಳು ನಮ್ಮ ಭವಿಷ್ಯ ರೂಪಿಸುತ್ತವೆ ಎಂಬ ಸತ್ಯ ಸಂದೇಶವನ್ನು ವಿನೂತನ ನೃತ್ಯ ಸಂಯೋಜನೆ ಮೂಲಕ ಮನದಟ್ಟು ಮಾಡಿದರು.

ರೆಟ್ರೋ–ಮೆಟ್ರೋ ನೃತ್ಯ ರಂಜನೆ: ಆಕಾಶವಾಣಿಯಿಂದ ಎಫ್‌ಎಂವರೆಗೆ ಹಾಗೂ 'ನನ್ನ ನೀನು, ನಿನ್ನ ನಾನು ಕಾದು ಕೊಂಡು ಕೂತುಕೊಂಡೆ' ಎಂಬ ಹಳೇ ಹಾಡಿನಿಂದ 'ನಂಗೆ ಬೇಜಾರ್ ಆಯ್ತು ಕಣ್ರೆ' ಎಂಬ ಟಪ್ಪಾಂಗುಚಿ ಹಾಡಿಗೆ ರೆಟ್ರೋ–ಮೆಟ್ರೋ ಮನಮೋಹಕ ನೃತ್ಯ ಪ್ರದರ್ಶನ ನೀಡಿದ ಶ್ರೀರಂಗಪಟ್ಟಣ ನಗುವನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಬಯಲು ರಂಗಮಂದಿರದಲ್ಲಿ ನೆರೆದಿದ್ದ ಯುವ ಸಮೂಹವೇ ಎದ್ದು ಹುಚ್ಚೆದ್ದು ಕುಣಿಯುವಂತೆ ಮಾಡಿದರಲ್ಲದೆ ಮಸ್ತ್ ಮನರಂಜನೆ ನೀಡಿದರು.





ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ರೆಟ್ರೋ–ಮೆಟ್ರೋ ನೃತ್ಯಕ್ಕೆ ಕುಣಿದು ಕುಪ್ಪಳಿಸುತ್ತಿರುವ ಯುವ ಸಮೂಹ.

ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟ; ಸಿಎಂ ಕಪ್-2023ಕ್ಕೆ ಉಪಮುಖ್ಯಮಂತ್ರಿಯಿಂದ ಅದ್ದೂರಿ ಚಾಲನೆ

ಪರಿಶ್ರಮದಿಂದ ಕ್ರೀಡೆಯಲ್ಲಿ ಯಶಸ್ಸು ಗಳಿಸಿ, ದೇಶಕ್ಕೆ ದೊಡ್ಡ ಆಸ್ತಿಯಾಗಿ

ಕ್ರೀಡಾಪಟುಗಳಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರೇರಕ ನುಡಿ

ಮೈಸೂರು,ಅ.11(ಪಿಎಂ)– ಪರಿಶ್ರಮದಿಂದ ಕ್ರೀಡಾ ಕ್ಷೇತ್ರದಲ್ಲಿ ಯಶಸ್ಸು ಗಳಿಸುವ ಮೂಲಕ ಭವಿಷ್ಯದಲ್ಲಿ ದೇಶಕ್ಕೆ ದೊಡ್ಡ ಆಸ್ತಿಯಾಗಬೇಕೆಂದು ಕ್ರೀಡಾಪಟುಗಳಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹುರಿದುಂಬಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದಸರಾ ಕ್ರೀಡಾ ಉಪ ಸಮಿತಿ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟ–ಸಿಎಂ ಕಪ್–2023ಕ್ಕೆ ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಈ ಬಾರಿ ದಸರಾ ಕ್ರೀಡಾಕೂಟವನ್ನು ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ. ನನಗೆ ಈಗ 61 ವರ್ಷ ವಯಸ್ಸು. ನಾನು 16 ವರ್ಷದ ಹುಡುಗನಿದ್ದಾಗ, ನಿಮ್ಮಂತೆಯೇ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದೆ. ಜಾವಲಿನ್ ಎಸೆತದಲ್ಲಿ ಪಾಲ್ಗೊಳ್ಳಲು ಹಾಗೂ 14.5 ಕಿ.ಮೀ. ಓಟದ ಜ್ಯೂನಿಯರ್ ವಿಭಾಗದಲ್ಲಿ ಭಾಗವಹಿಸಲು ಬಂದು ಸೋತು ಹಿಂತಿರುಗಿದ್ದೆ. ಇಂದು ಅದೇ ದಸರಾ ಕ್ರೀಡಾಕೂಟ ಉದ್ಘಾಟಿಸಿದ್ದೇನೆ ಎಂದು ತಮ್ಮ ಬಾಲ್ಯದ ನೆನಪಿನೊಂದಿಗೆ ಹರ್ಷ ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ನನ್ನಂತೆಯೇ ನೀವು ನಾಯಕರಾಗಿ ಬೆಳೆಯಬೇಕು. ದೇಶಕ್ಕೆ ದೊಡ್ಡ ಆಸ್ತಿಯಾಗಬೇಕು. ಅಂದು ನಮಗೆ ನಿಮ್ಮಂತೆ ಕ್ರೀಡೆಗೆ ಪ್ರೇರಣೆ ನೀಡುವುದು, ಅಗತ್ಯ ಸಾಮಗ್ರಿ ಒದಗಿಸುವುದು ಅತ್ಯಂತ ವಿರಳವಾಗಿತ್ತು. ಶ್ರಮವಿದ್ದಲ್ಲಿ ಫಲ ದೊರೆಯಲಿದೆ. ಕೇವಲ ಗಣೇಶನ ಪೂಜೆ ಮಾಡಿದರಷ್ಟೇ ವಿದ್ಯೆ ಬರುವುದಿಲ್ಲ ಅಥವಾ ವಿಘ್ನ ನಿವಾರಣೆಯಾಗುವುದಿಲ್ಲ. ಸರಸ್ವತಿ ಪೂಜೆ ಮಾಡಿದಾಕ್ಷಣ ವಿದ್ಯೆ ಬರುವುದಿಲ್ಲ. ಆಂಜನೇಯನನ್ನು ಪೂಜೆ ಮಾಡಿದರಷ್ಟೇ ಫಲ ದೊರೆಯುವುದಿಲ್ಲ. ಅದರ ಜೊತೆಗೆ ನಿಮ್ಮ ಶ್ರಮವೂ ಇರಬೇಕು ಎಂದರು.

ಕ್ರೀಡಾಪಟುಗಳು ಸರಿಯಾದ ರೀತಿಯಲ್ಲಿ ಅಭ್ಯಾಸ ಮಾಡಬೇಕು. ಪ್ರಸ್ತುತ ನಿಮ್ಮ ಸ್ಪರ್ಧೆ ಕೇವಲ ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟಕ್ಕೆ ಸೀಮಿತವಾಗಿಲ್ಲ. ಬದಲಿಗೆ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡಬೇಕಿದೆ. ಏಷ್ಯನ್ ಗೇಮ್ಸ್‌ನಲ್ಲಿ ಭಾರತ 100 ಪದಕ ಗೆದ್ದಿದ್ದು, ಇದರಲ್ಲಿ 11 ಮಂದಿ ರಾಜ್ಯದ ಕ್ರೀಡಾಪಟುಗಳಿದ್ದಾರೆ. ಮುಂದಿನ ದಿನಗಳಲ್ಲಿ ನೀವು ಭಾರತ ಪ್ರತಿನಿಧಿಸುವಂತಹ ದೊಡ್ಡ ಶಕ್ತಿಯಾಗಿ ಬೆಳೆಯಬೇಕೆಂದು ಡಿ.ಕೆ.ಶಿವಕುಮಾರ್ ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಯುವ ಜನರ ಬೆಳವಣಿಗೆಗೆ ಕ್ರೀಡೆ ಮಹತ್ವದ ಪಾತ್ರ ವಹಿಸಲಿದೆ. ಹೀಗಾಗಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಎಲ್ಲಾ ನಗರಗಳಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಬಡಾವಣೆಗೊಂದು ಆಟದ ಮೈದಾನ ನಿರ್ಮಿಸಲು ಸರ್ಕಾರ ಕಾರ್ಯಕ್ರಮ ರೂಪಿಸಬೇಕೆಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಕ್ರೀಡಾಪಟುಗಳು ಗಣ್ಯರಿಗೆ ಕ್ರೀಡಾಜ್ಯೋತಿ ಅರ್ಪಿಸಿದರು. ಅಲ್ಲದೆ, ಕ್ರೀಡಾ ಮನೋಭಾವದ ಪ್ರತಿಜ್ಞಾ ವಿಧಿಯನ್ನೂ ಸ್ವೀಕರಿಸಿದರು. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ವಿಭಾಗಗಳ (ಕ್ರೀಡಾ ವಿಭಾಗಗಳು) ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ.

ಇಂದಿನಿಂದ ಅ.14ರವರೆಗೆ ಬಾಸ್ಕೆಟ್ ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ವಾಲಿಬಾಲ್ ಸೇರಿದಂತೆ ಹಲವು ಕ್ರೀಡೆಗಳು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿವೆ (ಕೆಲವು ಇತರ ಸ್ಥಳಗಳಲ್ಲೂ ನಡೆಯಲಿವೆ). ಅಂತೆಯೇ ಅ.16ರಿಂದ 21ರವರೆಗೆ ಕರ್ನಾಟಕ ಒಲಂಪಿಕ್ ಸಂಸ್ಥೆಯಲ್ಲಿ ಶ್ರೇಯಾಂಕ ಪಡೆದ ಕ್ರೀಡಾಪಟುಗಳ ಕ್ರೀಡಾಕೂಟ ನಡೆಯಲಿದೆ.

ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ, ಕರ್ನಾಟಕ ಒಲಂಪಿಕ್ ಸಂಸ್ಥೆ ಅಧ್ಯಕ್ಷರೂ ಆದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಾ.ಕೆ.ಗೋವಿಂದರಾಜ್, ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಸಿ.ಎನ್. ಮಂಜೇಗೌಡ, ಉಪಮೇಯರ್ ಡಾ.ರೂಪಾ, ಪಾಲಿಕೆ ಆಯುಕ್ತ ಅಸದ್ ಶರೀಫ್, ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಸಹಕಾರ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ದಸರಾ ಕ್ರೀಡಾ ಉಪ ಸಮಿತಿ ಉಪ ವಿಶೇಷಾಧಿಕಾರಿಗಳೂ ಆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟ–ಸಿಎಂ ಕಪ್–2023 ಅನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಕ್ರೀಡಾ ಸಚಿವ ಬಿ.ನಾಗೇಂದ್ರ ಇನ್ನಿತರರಿದ್ದಾರೆ.

ಕ್ರೀಡಾ ಸಾಧಕರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ.3ರಷ್ಟು ಮೀಸಲಾತಿ

- ಕ್ರೀಡಾ ಸಚಿವ ಬಿ.ನಾಗೇಂದ್ರ ನಿರ್ಧಾರ
- ಶೀಘ್ರದಲ್ಲಿ ಏಷ್ಯನ್ ಗೇಮ್ಸ್‌ನ ರಾಜ್ಯ ಸಾಧಕರಿಗೆ ಸನ್ಮಾನಿಸಿ, ಬಹುಮಾನ ಪ್ರದಾನ

ಮೈಸೂರು: ಸರ್ಕಾರಿ ಉದ್ಯೋಗದಲ್ಲಿ ಕ್ರೀಡಾ ಸಾಧಕರಿಗೆ ಶೇ.3ರಷ್ಟು ಮೀಸಲಾತಿ ಕಲ್ಪಿಸುವ ಭರವಸೆ ಇದ್ದು, ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಈ ಸಂಬಂಧ ತೀರ್ಮಾನ ಕೈಗೊಂಡಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ತಿಳಿಸಿದರು.

ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟ–ಸಿಎಂ ಕಪ್–2023ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಕ್ರೀಡೆಗೆ ಉತ್ತೇಜನ ನೀಡುತ್ತಿದ್ದಾರೆ. ಅಂತೆಯೇ ದಸರಾ ಕ್ರೀಡಾಕೂಟಕ್ಕೆ ಯಾವುದೇ ಕೊರತೆ ಇಲ್ಲದಂತೆ ಆಯೋಜಿಸಲು ಸಹಕಾರ ನೀಡಿದ್ದಾರೆ. ಪ್ರತಿಭಾವಂತ ಕ್ರೀಡಾಪಟುಗಳನ್ನು ಮುಖ್ಯವಾಹಿನಿಗೆ ತರುವಲ್ಲಿ ಈ ದಸರಾ ಕ್ರೀಡಾಕೂಟ ಮುಖ್ಯ ವೇದಿಕೆಯಾಗಲಿದೆ ಎಂದರು.

ಈ ಹಿಂದೆ ದಸರಾ ಕ್ರೀಡಾಕೂಟದಲ್ಲಿ ಸಾವಿರ ಕ್ರೀಡಾಪಟುಗಳು ಪಾಲ್ಗೊಳ್ಳುವ ಅವಕಾಶವಿತ್ತು. ಜೊತೆಗೆ ಕೇವಲ 10 ಕ್ರೀಡೆಗಳು ಮಾತ್ರ ನಡೆಯುತ್ತಿದ್ದವು. ಆದರೆ ಇಂದು 35 ಕ್ರೀಡೆಗಳು ಆಯೋಜನೆಗೊಳ್ಳುತ್ತಿದ್ದು, 10 ಸಾವಿರಕ್ಕೂ ಅಧಿಕ ಮಂದಿ ಕ್ರೀಡಾಪಟುಗಳು ಪಾಲ್ಗೊಳ್ಳುವಂತಹ ಉತ್ತಮ ಬೆಳವಣಿಗೆ ಸೃಷ್ಟಿಯಾಗಿದೆ. ರಾಜ್ಯ ಸರ್ಕಾರ ಕ್ರೀಡಾಪಟುಗಳಿಗೆ ಎಲ್ಲಾ ರೀತಿಯ ಉತ್ತೇಜನ ನೀಡಲಿದೆ ಎಂದು ತಿಳಿಸಿದರು.

ಏಷ್ಯನ್ ಗೇಮ್ಸ್‌ನಲ್ಲಿ ಸಾಧನೆ ಮಾಡಿದ ಕರ್ನಾಟಕದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಸನ್ಮಾನಿಸಿ, ಬಹುಮಾನ ನೀಡುವ ಕಾರ್ಯಕ್ರಮ ಆಯೋಜಿಸಲಾಗುವುದು. ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಇಡೀ ದೇಶವೇ ರಾಜ್ಯದ ಕ್ರೀಡಾಪಟುಗಳತ್ತ ನೋಡುವ ದಿನ ಬಂದೇ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಕ್ಕರೆ ಅದೇ ಸ್ವರ್ಗ

ಸ್ನೇಹಿತ : "ಏನೋ ಗುಂಡ ನೀನೇ ಪಾತ್ರೆ ತಿಕ್ತಾ ಇದ್ದೀ.. ಮನೆಯಲ್ಲಿ ಕೆಲಸದವಳಿದ್ದಾಳೆ ಅಂತಿದ್ದಿ?"

ಗುಂಡ : "ಓ.. ಅದಾ.. ಕೆಲ ದಿನಗಳ ಹಿಂದೆ ಅವಳನ್ನೇ ಮದುವೆಯಾದೆ..!"

ಮೈಸೂರು ಮಿತ್ರ

ಗುರುವಾರ, 12 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸರಿಯಾದ ನಿರ್ಣಯಗಳು ನಮ್ಮ ವಿಶ್ವಾಸವನ್ನೂ, ತಪ್ಪು ನಿರ್ಣಯಗಳು ನಮ್ಮ ಅನುಭವವನ್ನೂ ಹೆಚ್ಚಿಸುತ್ತದೆ. – ನುಡಿಮುತ್ತು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಳೆ ಬಂದಾಗ ಉಪ್ಪು ಮಾರಬೇಡ, ಗಾಳಿ ಬಂದಾಗ ಹಿಟ್ಟು ಮಾರಬೇಡ.

ನಿಮ್ಮ ಪತ್ರಗಳು

ದಕ್ಷ ಅಧಿಕಾರಿಗೆ ಇದೆಂತಹ ತೇಜೋವಧೆ?

ಮಾನ್ಯರೆ,

ದಕ್ಷ ಐಜಿಪಿ ಡಾ.ಬಿ.ಆರ್.ರವಿಕಾಂತೇಗೌಡರ ತೇಜೋವಧೆ ಸರಿಯೇ? ಕೇಂದ್ರ ವಲಯ ಬೆಂಗಳೂರು ಐಜಿಪಿ ದಕ್ಷ ಪೊಲೀಸ್ ಅಧಿಕಾರಿ ಬೆಸಗರಹಳ್ಳಿ ರಾಮಣ್ಣ ರವಿಕಾಂತೇಗೌಡ, ಅವರ ಬಗ್ಗೆ ವ್ಯವಸ್ಥಿತವಾಗಿ ತೇಜೋವಧೆ ಮಾಡುತ್ತಿರುವ ಸಮಾಜಘಾತುಕ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮಂಡ್ಯ ಜಿಲ್ಲಾ ಸ್ವಾಭಿಮಾನಿ ಪಡೆ ನೇತೃತ್ವದಲ್ಲಿ ವಿವಿಧ ಸಂಘಟನೆಗಳ (ಒಕ್ಕಲಿಗರ ಸಂಘ, ದಸಂಸ, ಕೂಲಿಕಾರ್ಮಿಕರ ಸಂಘ, ಜಿಲ್ಲಾ ಕಿಸಾನ್ ಸಂಘ) ಮುಖಂಡರು ಬೃಹತ್ ಪ್ರತಿಭಟನೆ ನಡೆಸಿರುವುದು ಶ್ಲಾಘನೀಯ. ಐಜಿಪಿ ರವಿಕಾಂತೇಗೌಡ ಅವರು ಇದುವರೆವಿಗೂ ಯಾವುದೇ ಕಳಂಕ ಭಾರದ ರೀತಿಯಲ್ಲಿ ಸೇವೆ ಸಲ್ಲಿಸಿರುವುದು ಅವರ ಪ್ರಾಮಾಣಿಕತೆಗೆ ಹಾಗೂ ದಕ್ಷತೆಗೆ ಸಾಕ್ಷಿಯಾಗಿದೆ. ತಮ್ಮ ಅಧಿಕಾರದ ಅವಧಿಯಲ್ಲಿ ಭೂ ಮಾಫಿಯಾ, ಮಟ್ಕಾ, ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಟ ನಡೆಸಿದ್ದಾರೆ, ಹಾಗೂ ಪ್ರಥಮ ಬಾರಿಗೆ ಪೊಲೀಸ್ ಇಲಾಖೆಯಲ್ಲಿ ಕನ್ನಡದಲ್ಲಿ ಪೆರೇಡ್ ಮಾಡಿಸಿರುವುದು ಅವರಲ್ಲಿ ಹುದಗಿರುವ ಭಾಷಾಭಿಮಾನಕ್ಕೆ ಒಂದು ಉದಾಹರಣೆಯಷ್ಟೆ, ರಾಷ್ಟ್ರಪತಿಗಳ ಪದಕ ಹಾಗೂ ಮುಖ್ಯಮಂತ್ರಿಗಳ ಪದಕ ಲಭಿಸಿರುವ ಇಂತಹ ದಕ್ಷ ಅಧಿಕಾರಿಯ ವಿರುದ್ಧ ಖಾಸಗಿ ವಾಹಿನಿಯವರು ವ್ಯವಸ್ಥಿತ ಸಂಚು ರೂಪಿಸಿ, ಸುಳ್ಳು ಸುದ್ದಿಯನ್ನು ಭಿತ್ತರಿಸಿರುವುದು ತುಂಬಾ ಹೇಯ ಕೃತ್ಯವೇ ಸರಿ. ರಾಜ್ಯ ಸರ್ಕಾರ ರವಿಕಾಂತೇಗೌಡರಂತಹ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ನೀಡುವ ಮೂಲಕ ಅವರ ಕಾರ್ಯ ವೈಖರಿಗೆ ಬೆನ್ನೆಲುಬಾಗಿ ಸಮಾಜಕ್ಕೆ ಇನ್ನೂ ಉತ್ತಮವಾದ ಸೇವೆಯನ್ನು ಸಲ್ಲಿಸಲು ನೆರವಾಗಬೇಕು. ದೃಶ್ಯ ಮಾಧ್ಯಮದಲ್ಲಿ ತಪ್ಪು ವರದಿಯನ್ನು ಬಿತ್ತರಿಸಿರುವ ವಾಹಿನಿಯವರನ್ನು ಶಿಕ್ಷೆಗೆ ಒಳಪಡಿಸಿ, ನ್ಯಾಯ ದೊರಕಿಸಿಕೊಡಬೇಕು.

– ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಪಟಾಕಿ ತಯಾರಿಕಾ ಉದ್ಯಮಕ್ಕೆ ಕಟ್ಟುನಿಟ್ಟಿನ ನಿಯಮ ರೂಪಿಸಿ

ಮಾನ್ಯರೆ,

ಕರ್ನಾಟಕದ ಅತ್ತಿಬೆಲೆಯಲ್ಲಿ ನಡೆದ ಪಟಾಕಿ ದುರಂತ ಮಾಸುವ ಮುನ್ನವೇ ತಮಿಳುನಾಡಿನ ಅರಿಯಾಲೂರು ಜಿಲ್ಲೆಯಲ್ಲಿ ಮತ್ತೊಂದು ಪಟಾಕಿ ದುರಂತ ಸಂಭವಿಸಿ ಪ್ರಾಣಹಾನಿಯಾಗಿರುವುದು ಅತ್ಯಂತ ನೋವಿನ ಸಂಗತಿ. ಪಟಾಕಿ ತಯಾರಿಕಾ ಉದ್ಯಮವು ಅತೀ ಸೂಕ್ಷ್ಮ ಉದ್ಯಮಗಳಲ್ಲಿ ಒಂದಾಗಿದ್ದು, ಸ್ವಲ್ಪ ಜಾಗ್ರತೆ ತಪ್ಪಿದರೂ ಭಾರೀ ಅನಾಹುತವಾಗುತ್ತದೆ. ಈ ಹಿನ್ನೆಲೆಯಲ್ಲಿ ಅರಿಯಾಲೂರು ದುರಂತದಲ್ಲಿ ತರಬೇತಿ ಪಡೆಯದವರಿಂದ ದುರಂತ ಸಂಭವಿಸಿದೆ ಎಂದು ಗೊತ್ತಾಗಿದೆ. ಇನ್ನು ಮುಂದೆಯಾದರೂ ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಆಡಳಿತವು ಪಟಾಕಿ ತಯಾರಿಕಾ ಉದ್ಯಮಕ್ಕೆ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಬೇಕು. ಒಂದೊಮ್ಮೆ ನಿಯಮಗಳನ್ನು ಉಲ್ಲಂಘಿಸಿದರೆ ರಾಜಿಯಾಗದೆ ಕಾನೂನು ಕ್ರಮ ಕೈಗೊಳ್ಳಬೇಕು. ಈ ನಡೆಗಳನ್ನು ಚಾಚೂ ತಪ್ಪದೇ ಅನುಸರಿಸಿದರೆ ಈ ರೀತಿಯ ಅವಘಡಗಳು ಮುಂದೆ ನಡೆಯುವುದು ತಪ್ಪುತ್ತದೆ. ಅಮೂಲ್ಯ ಜೀವಗಳು ಬದುಕುಳಿಯುತ್ತವೆ.

–ಪ್ರಸಾದ್ ಜಿ.ಎಂ, ಮೈಸೂರು

ಶಾಸಕರಾದವರು ಷೋಗಳಲ್ಲಿ ಭಾಗವಹಿಸುವುದು ಎಷ್ಟರ ಮಟ್ಟಿಗೆ ಸರಿ?

ಮಾನ್ಯರೆ,

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರು, ಖಾಸಗಿ ಟಿವಿ ಚಾನಲ್‌ವೊಂದು 100 ದಿನಗಳ ಕಾಲ ನಡೆಸುವ ಬಿಗ್‌ಬಾಸ್ ಹೆಸರಿನ ಷೋನಲ್ಲಿ ಭಾಗವಹಿಸಿರುವುದು ಜನ ಪ್ರತಿನಿಧಿಯಾಗಿ ಇವರಿಗೆ ಇನ್ನು ರಾಜಕೀಯ ಅನುಭವ ಸಾಲದು ಎನಿಸುತ್ತದೆ.

ಇಡೀ ರಾಜ್ಯದ ಜನರು ಬರದಿಂದ ತತ್ತರಿಸಿ ಬಿಸಿಲಿನಿಂದ ಒಣಗುತ್ತಿದ್ದರೆ, ಇವರು ಹವಾನಿಯಂತ್ರಿತ (ಎಸಿ) ಮನೆ ಕುಳಿತು ಸ್ಪರ್ಧಿಗಳ ಜೊತೆಗೆ ಕಾಲ ಕಳೆಯುತ್ತಿದ್ದಾರೆ. ಇದೀಗ ತಾನೆ ರಾಜಕೀಯ ಜೀವನಕ್ಕೆ ಕಾಲಿಡುತ್ತಿರುವ ಇವರು ಈಗಲೇ ಈ ರೀತಿ ಮಾಡಿದರೆ ಹೇಗೆ? ಸಾರ್ವಜನಿಕ ಜೀವನದಲ್ಲಿ ಹೇಗಿರಬೇಕು ಎಂಬ ಕನಿಷ್ಠ ತಿಳುವಳಿಕೆಯೂ ಬೇಡವೇ. ಏನೂ ಕೆಲಸ ಇಲ್ಲದ ಜನ ನೋಡುವಂತಹ ಷೋ ಇದು. ಈ ಬಿಗ್‌ಬಾಸ್ ನಡೆಸುವ ಆಯೋಜಕರು ಮೊದಲು ಇದರಲ್ಲಿ ಭಾಗವಹಿಸುವ ಹೆಣ್ಣು ಮಕ್ಕಳು ಮೈ ತುಂಬಾ ಬಟ್ಟೆ ಹಾಕಿಕೊಳ್ಳುವುದನ್ನು ಹೇಳಿಕೊಡಲಿ. ಯುವ ಜನತೆಯನ್ನು ಗುರಿಯಾಗಿಸಿಕೊಂಡು ಟಿವಿ ಚಾನಲ್‌ನವರು ಹಣ ಗಳಿಸುವ ಉದ್ದೇಶದಿಂದ ಇಂತಹ ಷೋಗಳನ್ನು ಪ್ರಸಾರ ಮಾಡುತ್ತಾರಷ್ಟೆ, ಇದರಿಂದ ಸಮಾಜಕ್ಕೆ ಮೂರು ಪೈಸದ ಉಪಯೋಗವಿಲ್ಲ. ಪುಕ್ಕಟೆ ಪ್ರಚಾರಕ್ಕಾಗಿ ಶಾಸಕರಾದವರು ಇಂತಹ ಷೋಗಳಲ್ಲಿ ಭಾಗವಹಿಸುವುದು ಎಷ್ಟರ ಮಟ್ಟಿಗೆ ಸರಿ?

ಕೆಲವು ದಿನಗಳ ಹಿಂದೆ ಇದೇ ಶಾಸಕರು ಚಿಕ್ಕಬಳ್ಳಾಪುರಲ್ಲಿ ಸಣ್ಣ ಗಲಾಟೆವೊಂದು ನಡೆದಾಗ, ವಿರೋಧ ಪಕ್ಷದ ಕಾರ್ಯಕರ್ತರ ಬಾಲ ಕಟ್ ಮಾಡುವುದು ನನಗೆ ಗೊತ್ತು ಎಂಬ ಅಸಂಬದ್ಧ ಹೇಳಿಕೆ ನೀಡಿದ್ದರು. ಈ ಶಾಸಕರಿಗೆ ನಿಜವಾದ ಜನಪರ ಕಾಳಜಿ ಇದ್ದರೆ ಈ ಕೂಡಲೇ ಬಿಗ್‌ಬಾಸ್ ಷೋನಿಂದ ಹೊರ ಬಂದು ಮರ್ಯಾದೆ ಉಳಿಸಿಕೊಳ್ಳಲಿ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಬಲಿಷ್ಠ ರಾಷ್ಟ್ರವೆಂದು ಬೀಗುವ ಇತರ ರಾಷ್ಟ್ರಗಳು ಎಚ್ಚೆತ್ತುಕೊಳ್ಳಬೇಕು

ಮಾನ್ಯರೆ,

ಇಸ್ರೇಲ್ ಅತೀ ಬಲಿಷ್ಠ ಮಿಲಿಟರಿ ಪಡೆಯನ್ನು ಹೊಂದಿರುವ ದೇಶ. ಆ ದೇಶದ ಸುತ್ತಲೂ ಶತ್ರುಗಳೇ ತುಂಬಿದ್ದರೂ ಆ ದೇಶವನ್ನು ಕೆಣಕುವ ಧೈರ್ಯ ಯಾವ ದೇಶವೂ ಮಾಡುತ್ತಿರಲಿಲ್ಲ. ಕಾರಣ ಆ ದೇಶದ ಅತೀ ಬಲಿಷ್ಠ ಮಿಲಿಟರಿ ವ್ಯವಸ್ಥೆ. ಆದರೆ ಹಮಾಸ್ ಉಗ್ರರು ಮಾಡಿದ ದಾಳಿ ಆ ದೇಶದ ಗುಪ್ತಚರ ವಿಭಾಗ ಮತ್ತು ಬಲಿಷ್ಠ ಮಿಲಿಟರಿ ವ್ಯವಸ್ಥೆಯನ್ನು ಪ್ರಪಂಚದ ಇತರೆ ದೇಶಗಳು ಅನುಮಾನದಿಂದ ನೋಡುವಂತಾಗಿದೆ. ಇದರಿಂದ ಇತರೆ ದೇಶಗಳು ನಮ್ಮದು ಬಲಿಷ್ಠ ರಾಷ್ಟ್ರವೆಂದು ಬೀಗುವ (ನಮ್ಮ ದೇಶವು ಸೇರಿದಂತೆ) ಇತರೆ ರಾಷ್ಟ್ರಗಳೂ ಕೂಡ ಎಚ್ಚೆತ್ತುಕೊಳ್ಳದಿದ್ದರೆ, ಇದೇ ರೀತಿಯ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ ,ಮೈಸೂರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಬುಧವಾರದ (ಅ. 11) 'ಮೈಸೂರು ಮಿತ್ರ' ಸಂಚಿಕೆಯ ಮುಖಪುಟದ ವರದಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೈಸೂರು ಮನೆ ಮೇಲೆ ಕಲ್ಲು ತೂರಿದ ಆರೋಪಿ ಹೆಸರು ಸತ್ಯಮೂರ್ತಿ ಎಂದು ಪ್ರಕಟವಾಗಿದ್ದು, ಆತನ ಹೆಸರನ್ನು 'ಶಿವಮೂರ್ತಿ' ಎಂದು ಓದಿಕೊಳ್ಳುವುದು. – ಸಂ.



ಕಾರ್ಕಳ ಆನಂದ ಭಟ್

ಮೊ : 7676554198

ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ


ದಿಕ್ಕುದೆಸೆ

'ಒಂದು ರಾಷ್ಟ್ರ ಒಂದು ಚುನಾವಣೆ' ಅಂದುಕೊಂಡಷ್ಟು ಸುಲಭ ಸಾಧ್ಯವೇ!

ಭಾರತದಲ್ಲಿ ಲೋಕಸಭಾ ಮತ್ತು ದೇಶದ ಎಲ್ಲಾ ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದೇ "ಒಂದು ರಾಷ್ಟ್ರ ಒಂದು ಚುನಾವಣಾ" ಪರಿಕಲ್ಪನೆಯಾಗಿದೆ. ಈ ರೀತಿಯ ಚುನಾವಣಾ ಮಾದರಿ ಪ್ರಜಾಪ್ರಭುತ್ವವನ್ನು ಬಲಪಡಿಸುವುದು, ಪರಿಣಾಮಕಾರಿ ಉತ್ತಮ ಆಡಳಿತಕ್ಕೆ ಅವಕಾಶ ಕಲ್ಪಿಸುವುದು, ಸಂಪನ್ಮೂಲ ಉಳಿಸುವುದು ಮಾತ್ರವಲ್ಲ ದೇಶದಲ್ಲಿ ರಾಜಕೀಯ ಸ್ಥಿರತೆ ಮೂಡಿಸಲಿದೆ ಎಂಬುದು ಕೆಲವು ತಜ್ಞರ ಅಭಿಪ್ರಾಯವಾಗಿದೆ. ಪ್ರಸ್ತುತ ಲೋಕಸಭಾ ಚುನಾವಣೆಯ ನಂತರ, ಪ್ರತಿ ವರ್ಷವೆಂಬಂತೆ ನಾಲ್ಕೈದು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆಯಾಗುತ್ತಿವೆ. ನಿರಂತರ ಚುನಾವಣೆಗಳು ಸರಕಾರಗಳಿಗೆ ಆಡಳಿತಾತ್ಮಕ ನಿರ್ಣಯಗಳನ್ನು ಕೈಗೊಳ್ಳುವುದಕ್ಕಾಗಲೀ, ಆಡಳಿತ ಯಂತ್ರಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಕ್ಕಾಗಲೀ ಅವಕಾಶ ನೀಡುವುದಿಲ್ಲ.

ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವಿರುವ ಭಾರತಕ್ಕೆ ಚುನಾವಣಾ ಸಂದರ್ಭಗಳಲ್ಲಿ ವಿಶಿಷ್ಟ, ವಿಶೇಷ ಸವಾಲುಗಳು ಎದುರಾಗುತ್ತವೆ. ಒಂದು ನೂರ ನಲ್ವತ್ತು ಕೋಟಿ ಜನಸಂಖ್ಯೆ, ಅದರಲ್ಲಿ ಒಂದು ನೂರು ಕೋಟಿಯಷ್ಟು ಮತದಾರರಿರುವ ಭಾರತದಲ್ಲಿ ಚುನಾವಣೆ ನಡೆಸುವುದು ಅಸಾಮಾನ್ಯ ವಿಚಾರವಾಗಿದೆ. ಏಳು ರಾಷ್ಟ್ರೀಯ ಪಕ್ಷಗಳು. 150ಕ್ಕೂ ಮಿಕ್ಕಿದ ಪ್ರಾದೇಶಿಕ ರಾಜಕೀಯ ಪಕ್ಷಗಳು. 1200ಕ್ಕೂ ಅಧಿಕ ನೋಂದಾಯಿತ ಇನ್ನಿತರೆ ರಾಜಕೀಯ ಪಕ್ಷಗಳು. 6.41 ಲಕ್ಷ ಹಳ್ಳಿಗಳು, 543 ಲೋಕಸಭಾ ಸ್ಥಾನಗಳು, 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 4120 ವಿಧಾನ ಸಭಾ ಸ್ಥಾನಗಳು. 2019 ರಲ್ಲಿರುವಂತೆ 1035919 ಮತಗಟ್ಟೆಗಳಿರುವ ಭಾರತದಲ್ಲಿ ಒಂದು ದೇಶ ಒಂದು ಚುನಾವಣೆ ಅದ್ಭುತ. ಅಸಾಮಾನ್ಯ ಸವಾಲಿನ ಕಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಒಂದು ದೇಶ ಒಂದು ಚುನಾವಣೆಗೆ ಸಂಬಂಧಪಟ್ಟಂತೆ ಎಲ್ಲಾ ವಿಚಾರಗಳು, ಅವಕಾಶಗಳು, ಸಮಸ್ಯೆಗಳು, ಪರಿಹಾರಗಳ ಬಗ್ಗೆ ಅನ್ವೇಷಣೆ, ಅಧ್ಯಯನ ನಡೆಸಿ ವಿವರಗಳನ್ನು ಕಲೆಹಾಕಿ ವರದಿಯನ್ನು ಸರ್ಕಾರಕ್ಕೆ ನೀಡಲಿದೆ. 1951–52ರಲ್ಲಿ ದೇಶದಲ್ಲಿ ಮೊದಲ ಚುನಾವಣೆ ಜತೆಯಾಗಿ ನಡೆದವು. ಆನಂತರ 1957, 1962, 1967ರವರೆಗೆ ಇದು ಮುಂದುವರೆಯಿತು. 1967ರಲ್ಲಿ ಕೆಲವು ರಾಜ್ಯಗಳಲ್ಲಿ ಅಧಿಕಾರಕ್ಕೇರಿದ ವಿಪಕ್ಷ ಸರಕಾರಗಳು ನಂತರ ಪತನಗೊಂಡವು. ಮರುಚುನಾವಣೆಯೊಂದಿಗೆ ಈ ಸರಪಣಿ ತುಂಡಾಯಿತು. 1971ರಲ್ಲಿ ಕೇವಲ ಲೋಕಸಭೆಗೆ ಚುನಾವಣೆ ನಡೆಯಿತು. ಭಾರತವು ಏಕಕಾಲದ ಚುನಾವಣಾ ವ್ಯವಸ್ಥೆಗೆ ಮರಳಿದಲ್ಲಿ ಈ ರೀತಿ ಚುನಾವಣೆ ನಡೆಸುವ ವಿಶ್ವದ ಮೂರು ದೇಶಗಳಾದ ಸ್ವೀಡನ್, ಬೆಲ್ಜಿಯಂ ಹಾಗೂ ದಕ್ಷಿಣ ಆಫ್ರಿಕಾಗಳ ಸಾಲಿಗೆ ನಾಲ್ಕನೇ ದೇಶವಾಗಿ ಭಾರತ ಸೇರಲಿದೆ.

ಸ್ವೀಡನ್‌ನಲ್ಲಿ ಕೌಂಟಿ ಕೌನ್ಸಿಲ್ ಮತ್ತು ಮುನ್ಸಿಪಲ್ ಕೌನ್ಸಿಲ್ ಚುನಾವಣೆಗಳು ಏಕಕಾಲದಲ್ಲಿ ನಡೆಯುತ್ತಿವೆ. ಬೆಲ್ಜಿಯಂ ಐದು ವಿಭಿನ್ನ ರೀತಿಯ ಚುನಾವಣೆ ನಡೆಸುವ ವೈಶಿಷ್ಟ್ಯ ಹೊಂದಿದೆ.



ಈ ದೇಶದಲ್ಲಿ ಯುರೋಪಿಯನ್ ಚುನಾವಣೆಗಳು ಮತ್ತು ಫೆಡರಲ್ ಚುನಾವಣೆಗಳು ಪ್ರತಿ ಐದು ವರ್ಷಗಳಿಗೊಮ್ಮೆ ಪರಸ್ಪರ ಹೊಂದಾಣಿಕೆಯಾಗುವಂತೆ ನಡೆಯುತ್ತವೆ. ದಕ್ಷಿಣ ಆಫ್ರಿಕಾದಲ್ಲಿ ರಾಷ್ಟ್ರೀಯ ಅಸೆಂಬ್ಲಿ, ಪ್ರಾಂತೀಯ ಶಾಸಕಾಂಗಗಳು ಮತ್ತು ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಏಕಕಾಲದಲ್ಲಿ ಚುನಾವಣೆಗಳಾಗುತ್ತವೆ. ಇಂಡೋನೇಷ್ಯಾದಲ್ಲಿ 2019 ರಿಂದ ಅಧ್ಯಕ್ಷೀಯ ಮತ್ತು ಶಾಸಕಾಂಗಗಳಿಗೆ ಏಕಕಾಲದಲ್ಲಿ ಚುನಾವಣೆಗಳಾಗಲಿವೆ. ಅದಕ್ಕಾಗಿ ಇಂಡೋನೇಷ್ಯಾದ ಸಂವಿಧಾನದಲ್ಲೂ ಪರಿವರ್ತನೆ ಮಾಡಲಾಗಿದೆ. ಫಿಲಿಫೈನ್ಸ್, ಬ್ರೆಜಿಲ್, ಬೊಲಿವಿಯಾ, ಕೊಸ್ಟಾರಿಕಾ, ಗ್ವಾಟೆಮಾಲಾ ಮೊದಲಾದ ದೇಶಗಳಲ್ಲಿ ಅಧ್ಯಕ್ಷೀಯ ಸರಕಾರಗಳಿದ್ದು, ಇವುಗಳಲ್ಲಿ ಶಾಸಕಾಂಗದೊಂದಿಗೆ ಏಕಕಾಲದಲ್ಲಿ ಚುನಾವಣೆಗಳಾಗುತ್ತಿವೆ. ಈ ದೇಶಗಳ ನಾಯಕರ ಅಭಿಪ್ರಾಯದಂತೆ ಏಕಕಾಲದಲ್ಲಿ ನಡೆಯುವ ಚುನಾವಣಾ ಮಾದರಿ ಅತ್ಯುತ್ತಮವಾಗಿದ್ದು, ಸುಧಾರಣೆಗಳಿಗೆ ಅವಕಾಶಗಳಿವೆ ಎನ್ನುತ್ತಾರೆ. ಆದರೆ ಭಾರತಕ್ಕೆ ಹೋಲಿಸಿದಲ್ಲಿ ಈ ದೇಶಗಳಲ್ಲಿರುವ ಮತದಾರರ ಸಂಖ್ಯೆ ತೀರಾ ಕಡಿಮೆಯಾಗಿದೆ. ಆದ್ದರಿಂದ ಭಾರತದಂತಹ ಬೃಹತ್ ದೇಶದಲ್ಲಿ ಒಂದು ದೇಶ ಒಂದು ಚುನಾವಣೆ ಕಷ್ಟಸಾಧ್ಯ ವಿಚಾರವಾಗಿದೆ.

ಒಂದು ದೇಶ ಒಂದು ಚುನಾವಣೆ ಹಿಂದಿನ ತರ್ಕ

ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಲಿಯ ಅಧ್ಯಕ್ಷ ಮತ್ತು 2015–2019ರವರೆಗೆ ನೀತಿ ಆಯೋಗದ ಸದಸ್ಯರಾಗಿದ್ದ ಬಿಬೇಕ್ ಡೆಬ್ರಾಯ್‌ಯವರು ಕಳೆದ ಮೂವತ್ತು ವರ್ಷಗಳಲ್ಲಿ ಯಾವುದೇ ಚುನಾವಣೆ ನಡೆಯದ ವರ್ಷವಿಲ್ಲ. ಇದೇ ರೀತಿ ಮುಂದುವರಿದರೆ ಇದೇ ಪರಿಸ್ಥಿತಿ ಮೇಲುಗೈ ಸಾಧಿಸಬಹುದೆಂದು ಎಚ್ಚರಿಸಿದ್ದರು. ಭಾರಿ ಪ್ರಮಾಣದಲ್ಲಿ ಸರಕಾರಗಳು ಚುನಾವಣಾ ವೆಚ್ಚ ಭರಿಸಬೇಕಾಗುವುದು, 2019ರ ಲೋಕಸಭಾ ಚುನಾವಣಾ ಖರ್ಚು ಹತ್ತು ಸಾವಿರ ಕೋಟಿಯಾಗಿತ್ತು. ಪ್ರತಿ ರಾಜ್ಯ ವಿಧಾನಸಭಾ ಚುನಾವಣೆಗಳಿಗೆ 250 ರಿಂದ 500 ಕೋಟಿಯವರೆಗೆ ಖರ್ಚಾಗಿತ್ತು. ಈ ವೆಚ್ಚಕ್ಕೆ ರಾಜಕೀಯ ಪಕ್ಷಗಳ ಖರ್ಚು ಕೂಡಿಸಿದರೆ ಆತಂಕವಾಗುತ್ತದೆ. 2019ರ ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಮಾಡಿದ ಖರ್ಚು 60 ಸಾವಿರ ಕೋಟಿಯಷ್ಟಾಗಿತ್ತು ಎಂದು ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ ಮಾಹಿತಿ ನೀಡಿತ್ತು. ಭಾರತದ ಇತಿಹಾಸದಲ್ಲಿ 2019ರದ್ದು ಅತ್ಯಂತ ದುಬಾರಿ ಚುನಾವಣೆಯಾಗಿತ್ತು. ಭದ್ರತಾ ಪಡೆಗಳ ಸಾಗಣೆ, ನಿಯೋಜನೆ ಮತ್ತು ಭತ್ಯೆ, ನಿರಂತರ ಬರುವ ಚುನಾವಣೆಗಳಿಗಾಗಿ ಸರಕಾರಿ ಸಿಬ್ಬಂದಿಗಳ ನಿಯೋಜನೆ, ಪ್ರತಿ ಮತಗಟ್ಟೆಗೆ ಕನಿಷ್ಠ ನಾಲ್ಕರಂತೆ ದೇಶದಲ್ಲಿರುವ ಸುಮಾರು 10 ಲಕ್ಷ ಮತಗಟ್ಟೆಗಳಿಗೆ ನಲ್ವತ್ತು ಲಕ್ಷದಷ್ಟು ಸರಕಾರಿ ಸಿಬ್ಬಂದಿಗಳನ್ನು ನೇಮಿಸಬೇಕಾಗುತ್ತದೆ. ಇದು ಸರಕಾರಿ ಆಡಳಿತ ಯಂತ್ರದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಆಗಾಗ್ಗೆ ಚುನಾವಣಾ ನೀತಿ ಸಂಹಿತೆ ಹೇರುವುದರಿಂದ ಅಭಿವೃದ್ಧಿ ಹಾಗೂ ಸರಕಾರಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ರಾಜಕೀಯ ಪಕ್ಷಗಳು, ಸರಕಾರ, ಸರಕಾರಿ ಯಂತ್ರಗಳು ಶಾಶ್ವತವಾಗಿ ಪ್ರಚಾರ ಅಥವಾ ಚುನಾವಣಾ ಮನಃಸ್ಥಿತಿಯಲ್ಲಿರುತ್ತವೆ. ನಿರಂತರ ಚುನಾವಣೆಗಳು ದೀರ್ಘಾವಧಿಯಲ್ಲಿ ದೇಶಕ್ಕೆ ಹಿತವಾಗುವ ಕಾರ್ಯಯೋಜನೆಗಳಿಗಿಂತ ಜನಪ್ರಿಯ, ಜನಮರುಳು ಮಾಡುವ, ತಾತ್ಕಾಲಿಕ ಲಾಭ ನೀಡುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಏಕಕಾಲದಲ್ಲಿ ಚುನಾವಣೆಗಳಾದರೆ ಸರಕಾರಗಳು ಶಾಶ್ವತ ಚುನಾವಣಾ ಮನೋಸ್ಥಿತಿಯಿಂದ ಹೊರಬಂದು ದೇಶದ ಸಮಗ್ರ ವಿಕಾಸಕ್ಕೆ ಸಂಬಂಧಿಸಿದಂತೆ ಹೆಚ್ಚು ಗಮನ ನೀಡುತ್ತವೆ. ಇದು ದೇಶದ ಹಿತದೃಷ್ಟಿಯಿಂದ ರಚನಾತ್ಮಕ ಬದಲಾವಣೆ ತರುವುದು ಎಂದು ಪ್ರಧಾನಿ ಮೋದಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಾಜಿ ರಾಷ್ಟ್ರಪತಿಗಳಾದ ದಿವಂಗತ ಪ್ರಣಬ್ ಮುಖರ್ಜಿ ಹಾಗೂ ರಾಮನಾಥ ಕೋವಿಂದ್‌ರು ಏಕಕಾಲದ ಚುನಾವಣೆ ಪರ ಒಲವು ವ್ಯಕ್ತಪಡಿಸಿದ್ದರು. 1999ರಲ್ಲಿ ಕಾನೂನು ಆಯೋಗವು ತನ್ನ 170ನೇ ವರದಿಯಲ್ಲಿ ಕೆಲವು ಹೊಂದಾಣಿಕೆಗಳೊಂದಿಗೆ ಏಕಕಾಲದಲ್ಲಿ ಚುನಾವಣೆಗೆ ಶಿಫಾರಸ್ಸು ಮಾಡಿತ್ತು. ಚುನಾವಣಾ ಆಯೋಗವು ತಾತ್ವಿಕ ಬೆಂಬಲ ನೀಡಿತ್ತು. ಸಂಸದೀಯ ಸ್ಥಾಯಿ ಸಮಿತಿಯು 2015ರ ಡಿಸೆಂಬರ್‌ನಲ್ಲಿ ನೀಡಿದ ವರದಿಯಲ್ಲಿ ಏಕಕಾಲಕ್ಕೆ ಚುನಾವಣೆಯನ್ನು ಎರಡು ಹಂತಗಳಲ್ಲಿ ನಡೆಸಬಹುದೆಂದು ತಿಳಿಸಿತ್ತು. ಲೋಕಸಭೆಯೊಂದಿಗೆ ಕೆಲವು ವಿಧಾನಸಭೆಗಳಿಗೆ ಹಾಗೂ ಮಧ್ಯಂತರದಲ್ಲಿ ಉಳಿದ ವಿಧಾನಸಭೆಗಳಿಗೆ ಚುನಾವಣೆ ನಡೆಸಬಹುದೆಂದು ವಿವರಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಆಗಾಗ್ಗೆ ಬರುತ್ತಿರುವ ಚುನಾವಣೆಗಳಿಂದ ಮತದಾರರು ಮತದಾನದಲ್ಲಿ ಆಸಕ್ತಿ ಕಳೆದುಕೊಂಡಿದ್ದಾರೆ. ಏಕಕಾಲದ ಚುನಾವಣೆಯಲ್ಲಿ ಮತದಾನದ ಪ್ರಮಾಣ ವೃದ್ಧಿಯಾಗುವ ಅವಕಾಶವಿದೆ ಎನ್ನುವ ಅಭಿಪ್ರಾಯವೂ ಇದೆ.

ಏಕಕಾಲದ ಚುನಾವಣೆಯ ವಿರೋಧಿ ಅಂಶಗಳು

ಈ ಚುನಾವಣಾ ಮಾದರಿಯು ದೇಶದ ಒಕ್ಕೂಟ ತತ್ವಕ್ಕೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರಲಿದೆ ಎನ್ನುತ್ತಾರೆ. ರಾಷ್ಟ್ರೀಯ ವಿಷಯಗಳ ಅಬ್ಬರದ ಮುಂದೆ ಪ್ರಾಂತೀಯ ವಿಚಾರಗಳು ಗೌಣವಾಗಿ ಪ್ರಾಂತೀಯ ಸ್ವಾಯತ್ತೆಗೆ ಅಪಾಯ ತರಬಹುದು. ಚುನಾಯಿತ ಸರಕಾರ ಮಧ್ಯಾವಧಿಯಲ್ಲಿ ಬಹುಮತ ಕಳೆದುಕೊಂಡು ಪತನಗೊಂಡಲ್ಲಿ ವಿಪಕ್ಷಗಳಿಗೂ ಸರಕಾರ ರಚನೆ ಸಾಧ್ಯವಾಗದ ಸಂದರ್ಭದಲ್ಲಿ ಐದು ವರ್ಷವಾಗುವವರೆಗೆ ಕೇಂದ್ರದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕೆ? ಮಧ್ಯಾವಧಿಯಲ್ಲಿ ಕೇಂದ್ರಕ್ಕೆ ಚುನಾವಣೆ ಅನಿವಾರ್ಯವಾದಲ್ಲಿ ರಾಜ್ಯ ಸರಕಾರಗಳನ್ನೂ ವಿಸರ್ಜಿಸಿ ಚುನಾವಣೆ ಮಾಡಬೇಕೆ? ಇದರಿಂದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ಪ್ರಬಲವಾಗಿ ರಾಜ್ಯಗಳ ಸರ್ಕಾರಗಳು ದುರ್ಬಲವಾಗುವುದೆಂಬ ವಾದವಿದೆ. ಇದೇ ರೀತಿ ಯಾವುದಾದರೂ ಒಂದು ರಾಜ್ಯ ಸರ್ಕಾರ ಬಹುಮತ ಕಳೆದುಕೊಂಡಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಯವರೆಗೆ ಆ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಇರಬೇಕೇ? ಓರ್ವ ಸಂಸದ, ಶಾಸಕ ನಿಧನರಾದಲ್ಲಿ ಅಥವಾ ಕೆಲವು ಸಂಸದರು, ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದಲ್ಲಿ ಏಕ ದೇಶ ಏಕ ಚುನಾವಣೆ ನೀತಿಯಂತೆ ಮರು ಚುನಾವಣೆ ನಡೆಸುವಂತಿಲ್ಲ. ಇಂತಹ ಸಂದರ್ಭಗಳಲ್ಲಿ ಚುನಾವಣೆಯಲ್ಲಿ ಸೋತ ದ್ವಿತೀಯ ಸ್ಥಾನಿ ಯನ್ನು ಸಂಸದ, ಶಾಸಕರಾಗಿ ಮಾಡಬಹುದೆ? ಅತಿ ತೆಳುವಾದ ಬಹುಮತವಿರುವ ಪಕ್ಷ ಇಂತಹ ಕ್ರಮದಿಂದ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ಆಡಳಿತಾರೂಢ ಪಕ್ಷ ಉಪ ಚುನಾವಣೆ ಅಪೇಕ್ಷಿಸುತ್ತದೆ ವಿನಃ ದ್ವಿತೀಯ ಸ್ಥಾನೀಯನ್ನು ಸಂಸದರಾಗಿ, ಶಾಸಕರಾಗಿ ಒಪ್ಪುವುದಿಲ್ಲ. ಈ ಪ್ರಶ್ನೆಗಳಿಗೂ ಏಕಕಾಲ ಚುನಾವಣಾ ವ್ಯವಸ್ಥೆಯಲ್ಲಿ ಪರಿಹಾರ ಕಂಡುಕೊಳ್ಳಬೇಕಾಗಿದೆ. 'ಒಂದು ದೇಶ ಒಂದು ಚುನಾವಣೆ' ಕಾಲ ಕ್ರಮೇಣ ರಷ್ಯಾ, ಚೀನಾದಲ್ಲಿರುವಂತೆ 'ಒಂದು ದೇಶ ಒಂದು ಪಕ್ಷವೆಂಬ ಪರಿಸ್ಥಿತಿ ತರುವ ಅಪಾಯವಿದೆ. ಲೋಕಸಭಾ ಸಚಿವಾಲಯವೂ ಏಕಕಾಲಿಕ ಚುನಾವಣೆಗೆ ಸಹಮತ ಹೊಂದಿದರೂ ಸಮಸ್ಯೆಗಳಿರುವುದಾಗಿ ಒಪ್ಪಿಕೊಂಡಿದೆ. ಇವರ ಪ್ರಕಾರ ಚುನಾವಣಾ ಆಯೋಗವು ದೊಡ್ಡ ಪ್ರಮಾಣದಲ್ಲಿ ಎಲೆಕ್ಟ್ರಾನಿಕ್ ಮತ ಯಂತ್ರಗಳು (ಇವಿಎಂ) ಮತ್ತು ವಿವಿಪಿಎಟಿ ಯಂತ್ರಗಳನ್ನು ಖರೀದಿಸಬೇಕಾಗುತ್ತದೆ. 2018 ರಲ್ಲಿ ದೇಶದಲ್ಲಿ 20 ಲಕ್ಷ ಇವಿಎಂಗಳಿದ್ದವು. ಏಕಕಾಲಿಕ ಚುನಾ ವಣೆಗೆ ಇನ್ನೂ 15 ಲಕ್ಷ ಹೆಚ್ಚುವರಿ ಇವಿಎಂಗಳು ಬೇಕು. ಇವುಗಳ ಖರೀದಿಗೆ 9284 ಕೋಟಿ ರೂ. ಅಗತ್ಯವಿದೆ. 15 ವರ್ಷಕ್ಕೊಮ್ಮೆ ಇವುಗಳನ್ನು ಬದಲಾಯಿಸಬೇಕಾಗಿದ್ದು ಮತ್ತೆ ಖರ್ಚು ಬರುತ್ತದೆ. ಈ ಯಂತ್ರಗಳ ನಿರ್ವಹಣೆ, ಸುರಕ್ಷಿತವಾಗಿಡಲು ಗೋದಾಮಿನ ವೆಚ್ಚವು ಹೆಚ್ಚುತ್ತದೆ ಎಂದು ತಿಳಿಸಿದೆ.

ಒಂದು ದೇಶ ಒಂದು ಚುನಾವಣೆ ಸುಲಭವಲ್ಲ

ಈ ಮಸೂದೆ ಅಂಗೀಕಾರಕ್ಕೆ ಸಾಂವಿಧಾನಿಕ ತಿದ್ದುಪಡಿಯ ಅಗತ್ಯವಿದೆ. ಲೋಕಸಭೆ ಮತ್ತು ರಾಜ್ಯಸಭೆಯ ಮೂರನೇ ಎರಡರಷ್ಟು ಸದಸ್ಯರು ಬೆಂಬಲ ನೀಡಬೇಕು. ಜತೆಗೆ ಕನಿಷ್ಠ ಅರ್ಧದಷ್ಟು ರಾಜ್ಯಗಳು ಅನುಮೋದಿಸಬೇಕು. ಪ್ರಸ್ತುತ ಬಿಜೆಪಿ ಹತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಅದರಲ್ಲಿ ಬೆಂಬಲಿತ ಸರಕಾರಗಳಿವೆ. ಲೋಕಸಭೆಯಲ್ಲಿ ಎನ್‌ಡಿಎ ಬಲ 333 (ಶೇ.61) ಇನ್ನೂ ಶೇ.6ರಷ್ಟು ಬೆಂಬಲ ಕ್ರೋಢೀಕರಿಸಬೇಕು. ರಾಜ್ಯಸಭೆಯಲ್ಲಿ ಎನ್‌ಡಿಎಯು ಕೇವಲ ಶೇ.38 ಸ್ಥಾನ ಹೊಂದಿದೆ.

ಏಕಕಾಲಿನ ಚುನಾವಣೆಯು ರಾಷ್ಟ್ರೀಯ ಏಕತೆ ಮತ್ತು ಪ್ರಾಂತೀಯ ಪ್ರಭುತ್ವದ ನಡುವೆ ಸಮನ್ವಯ ತರುವುದೆಂಬ ಅಭಿಪ್ರಾಯವಿದೆ. ಅದೇ ರೀತಿ ಈ ಮಾದರಿಯು ಸಂಸದೀಯ ವ್ಯವಸ್ಥೆಯಲ್ಲಿ ದಕ್ಷತೆ ತರುವುದರೊಂದಿಗೆ ದೇಶದ ರಾಜಕೀಯದಲ್ಲಿ ಸ್ಥಿರತೆ ಮತ್ತು ಜಾಗತಿಕ ಮಟ್ಟದಲ್ಲಿ ಉತ್ತಮ ಆಡಳಿತಕ್ಕೆ ಭಾರತ ಮಾದರಿಯಾಗಬಹುದು ಎಂಬ ಅಭಿಪ್ರಾಯವಿದೆ.

ಅಭಯದ ಸಂಕೇತವೆಂದು ನಂಬಿ ಕೈ ಹಿಡಿದ ಕುಮಾರಣ್ಣಗೆ ಕೈ ಕೊಟ್ಟವರಲ್ಲವೇ ನೀವು...!

ಬೆಂಗಳೂರು, ಅ.11(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರ ಬಗ್ಗೆ ಅಸಂಬದ್ಧ ಟೀಕೆ ಮಾಡಿದ್ದ ಕಾಂಗ್ರೆಸ್ ಪಕ್ಷಕ್ಕೆ ಜೆಡಿಎಸ್ ತೀವ್ರ ತಿರುಗೇಟು ನೀಡಿದೆ. ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡು ಗಡೆ ಮಾಡಿರುವ ಜೆಡಿಎಸ್, ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದಿದೆ.

ಮೂರ್ಖರಿಗೆ ಬುದ್ಧಿ ಮಂದ ಎನ್ನುವುದು ಮಾತು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅದೇ ಆಗಿದೆ. ಅಧಿಕಾರದ ಮದದಿಂದ ಅದರ ಮಿದುಳಿಗೂ ಗೆದ್ದಲು ಹಿಡಿದಿದೆ.



4 ವರ್ಷದ ಹಿಂದೆ ಸರಕಾರ ಮಾಡಲು ಸಿದ್ದರಾಮಯ್ಯ, ಡಿಕೆಶಿ ಅವರ ಮನೆಗೆ ಕುಮಾರಸ್ವಾಮಿ ಅವರು ಬಂದಿದ್ದರಾ? ಸುಳ್ಳು ಹೇಳುವುದಕ್ಕೆ ಸಾಸಿವೆ ಕಾಳಿನಷ್ಟಾದರೂ ಸಂಕೋಚ ಬೇಡವೇ? ಎಂದು ಜೆಡಿಎಸ್ ತರಾಟೆಗೆ ತೆಗೆದುಕೊಂಡಿದೆ. 135 ಸೀಟು ಗೆದ್ದಿದ್ದೇವೆ ಎನ್ನುವ ಧಿಮಾಕಿನಲ್ಲಿ ಏನು ಹೇಳಿದರೂ ಜನ ನಂಬುತ್ತಾರೆಂಬ ಅಹಂಕಾರವೇ? ಆಗ ದೇವೇಗೌಡರ ಮನೆ ಅಂಗಳದಲ್ಲಿ ಅಂಗಿ ಮಡಚಿ ಮುಖ ಒಣಗಿಸಿಕೊಂಡು ನಿಂತ ಧೀರರು ಯಾರೆಂದು ಗೊತ್ತಿಲ್ಲವೇ? ಎಲ್ಲೋ ಇದ್ದ ಕುಮಾರಸ್ವಾಮಿ ಅವರನ್ನು ಪಾಪರಾಜ್ಜಿಗಳಂತೆ ಬೆನ್ನತ್ತಿ, ಆಮೇಲೆ ಕಾಡಿ ಬೇಡಿ ದೇವೇಗೌಡರ ಪದತಲಕ್ಕೆ ಬಿದ್ದವರ ಪುರಾಣ ಬಿಚ್ಚಿಡಬೇಕೆ? ಎಂದು ಜೆಡಿಎಸ್ ಕಾಂಗ್ರೆಸ್ಸಿಗೆ ಎಚ್ಚರಿಕೆ ನೀಡಿದೆ.

'ಕೈ' ಅಭಯದ ಸಂಕೇತವೆಂದು ನಂಬಿದ್ದರು ಕುಮಾರಸ್ವಾಮಿ. ಆದರೆ, ಡಿ.ಕೆ.ಶಿವಕುಮಾರ್ ಅವರದ್ದು 'ಕೈ' ಎತ್ತುವುದಷ್ಟೇ ಅಲ್ಲ, 'ಕೈ' ಕೊಡುವುದರಲ್ಲೂ ಎತ್ತಿದ 'ಕೈ' ಎಂದು ಅವರಿಗೆ ಗೊತ್ತಾಗಲೇ ಇಲ್ಲ. ಅಸೆಂಬ್ಲಿಯಲ್ಲಿ 'ಕೈ' ಎತ್ತಿದರು, ಮಂಡ್ಯದಲ್ಲೂ 'ಕೈ' ಎತ್ತಿದರು. ಬೆಂಗಳೂರು ಗ್ರಾಮಾಂತರದಲ್ಲೂ 'ಕೈ' ಎತ್ತಿದರು ಪಾಪ... ಕುಮಾರಸ್ವಾಮಿ ಅವರು ನಂಬಿದರು. ಬೆಂಗಳೂರು ಗ್ರಾಮಾಂತರದಲ್ಲಿ ಕುಮಾರಸ್ವಾಮಿಯವರು, ಅವರ 'ಕೈ' ಹಿಡಿದರು. ಮಂಡ್ಯದಲ್ಲಿ ಅದೇ 'ಕೈ' ಅವರನ್ನು ನಡುರಸ್ತೆಯಲ್ಲಿ ಬಿಟ್ಟು ಜಾರಿಕೊಂಡಿತು.

ಇದೆಂತಾ ಕೈಚಳಕ? ಅವರ ಹಸ್ತವಾಸಿ ವಿಶ್ವಾಸಘಾತುಕಕ್ಕೇ ಹೆಸರುವಾಸಿ. ಅಲ್ಲವೇ? ಎಂದು ಜೆಡಿಎಸ್ ಖಾರವಾಗಿ ಕೇಳಿದೆ.

ಕುಮಾರಸ್ವಾಮಿ ಅವರ ಕಣ್ಣುಗಳಲ್ಲಿ ಕಣ್ಣೀರು ಬರುತ್ತದೆ, ನಿಜ. ಇಲ್ಲ ಎಂದವರು ಯಾರು? ಇನ್ನೊಬ್ಬರ ಕಣ್ಣಲ್ಲಿ ರಕ್ತ ಸುರಿಸುವ ಕೆಲಸವನ್ನು ಅವರೆಂದೂ ಮಾಡಿಲ್ಲ, ಅವರ ನಾಲಿಗೆ ಸತ್ಯದ ಕಡೆಗೆ ಹೊರಳಿದೆಯೇ ಹೊರತು, ಅಸತ್ಯದೆಡೆಗಲ್ಲ.

ಅಣ್ಣಾ, ಅಣ್ಣಾ ಎಂದ ಆಚಾರವಿಲ್ಲದ ಆ ನಾಲಿಗೆ, ಇಂಥಾ ನೀಚ ಬುದ್ಧಿ ಬಿಡುವುದು ಯಾವಾಗ? ಪಿಹೆಚ್.ಡಿ ಮಾಡೋದಕ್ಕೆ ಅವರಿಗಿಂತ ಉತ್ತಮ ಗೈಡ್ ಬೇರೆ ಸಿಕ್ಕಾರೆಯೇ ನಿಮಗೆ? ಎಂದು ಜೆಡಿಎಸ್ ಪ್ರಶ್ನೆ ಮಾಡಿದೆ. ಮಾತೆತ್ತಿದರೆ ಜಾತಿಗಳನ್ನು ಎಳೆದು ತರುತ್ತೀರಿ. ಕನಕಪುರ ಸುತ್ತಮುತ್ತ ಅದೇ ಮಹಾನುಭಾವರಿಂದ ಒಕ್ಕಲೆದ್ದವರು ಎಷ್ಟೋ ಜನ. ಅವರೆಲ್ಲ ಯಾವ ಜಾತಿಯವರು? ಅಧಿಕಾರಕ್ಕೊಂದು ಜಾತಿ, ಕೊಳ್ಳೆ ಹೊಡೆಯುವುದಕ್ಕೊಂದು ಜಾತಿಯೇ! ಅಲ್ಲಿ ಹರಿದಿದ್ದು ರಕ್ತ ಕಣ್ಣೀರು, ಅವರ ಉಸಿರು ತಟ್ಟಿದ್ದಕ್ಕೇ ತಿಹಾರು! ಕರ್ಮಕ್ಕೆ ತಕ್ಕಂತೆಯೇ ಫಲ! ಶ್ಲೋಕಗಳನ್ನು ಶೋಕಿಗೆ ಬಳಸಿಕೊಳ್ಳುವ ವ್ಯಕ್ತಿಗೆ ಇಷ್ಟು ಸಾಮಾನ್ಯ ಜ್ಞಾನವೂ ಇಲ್ಲವೇ? ಎಂದಿದೆ ಜೆಡಿಎಸ್.

ಜಾತ್ಯತೀತ ಎಂದ ಪೆನ್ನು ಜಾತಿ ಜಾತಿ ಎಂದು ಗೀಚುತ್ತಿದೆ! ಮಿದುಳಿಗೂ ಪೆನ್ನಿಗೂ ಲಿಂಕ್ ತಪ್ಪಿದೆಯಾ ಹೇಗೆ? ಅಥವಾ ಬೇರೆಯವರು ಬೆಪ್ಪರು ಎನ್ನುವ ಮದವೇ? ಅಧಿಕಾರಕ್ಕಾಗಿ ಶಿವಸೇನೆಯ ಜತೆ ಮಹಾ ಶೋ ನಡೆಸಿದಾಗ ಆ ಜಾತ್ಯತೀತತೆಯನ್ನು ಯಾವ ಶೋಕೇಸಿನಲ್ಲಿ ಇಟ್ಟಿದ್ದೀರಿ? ಬಿಜೆಪಿ ಜತೆ ಸುದೀರ್ಘ ಕಾಲ ಅಧಿಕಾರದ ಸುಖ ಅನುಭವಿಸಿದ ನಿತೀಶ್ ಕುಮಾರ್ ಪಕ್ಕದಲ್ಲಿ ಆಸೀನರಾದಾಗ ಜಾತ್ಯತೀತವನ್ನು ಎಲ್ಲಿ ಜೇತಕ್ಕೆ ಇಟ್ಟಿದ್ದೀರಿ? ಇಂಡಿಯಾ ಕೂಟದಲ್ಲಿರುವ ಬಿಜೆಪಿಯ ಎಲ್ಲಾ ನೇರ ಫಲಾನುಭವಿಗಳ ಪದತಲದಲ್ಲಿ ಹಣೆ ಇಟ್ಟಾಗ ಹಸ್ತದ ಜಾತ್ಯತೀತತೆಯನ್ನು ಮಡಚಿ ಯಾರ ಜೇಬಿನಲ್ಲಿ ಇಟ್ಟಿದ್ದಿರಿ? ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಒಂದೆಡೆ ಜಾತ್ಯತೀತತೆ; ಮತ್ತೊಂದೆಡೆ ಜಾತಿ ಗಣಿತ: ಕೊಳಕು ಮಂಡಲಕ್ಕೆ ಎರಡು ತಲೆ ಇರುವಂತೆ ಕಾಂಗ್ರೆಸ್ಸಿಗೂ ಎರಡು ತಲೆ! ಒಂದರ ನಾಲಿಗೆಯ ಮೇಲೆ ಜಾತ್ಯತೀತ, ಇನ್ನೊಂದರ ನಾಲಿಗೆ ಮೇಲೆ ಜಾತಿಗಣಿತ! ಜನರು ಛೀ! ಥೂ! ಎನ್ನುತ್ತಿದ್ದಾರೆ. ಸ್ವತಃ ಕಾಂಗ್ರೆಸ್ಸೇ ಪ್ರಾದೇಶಿಕ ಪಕ್ಷಗಳ ಜೇತಕ್ಕೆ ಬಿದ್ದಿರುವಾಗ ಕುಮಾರಸ್ವಾಮಿ ಅವರ ಬಗ್ಗೆ ಮಾತನಾಡಲು ನಾಚಿಕೆ ಆಗುವುದಿಲ್ಲವೇ? ಎಂದು ಟೀಕಿಸಿದೆ.

ನಿಮ್ಮ ನಾಲಿಗೆ ಕಂಡು ಬಣ್ಣ ಬದಲಿಸುವ ಆ ಗೋಸುಂಬೆಯೂ ನಾಚುತ್ತಿದೆ...

ಬೆಂಗಳೂರು, ಅ.11– ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ಪರಸ್ಪರ ವಾಗ್ದಾಳಿ ಜೋರಾಗುತ್ತಿದೆ. ಮೊನ್ನೆಯಷ್ಟೆ ಮಾಜಿ ಸಿಎಂ ಎಚ್.ಡಿ ಕುಮಾರ ಸ್ವಾಮಿ ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದಿದ್ದರು. ನನ್ನ ನಂಬಿಸಿ ಶಿವಕುಮಾರ್ ಕುತ್ತಿಗೆ ಕುಯ್ದರು ಎಂದಿದ್ದರು.



ಕುಮಾರಸ್ವಾಮಿ ಅವರ ಆರೋಪಕ್ಕೆ ಕಾಂಗ್ರೆಸ್ ಪ್ರತಿಕ್ರಿಯೆ ನೀಡಿದೆ, ಈ ಸಂಬಂಧ ಟ್ವೀಟ್ ಮಾಡಿರುವ ಕಾಂಗ್ರೆಸ್, ಎಚ್.ಡಿ. ಕುಮಾರಸ್ವಾಮಿ ಅವರೇ ಮೊದಲು ಮೈತ್ರಿ ಸರ್ಕಾರವನ್ನು ಉರುಳಿಸಿದ್ದು ಯಡಿಯೂರಪ್ಪನವರು ಎಂದಿರಿ, ನಂತರ ಮೈತ್ರಿ ಸರ್ಕಾರ ಬೀಳಿಸಿದ್ದು ಸಿದ್ದರಾಮಯ್ಯನವರು ಎಂದಿರಿ, ಈಗ ಶಿವಕುಮಾರ್ ಅವರು ಮೈತ್ರಿ ಸರ್ಕಾರ ಬೀಳಿಸಿದರು ಎನ್ನುತ್ತಿದ್ದೀರಿ. ಮಾತು ಬದಲಿಸುವ ನಿಮ್ಮ ನಾಲಿಗೆಯನ್ನು ಕಂಡು ಬಣ್ಣ ಬದಲಿಸುವ ಗೋಸುಂಬೆಯೂ ನಾಚಿಕೊಳ್ಳುತ್ತಿದೆ. ಅಂದು ಶಾಸಕರನ್ನು ಅಪಹರಿಸಿ ಸ್ಪೆಷಲ್ ಫ್ಲೈಟ್ ಹತ್ತಿಸಿ ಕಳಿಸಿದವರೊಂದಿಗೆ ಇಂದು ಕುಳಿತು ನಾಲಿಗೆ ಹೊರಳಿಸುತ್ತಿರುವ ನಿಮಗೆ ಕನಿಷ್ಠ ಲಜ್ಜೆ ಎಂಬುದಿಲ್ಲದಾಗಿದ್ದು ದುರಂತ ಎಂದು ಲೇವಡಿ ಮಾಡಿದೆ.


ಕುಮಾರಸ್ವಾಮಿಯವರೇ, ನಿಮ್ಮ ಪಕ್ಷದಲ್ಲಿ ನಿಮ್ಮ ಕುಟುಂಬವಲ್ಲದೆ ಬೇರೆ ಇನ್ಯಾರಿಗಾದರೂ ಉಸಿರಾಡಲು ಬಿಟ್ಟಿದ್ದೀರಾ? ಸಿದ್ದರಾಮಯ್ಯನವರಿಗೆ ದ್ರೋಹ ಎಸಗಿದಿರಿ, ಹೆಚ್. ವಿಶ್ವನಾಥ್ ಅವರಿಗೆ ದ್ರೋಹ ಮಾಡಿದಿರಿ, ಈಗ ಸಿಎಂ ಇಬ್ರಾಹಿಂ ಅವರನ್ನು ಮೂಲೆ ಗುಂಪು ಮಾಡಿದಿರಿ, ಬೆಂಬಲಿಸಿದ ಜಾತ್ಯತೀತ ಸಿದ್ಧಾಂತದ ಮತದಾರರು ಹಾಗೂ ಅಲ್ಪಸಂಖ್ಯಾತರಿಗೆ ವಂಚಿಸಿದಿರಿ. ಹಿಂದೆ ನಿಮ್ಮನ್ನು ಹಾಗೂ ನಿಮ್ಮ ಪಕ್ಷವನ್ನು ಬೆಳೆಸಿದ ಯಾರ ಬಗ್ಗೆಯೂ ನಿಮ್ಮಲ್ಲಿ ಕೃತಜ್ಞತೆಯಾಗಲಿ, ಉಪಕಾರ ಸ್ಮರಣೆಯಾಗಲಿ ಇಲ್ಲ. ನಿಮ್ಮ ಕೈಗೆ ಅಧಿಕಾರ ಕೊಟ್ಟವರ ಬಗ್ಗೆ ಕನಿಷ್ಠ ಗೌರವವೂ ಇಲ್ಲ. ಕುಮಾರಸ್ವಾಮಿ ಎಂದರೆ ಅವಕಾಶವಾದಿ, ಗೋಸುಂಬೆ ಬುದ್ಧಿಯ ರಾಜಕಾರಣಿ ಎಂದು ರಾಜ್ಯದ ಜನತೆಗೆ ಅರಿವಾಗಿದೆ ಎಂದಿದೆ.

ಡಿ.ಕೆ.ಶಿವಕುಮಾರ್ ಅವರು ನಿಮ್ಮನ್ನು ಬೆಂಬಲಿಸಿ ಸಿಎಂ ಕುರ್ಚಿಯ ಮೇಲೆ ಕೂರಿಸಿದ್ದಾಗ ಬಿಎಸ್ ಯಡಿಯೂರಪ್ಪ ಅವರು ಒಂದು ಮಾತು ಹೇಳಿದ್ದರು. ಕುಮಾರಸ್ವಾಮಿಯನ್ನು ನಂಬಬೇಡ ಶಿವಕುಮಾರ್, ಅವರು ನಿಮ್ಮ ಬೆನ್ನಿಗೆ ಚೂರಿ ಹಾಕುತ್ತಾರೆ ಎಂದಿದ್ದರು. ಅಂದು BSY ಅವರು ಹೇಳಿದ ಮಾತನ್ನು ಇಂದು ನಿಜ ಮಾಡುತ್ತಿದ್ದೀರಿ ಅಲ್ಲವೇ? ಅಧಿಕಾರ ಅನುಭವಿಸಿ BSY ಅವರಿಗೂ ವಚನಭ್ರಷ್ಟರಾಗಿ ವಂಚಿಸಿದ್ದಿರಿ, ಈಗ ಡಿ.ಕೆ. ಶಿವಕುಮಾರ್ ಅವರಿಗೂ ವಂಚಿಸುತ್ತಿದ್ದೀರಿ ಎಂದು ಕಾಂಗ್ರೆಸ್ ಟೀಕಿಸಿದೆ.

ಇದು ಆ ಪಕ್ಷದ ಪಾರಂಪರಿಕ ವಾಡಿಕೆ! 75 ವರ್ಷಗಳಿಂದ ಅದನ್ನೇ ಮಾಡಿದೆ. ತನ್ನ ಅಡಿಗೆ ಬೆಂಕಿ ಬಿದ್ದಾಗಲೆಲ್ಲ ಜಾತ್ಯತೀತತೆ ಜಪ ಮಾಡುತ್ತದೆ. ಕೋಮುವಾದ, ಜಾತ್ಯತೀತವಾದ ಎನ್ನುತ್ತಾ 'ಜಾತಿಗಣಿತ'ದ ಮೂಲಕ ಜನರನ್ನು ಕೂಡಿ ಕಳೆದು ಇಬ್ಭಾಗಿಸುತ್ತದೆ ಎಂದು ಜೆಡಿಎಸ್ ಕಿಡಿಕಾರಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಂಸದ ಪ್ರತಾಪ ಸಿಂಹ ವಿರುದ್ಧ ಆದಿ ಕರ್ನಾಟಕ ಮಹಾಸಂಘ ಪ್ರತಿಭಟನೆ



ಮೈಸೂರು,ಅ.11(ಎಸ್‌ಪಿಎನ್)– ಮಹಿಷಾ ದಸರಾಗೆ ಪೊಲೀಸ್ ಇಲಾಖೆ ಅನುಮತಿ ನಿರಾಕರಣೆ ಹಾಗೂ ಮಹಿಷ ದಸರಾ ವಿರೋಧಿಸುತ್ತಿರುವ ಸಂಸದ ಪ್ರತಾಪ ಸಿಂಹ ವಿರುದ್ಧ ಆದಿಕರ್ನಾಟಕ ಮಹಾಸಭಾ ಕಾರ್ಯಕರ್ತರು ಬುಧವಾರ ಬಲ್ಲಾಳ್(ಅಶೋಕ) ವೃತ್ತದಲ್ಲಿ ಜಮಾಯಿಸಿ ಮಹಿಷಾಸುರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಪ್ರತಿಭಟನೆ ನಡೆಸಿದರು.

ಮಹಿಷಾ ದಸರಾ ಆಚರಣೆ ವಿರುದ್ಧ ಹಾಗೂ ಮಹಿಷ ದಸರಾ ಅನುಷ್ಠಾನ ಸಮಿತಿ ಸದಸ್ಯ ಪುರುಷೋತ್ತಮ್ ವಿರುದ್ಧ ಸಂಸದರು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ವಿವಿಧ ಘೋಷಣೆಗಳನ್ನು ಕೂಗಿ, ಪ್ರತಾಪ ಸಿಂಹ ರಾಜಕಾರಣಕ್ಕಾಗಿ ಮಹಿಷಾ ದಸರಾ ಬಳಸಿಕೊಳ್ಳಬಾರದಿತ್ತು. ಮಹಿಷ ನಮ್ಮ ಪೂರ್ವಜ ದೊರೆ, ಆತನನ್ನು ನೆನಪಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ ಎಂದು ಪ್ರತಿಭಟನಾಕಾರರು ತಿಳಿಸಿದರು.

ಮಹಿಷ ದಸರಾ ಅನುಷ್ಠಾನ ಸಮಿತಿ ಸದಸ್ಯರು ಸೇರಿದಂತೆ ಇತರೆ ಪ್ರಗತಿಪ್ರರ ಮುಖಂಡರ ಬಗ್ಗೆ ಅವಹೇಳನಕಾರಿಯಾಗಿ ಮಾಧ್ಯಮಗಳಿಗೆ ಹೇಳಿಕೆ ನೀಡಿರುವುದು ಅಕ್ಷಮ್ಯ ಅಪರಾಧ. ಸಂಸದರು ಕೂಡಲೇ ತಮ್ಮ ಹೇಳಿಕೆಯನ್ನು ವಾಪಸ್ಸು ಪಡೆದು ಕ್ಷಮೆ ಯಾಚಿಸಬೇಕು. ಪೊಲೀಸ್ ಇಲಾಖೆ ಅವರ ವಿರುದ್ಧ ಸ್ವಯಂ ದೂರು ದಾಖಲಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಆದಿ ಕರ್ನಾಟಕ ಮಹಾಸಂಘದ ಸುನೀಲ್, ಡಿ.ರಾಜು, ಆರ್.ಸಿ.ಮಹೇಶ್, ಕೃಷ್ಣಮೂರ್ತಿ, ಕನಕರಾಜ್ ಸೇರಿದಂತೆ, ಅಶೋಕಪುರಂ ದೊಡ್ಡಗರಡಿ ಹಾಗೂ ಚಿಕ್ಕಗರಡಿ ಮುಖಂಡರು ಉಪಸ್ಥಿತರಿದ್ದರು. ಸುಮಾರು ಅರ್ಧಗಂಟೆ ಕಾಲ ಬಲ್ಲಾಳ್ ವೃತ್ತದಲ್ಲಿ ಸಂಸದರ ಹೇಳಿಕೆ ವಿರೋಧಿಸಿ ಮಾನವ ಸರಪಳಿ ರಚಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
SALES DISTRIBUTORS & SALES REPRESENTATIVES
FOR SALES OF POOJA ITEMS
FULL TIME / PART TIME
MALE / FEMALE
Contact: 9886351590

WANTED
KRISHI AAVISHKAAR
Pure Veg Restaurant, Mysore
* Chefs for Chinese, Indian, North and Organic dishes,
* Helping Assistants * House Keeping
Interested candidates please contact or whatsapp your resume to
Call : 8431344535

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್ಸ್ 03
ಹೆಲ್ಪರ್ಸ್ 04
ಸೈನ ಅಡ್ಡ, ಮಂಡಿಮೊಹಲ್ಲಾ, ಮೈಸೂರು
+91 95353 55376

ಬೇಕಾಗಿದ್ದಾರೆ
ಮೈಸೂರಿನಲ್ಲಿ ಪ್ರಾರಂಭವಾಗುತ್ತಿರುವ ಮೈಸೂರಿನಲ್ಲಿ ಕಂಪನಿ ಅನಂತಕಾಯ ಪ್ರೈ.ಲಿ. ಸೇಲ್ಸ್ ಮ್ಯಾನೇಜರ್–1, ಜನರಲ್ ಮ್ಯಾನೇಜರ–1, ಅಕೌಂಟ್ಸ್ ಅಸಿಸ್ಟಂಟ್ –1, ಪ್ರೊಡೆಕ್ಷನ್ ಸೂಪರ್‌ವೈಸರ್–1, ಸಹಾಯಕರು–6, ಮಷೀನ್ ಆಪರೇಟರ್–3
6361530704

ಕುಡಿತದ ಚಟದಿಂದ ಮುಕ್ತರಾಗಬೇಕೆ ?
ಮೈಸೂರಿನ ಚೈತನ್ಯ ಫೌಂಡೇಷನ್ ವತಿಯಿಂದ ಕುಡಿತ ಮತ್ತು ಮಾದಕ ವಸ್ತು ವ್ಯಸನದಿಂದ ಬಳಲುತ್ತಿರುವವರನ್ನು ಚಟದಿಂದ ಮುಕ್ತಗೊಳಿಸಲಾಗುತ್ತದೆ. ವೈದ್ಯರಿಂದ ಚಿಕಿತ್ಸಾ ಸೌಲಭ್ಯ, ಯೋಗ, ಧ್ಯಾನದೊಂದಿಗೆ ಆಪ್ತಸಮಾಲೋಚನೆ ಸಿಗಲಿದೆ. (ಕಮಿಷನ್ ಆಧಾರದಲ್ಲಿ ಉದ್ಯೋಗ ಲಭ್ಯವಿದೆ). ಹೆಚ್ಚಿನ ಮಾಹಿತಿಗೆ
9164469570, 6361744190

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಹೊಸ ಮನೆ ಮಾರಾಟಕ್ಕಿದೆ
(ಪೂರ್ವ ದಿಕ್ಕು) ಹಾಗೂ ಸೈಟುಗಳು ಮಾರಾಟಕ್ಕಿವೆ ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರಸ್ತೆ, ಮೈಸೂರು
8050345574

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್
ಆಕರ್ಷಕ ಸಂಬಳ +
ESI, PF, Incentive
ಗಾಂಧಿ ಸರ್ಕಲ್, ಮೈಸೂರು
9980620678

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580
ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007
9448048576, 9632378020

MICROWAVE OVEN SERVICES
Indian / Imported
CALL FOR
Microwave Oven Repair.
9900237315, 9845963421, 0821-4266495

WANTED
Sales Boys for Sports Shop, full time and part time.
Full time: 10 am to 7 pm.
Part time: 5 pm to 9.30 pm
Mysore. *Contact:*
7760109047, 8105368325

20x30 ದಟ್ಟಗಳ್ಳಿ
30x40 ದಟ್ಟಗಳ್ಳಿ
40x60 ದಟ್ಟಗಳ್ಳಿ
ಎಲ್ಲಾ ಬಡಾವಣೆಯಲ್ಲಿ
ಹಳೆ ಮನೆ ಹೊಸ ಮನೆ
9945042875

9/11A ಹಾಗೂ 11B ಖಾತೆಗಳಿಗೆ ಲೋನ್ ಮಾಡಿಕೊಡಲಾಗುವುದು
ಶೀಟಿನ ಮನೆ, ಹೆಂಚಿನ ಮನೆ, ಆರ್‌ಸಿಸಿ ಮನೆ ಮೇಲೆ ಸಾಲ ಮತ್ತು ಮನೆ ಖರೀದಿಸಲು, ಮನೆ ನವೀಕರಣ ಮಾಡಲು ಬ್ಯಾಂಕ್ ಲೋನ್ ಮಾಡಿಕೊಡಲಾಗುವುದು
9008504456

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
8431541631

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಟಿ 15,200/- to 86,000/-
9740733021, 9535028750

HOUSE FOR RENT
(Vegetarians Only) 2BHK House First Floor available for Rent at Krishnamurthipuram, Mysore Near Krishnamurthipuram Post Office. Contact:
9448939404
9353561720

ಕಳೆದಿದೆ
ಶ್ರೀಯುತ ಎಸ್.ರಮೇಶ್ S/o ಸುಬ್ರಮಣ್ಯಾಚಾರ್, ನಂ.167 ಉತ್ತರ, 1ನೇ ಸ್ಟೇಜ್, ವಿಶ್ವಕರ್ಮ ಕಾಲೋನಿ, ಗಾಯಿತ್ರಿಪುರಂ, ಮೈಸೂರು ಇವರಿಗೆ ಸೇರಿದ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯವರು, ಶ್ರೀಯುತ ಎಸ್.ರುಕ್ಮಾದ್ರಿ ರವರಿಗೆ ಸೈಟ್ ನಂ.1094, ದಿನಾಂಕ: 17–02–81 MES 45x30Ft ಸಿದ್ಧಾರ್ಥನಗರ ನಜರ್‌ಬಾದ್, ಮೈಸೂರು ಇದರ ಮೂಲ ಮಂಜೂರಾತಿ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಈ ಕೆಳಕಂಡ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸುವುದು.
6361991016

ಗ್ಯಾಸ್ ಪೈಪ್‌ಲೈನಿಂಗ್
ಸುರಕ್ಷಿತೆ ದೃಷ್ಟಿಯಿಂದ ಸರ್ಟಿಫೈಡ್ ಕಂಪನಿಯಿಂದ ಗ್ಯಾಸ್ ಲೈನಿಂಗ್ ಮಾಡಿಸಿ ಎಲ್ಲಾ ಕಂಪನಿಯ ಗ್ಯಾಸ್ ಸ್ಟೌವ್ + ಗ್ಯಾಸ್‌ಗೀಜರ್+ಹಬ್‌ಸ್ಟೌವ್+ಚಿಮಿನಿ ಸೇಲ್ಸ್ & ಸರ್ವಿಸ್ ಲಭ್ಯ
8088888115
22 ವರ್ಷಗಳ ಅನುಭವ

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
16–11–2023: ದೆಹಲಿ, ವೈಷ್ಣೋದೇವಿ, ಅಮೃತಸರ್
24–11–2023: ರಾಯಲ್ ರಾಜಸ್ತಾನ್, ಜೈಪುರ್, ಬಿಕನೇರ್, ಜೈಸಲ್ಮೇರ್, ಜೋಧ್‌ಪುರ್, ಉದಯ್‌ಪುರ್, ಚಿತ್ತೋಡ್‌ಗಢ್, ಪುಷ್ಕರ್.
21–12–23: ಗುಜರಾತ್, ನಾಗನಾಥ್, ಸೋಮ್‌ನಾಥ್, ಸರ್ದಾರ್ ವಲ್ಲಭಭಾಯ್ ಪಟೇಲ್ ಸ್ಟ್ಯಾಚ್ಯು.
9–11–2023: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್
2–11–2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ
9591017782, 9964527782

ಪ್ರಮಾಣ ಪತ್ರ
ಮೈಸೂರು ತಾಲ್ಲೂಕು, ವಿಜಯನಗರ 4ನೇ ಹಂತ, 2ನೇ ಫೇಸ್, 4ನೇ ಕ್ರಾಸ್, ಮನೆ ನಂ. 7436 ರಲ್ಲಿ ವಾಸವಾಗಿರುವ ಎಡ್ವರ್ಡ್ ಟೆಲ್ಲಿ ಡಿಸೋಜರವರ ಧರ್ಮಪತ್ನಿ ಶ್ರೀಮತಿ ಜಾಯ್ಸ್ ಜೆ. ಫರ್ನಾಂಡಿಸ್ ಪ್ರಮಾಣೀಕರಿಸುವುದೇನೆಂದರೆ, ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಿದ್ದು, ದಿನಾಂಕ 12–02–1992 ರಂದು ಮೈಸೂರು ತಾಲ್ಲೂಕು, ಕೆಸರೆ, ಸರ್ವೆ ನಂ. 490 ರ ಪೈಕಿ 30x40 ಅಳತೆಯ ನಿವೇಶನವನ್ನು ಶುದ್ಧ ಕ್ರಯಕ್ಕೆ ಪಡೆದಿರುವ ನೋಂದಣಿ ಕ್ರಯಪತ್ರದಲ್ಲಿ ಜಾಯ್ಸ್ ಡಿಸೋಜ ಕೋಂ ಎಡ್ವರ್ಡ್ ಟಿ. ಡಿಸೋಜ ಎಂದು ನಮೂದಾಗಿರುತ್ತದೆ. ಆದರೆ ನನ್ನ ಇತ್ತೀಚಿನ ದಾಖಲಾತಿಗಳಾದ ಆಧಾರ್ ಕಾರ್ಡ್, ಪಾನ್ ಕಾರ್ಡ್ ದಾಖಲಾತಿಗಳಲ್ಲೂ ಜಾಯ್ಸ್ ಜೆ. ಫರ್ನಾಂಡಿಸ್ ಕೋಂ ಎಡ್ವರ್ಡ್ ಟೆಲ್ಲಿ ಡಿಸೋಜ ಎಂದು ನಮೂದಾಗಿರುತ್ತದೆ. ಸದರಿ ಜಾಯ್ಸ್ ಡಿಸೋಜ ಕೋಂ ಎಡ್ವರ್ಡ್ ಟಿ. ಡಿಸೋಜ ಮತ್ತು ಜಾಯ್ಸ್ ಜೆ. ಫರ್ನಾಂಡಿಸ್ ಕೋಂ ಎಡ್ವರ್ಡ್ ಟೆಲ್ಲಿ ಡಿಸೋಜ ಈ ಎರಡು ಹೆಸರುಗಳು ನನ್ನ ಮತ್ತು ನನ್ನ ಪತಿಯವರದೇ ಆಗಿರುತ್ತದೆ ಎಂದು ನೋಟರಿ ಆರ್. ರಾಮಚಂದ್ರ ರವರ ಎದುರು ದಿನಾಂಕ 9–10–2023ರಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಜಾಯ್ಸ್ ಜೆ. ಫರ್ನಾಂಡಿಸ್

ಸಂಪು ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
7975101020

JOBS FOR
* Telecallers
* On Banking Process
* Females Only.
* 12th / Any Degree
9620198701

ಬೇಕಾಗಿದ್ದಾರೆ
ಕಾರ್‌ವಾಷ್‌ಗೆ ಹುಡುಗರು ಬೇಕಾಗಿದ್ದಾರೆ.
ಸಂಬಳ: 14,000/–.
ಊಟ, ತಿಂಡಿ, ವಸತಿ ಸೌಲಭ್ಯವಿದೆ. ಸಂಪರ್ಕಿಸಿ:
9036614475, 8904460083

FOR SALE
1) 30x40, 16 Lakhs new, near RT Nagar. (2) 30x40 Preethi Layout, Srirampura. (3) 20x30 G+2 Dattagalli. (4) 14x100 near Ramavilas Road. (5) 40x60, Old house Jayanagar. (6) 40x60 KSFC Layout, Sathagalli. (7) 40x60 N Ring Road facing Uttanahalli near. (8) Hunsur Road Yelwala Sky Top 30x40.
PRAKRUTHI PROPERTIES
9538690359, 9035990359

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು 8th, 9th, SSLC ಪಾಸ್ ಫೇಲಾದ ಯುವಕ, ಯುವತಿಯರು, ಮಹಿಳೆಯರು ಅಲ್ಲೇ ಇದ್ದು ಮೈಸೂರು ಮಡಿಕೇರಿ ಬೆಂಗಳೂರುನಲ್ಲಿ ಕೆಲಸ ಮಾಡುವವರು ಫುಲ್ ಟೈಮ್ ಅಥವಾ ಪಾರ್ಟ್ ಟೈಮ್ ವಯಸ್ಸಾದವರನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ ಸಂಬಳ ನರ್ಸಿಂಗ್ ಯುನಿಫಾರ್ಮ್ ಇರುತ್ತದೆ ಸಂಪರ್ಕಿಸಿ:
8123630683

ತಮಿಳುನಾಡು ಪ್ರವಾಸ 07 ದಿನಗಳು
ದಿನಾಂಕ: 26ನೇ ಅಕ್ಟೋಬರ್ 2023
ಇಶಾ ಫೌಂಡೇಷನ್ (112 ಅಡಿ ಶಿವನ ಪ್ರತಿಮೆ), ಕನ್ಯಾಕುಮಾರಿ, ನವಗ್ರಹ ದರ್ಶನ (ಒಂದು ದಿನದಲ್ಲಿ), ಪಿಚ್ಚಾವರಂ ಮ್ಯಾಂಗ್ರೂವ್ ಅರಣ್ಯ, ಅಣ್ಣಾಮಲೈ, ರಾಮೇಶ್ವರ, ಧನುಷ್ಕೋಟಿ, ಮಧುರೈ, ತಂಜಾವೂರು ಬೃಹತ್ ಶಿವ, ಕಂಚಿ, ವೆಲ್ಲೋರ್ ಗೋಲ್ಡನ್ ಟೆಂಪಲ್. ಒಬ್ಬರಿಗೆ ರೂ. 14,500.
7022271023, 9611341351

ಗೋವಾ ಪ್ರವಾಸ
ಹೊರಡುವ ದಿನಾಂಕ: 16 ಅಕ್ಟೋಬರ್ 2023 (3 ದಿನಗಳು). ವೀಕ್ಷಿಸುವ ಸ್ಥಳಗಳು: ಬಾಗ ಬೀಚ್, ದೂಧ್‌ಸಾಗರ್ ಜಲಪಾತ, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಅಗೊಡ ಕೋಟೆ, ಮಂಗೇಶಿ ದೇವಸ್ಥಾನ ಮತ್ತು ನಾಗೇಶಿ ದೇವಸ್ಥಾನ. ಊಟ, ವಸತಿ ಸೇರಿರುತ್ತದೆ. ಎಲ್ಲಾ ಸೇರಿ ಒಬ್ಬರಿಗೆ ರೂ. 7,500.
Mob: 70222 71023

V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
97318-91409

SCP Developers & Constructions
Trinethra Badavane
- Premium Plots For Sale
- Ready for Registration
- DTCP Approved
- Mysore to Narasipura Road NH 766, Attached

9482304526

HOUSE FOR LEASE
Newly Built 2BHK Independent House, Fully Furnished with Solar Lalithadri Nagar, Near Ring Road, Behind Indian Oil Petrol Bunk
9964414484

ವಿನಯ ಟೂರಿಸ್ಟ್ ಮೈಸೂರು
22–12–2023 ರಿಂದ 6 ದಿನಗಳ ಮಹಾರಾಷ್ಟ್ರ ಪ್ರವಾಸ ಪಂಡರಾಪುರ, ಶನಿಸಿಂಗನಾಪುರ, ಶಿರಡಿ, ನಾಸಿಕ್, ತ್ರಯಂಭಕೇಶ್ವರ, ನಾರಾಯಣಪುರ ಬಾಲಾಜಿ, ಕೊಲ್ಲಾಪುರ, ಮಹಾಲಕ್ಷ್ಮಿ, ಸೌದತ್ತಿ ಎಲ್ಲಮ್ಮ, ಮುರುಡೇಶ್ವರ, ಉಡುಪಿ, ಮೈಲ್ವ ಇತ್ಯಾದಿ
ಲಕ್ಷ್ಮಣರಾವ್ 9341820013
ರಾಮಚಂದ್ರ 9481819973

100% TEAK WOOD FACTORY FINISH DOORS @ DEPOT RATES
10 YEARS WARRANTY
www.ssbuildmart.com
9901291267
9845426862

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್ : 9945911118
ಅನಿಲ್ : 7026996123
ARTHOR SERVICES PVT.LTD
No.L-89, 2nd Floor, M Block, Opp. Karuna Hospital, Kuvempunagar, Mysore-570023

100% NEEM WOOD PLYWOOD & DOORS @ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267 98454 26862

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ ಬೇಕಾಗಿದ್ದಾರೆ. ವಿದ್ಯಾರ್ಹತೆ Diploma E&E, & Mech, ITI, 8th to 2nd PUC ವರೆಗೆ ಮತ್ತು ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಊಟ ವಸತಿ ESI & PF ಸೌಲಭ್ಯವಿರುತ್ತದೆ. ಸಂಬಳ 11400 to 18000 ಇರುತ್ತದೆ.
8951869646
9902645646

ದಾಖಲಾತಿ ಕಳೆದಿದೆ
ನಿವೇಶನ ಸಂಖ್ಯೆ ನಂ.72, EWS ಕೆಸರೆ 2ನೇ ಹಂತ, ಎನ್.ಆರ್. ಮೊಹಲ್ಲಾ, ಮೈಸೂರು
ಈ ಮೇಲಿನ ಸ್ವತ್ತಿಗೆ ಸಂಬಂಧಿಸಿದಂತೆ ಮುಡಾ ಮಂಜೂರಾತಿ ಪತ್ರ ಕಳೆದು ಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
9845855541

HOUSE FOR RENT
Gokulam
KRS Road
Double BED Room
1st Floor
Rent 12000
9900237315

WANTED
Accounts Executive-2 Nos.
Qualification: B.Com, BBM etc.,
Software: Tally ERP9, Microsoft Office etc.,
Fresher /Experienced
Good Communication skills will be advantage. Email:
scm@eshwarfoodandpackaging.com
WhatsApp: 7204959799

ಸುವರ್ಣ ಯಾತ್ರ
1) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 27–10–23, 2) 2 ಜ್ಯೋತಿರ್ಲಿಂಗ್ ಸೇರಿ ಕಾಶಿ ಪ್ರವಾಸ 7 ದಿನಗಳು–26–10–23,
3) ರಾಮೇಶ್ವರ ಪ್ರವಾಸ 6 ದಿನಗಳು–21–10–23.
4) ಕೇರಳ ಪ್ರವಾಸ 7 ದಿನಗಳು–21–10–23,
5) ಗುಜರಾತ್ ಪ್ರವಾಸ 8 ದಿನಗಳು–31–10–23
9008381022
9480843945

ಮನೆ ಮಾರಾಟಕ್ಕಿದೆ
25x30
ಅಳತೆಯ ಡ್ಯೂಪ್ಲೆಕ್ ಮನೆ ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿ 68 ಲಕ್ಷಗಳಿಗೆ ಮಾರಾಟಕ್ಕಿದೆ
7411110087

ಬೇಕಾಗಿದ್ದಾರೆ
ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: ಪಿಯುಸಿ (ಪಾಸ್ /ಫೇಲ್)
ಹೈಟೆಕ್ ಸೋಲಾರ್ ಫೆನ್ಸ್
Hi Tech Solar Fence
#145, ರಾಮವಿಲಾಸ ರೋಡ್, ಮೈಸೂರು
9448186377
9448247741

ಬೇಕಾಗಿದ್ದಾರೆ
ಮೈಸೂರು–ಕೊಡಗು–ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು, ಡ್ರೈವರ್ ಬೇಕಾಗಿದ್ದಾರೆ.
1) ಡೆಲಿವರಿ ಬಾಯ್ 12,000. 2) ಹೆವಿ ಡ್ರೈವರ್ 18,000 ಫುಲ್/ಪಾರ್ಟ್ ಟೈಮ್ ಕೆಲಸಕ್ಕೆ ಪಿಯುಸಿ/ಎಸ್‌ಎಸ್‌ಎಲ್‌ಸಿ ಓದಿರುವ ಯುವಕರು ಬೇಕಾಗಿದ್ದಾರೆ.
9740408488

ಬಾಡಿಗೆಗೆ/ಭೋಗ್ಯಕ್ಕೆ ಖಾಲಿ ಜಾಗ ಬೇಕಾಗಿದೆ
1) ರಿಂಗ್ ರಸ್ತೆ ಹಿನಕಲ್ Fly Over ಇಂದ GRS Fantasy Park–120x120 ಅಡಿ ಎಡಗಡೆ.
2) ಮೈಸೂರು ನಗರ ಮುಡಾ/ಕಾರ್ಪೋರೇಷನ್ ಮಿತಿ ಒಳಗೆ 70x70. 3)ಮಾನಂದವಾಡಿ ರಸ್ತೆಯ ಬಲಭಾಗದ ಲಿಂಕ್ ಮುಖ್ಯರಸ್ತೆ ಜಂಕ್ಷನ್‌ನಿಂದ ಮೈಸೂರು ರಿಂಗ್ ರಸ್ತೆ ಜಂಕ್ಷನ್ 100x100ft.
4) ಆರ್.ಟಿ.ನಗರದಿಂದ ಜೆ.ಪಿ.ನಗರ ರಿಂಗ್ ರೋಡ್ ಎಡಭಾಗ 100x100ft. 5) ಬಂಡಿಪಾಳ್ಯದಿಂದ ಲಲಿತಾದ್ರಿಪುರ ರಿಂಗ್ ರೋಡ್ ರಸ್ತೆ 100x100ft.
6) ನಂಜನಗೂಡು City Limits- 100x100ft.
7022943099,9945445255

HOUSE FOR RENT
2 BHK with Solar size: 20'x35', Gundu Rao Nagar, Ooty Road, near GS Ashrama. Contact:
9483185518
Brokers Excuse

WANTED
Qualification: PU/Degree, Tally Mandatory
Salary: 15000/-
Loknayaka Nagar, Metagalli. Contact:
9743091279 / 9916739611

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 45 ವರ್ಷ ವಿದ್ಯಾರ್ಹತೆ 7 ರಿಂದ PUC & ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ
7760913433

ಹಳೆ ಕಮರ್ಷಿಯಲ್ ಮನೆ ಮಾರಾಟಕ್ಕಿದೆ
18x40 ಸರ್ವೋದಯ ಮೇನ್ ರೋಡ್, ಕುವೆಂಪುನಗರ 20 ಸಾವಿರ ಬಾಡಿಗೆ ಬರುತ್ತಿದೆ. ಮಾಲೀಕರು ರೂ. 86 ಲಕ್ಷ ನೇಗೋಷಿಯಬಲ್
ಕಿರಣ್: 9731517698
ಉಮಾ: 8496923877

ನಿವೇಶನ ಮಾರಾಟಕ್ಕಿದೆ
30x50 ಅಳತೆ, ಪೂರ್ವ ದಿಕ್ಕು, ಶಿವರಾತ್ರಿ ರಾಜೇಂದ್ರ ನಗರ, ಟಿ.ನರಸೀಪುರ ರಸ್ತೆ, (NH-766) ಮೈಸೂರು.
ಕೆ.ಆರ್.ಸರ್ಕಲ್‌ನಿಂದ 10 ಕಿ.ಮೀ
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕಿಸಬೇಕಾದ ನಂಬರ್
9535557181

ತಕ್ಷಣ ಬೇಕಾಗಿದ್ದಾರೆ
ಶ್ರೀರಂಗ ಭಾರತ್ ಗ್ಯಾಸ್ ಏಜೆನ್ಸಿ ಭೋಗಾದಿಗೆ (ಆಟೋ ಹೊಂದಿರುವ) ಗ್ಯಾಸ್ ಡೆಲಿವರಿ ಬಾಯ್–5 ಹುದ್ದೆ. ಗೋಡೌನ್‌ನಲ್ಲಿ ಕೆಲಸ ಮಾಡಲು 2 ಹುದ್ದೆ. ಬೇಕಾಗಿದ್ದಾರೆ.
9341384442

ಶಾದಿಗುರೂಜಿ.ಕಾಂ
ವಧು–ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552

ROOMS FOR RENTAL (8 Rooms)
Hostel, Shop, Accommodation only near St. Anthony's Church, II Stage, Gayatripuram, Mysore-19.
Call: 9880962578

WANTED
Following Staff for a Reputed Lodge in Mysore.
1) Front Office Executive (Male)-2
2) House Keeping Supervisor-1
3) Room Boys-3
Contact: 7019689512

ಬೇಕಾಗಿದ್ದಾರೆ
ಮನೆಯಲ್ಲಿಯೇ ಇದ್ದು ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
ಕೆಲಸದ ಸ್ಥಳ: ಮಂಗಳೂರು
9632620237

WANTED
Indian Chinese Cook & Supplier for Restaurant
Contact number
9880063221

ಹೋಂ ನರ್ಸಿಂಗ್ ಕೆಲಸ
ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ, ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣವೇ ಸಂಪರ್ಕಿಸಿ, ಊಟ ವಸತಿಯೊಂದಿಗೆ ಸಂಬಳ 12,000–18,000
(ಸರ್ಕಾರಿ ನೋಂದಾಯಿತಾ ಸಂಸ್ಥೆ)
9035113222

ಬೇಕಾಗಿದ್ದಾರೆ
NGO ಒಂದರಲ್ಲಿ Telecalling ಮಾಡಲು ಯುವತಿಯರು ಬೇಕಾಗಿದ್ದಾರೆ. ಯಾವುದೇ Experience ಬೇಕಾಗಿಲ್ಲ. ಕನ್ನಡ ಓದಲು, ಬರೆಯಲು ಬರುವವರಿಗೆ ಮೊದಲ ಆದ್ಯತೆ.
ವಿದ್ಯಾರ್ಹತೆ : SSLC, PUC, Any Degree, Pass or Fail
ಸಮಯ: 9.30 am to 6.00 pm
ಆಕರ್ಷಕ ಸಂಬಳ
ಪ್ರೀತಿ: 7795270056

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯಮದಾರರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time-Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF-ESI.
Age : Above 30 Years
9008799156
8861611395

DOCUMENT LOST
I, Adrian Popaly, have lost my Original Sale Deed and connected documents in respect of my Site situated at Survey No. 442 of Kesare Grama registered under Document No. 8560 on 15.2.1992. Finders may please contact Mob: 6362453429

DOCUMENT LOST
I, Leo Michael, have lost my Original Sale Deed and connected documents in respect of my Site situated at Survey No. 442 of Kesare Grama registered under Document No. 8563 on 13.2.1992. Finders may please contact Mob: 9900321777

ನಿವೇಶನ ಮಾರಾಟಕ್ಕಿದೆ
40x60 ಅಳತೆಯ ಉತ್ತರ ದಿಕ್ಕಿನ ನಿವೇಶನ DTCP Approved ಮನುಗನಹಳ್ಳಿ ಚೆಕ್ ಪೋಸ್ಟ್ ಬಳಿ ಹುಣಸೂರು ಹೈವೇಗೆ ಹೊಂದಿಕೊಂಡಂತಿರುವ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಬೆಲೆ : 36 ಲಕ್ಷ (Negotiable)
9980988679
9342125527

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ:
ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–25
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
0821-2332005,8867064586

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ಡಿ ಅರಸು ರಸ್ತೆ, ಬನ್ನಿಮಂಟಪ ಹೈವೇ ಸರ್ಕಲ್, ಚಾಮುಂಡಿಪುರಂ, ಕುವೆಂಪುನಗರ, ಕೆ.ಆರ್.ಎಸ್, ಹಿನ್ಕಲ್, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಯಾದವಗಿರಿ ಹತ್ತಿರ
2. ಸೆಕ್ಯೂರಿಟಿ, ಸೂಪರ್‌ವೈಸರ್ ಬೇಕಾಗಿದ್ದಾರೆ (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ
8310098788

DOCUMENT LOST
I, Alice D Souza, residing at No.773/3, Pushpagiri, Belavatha, RBI Post, Mysuru City-570003 have lost my Original Site document No. 8162/91-92 of Kesare.
Finders may please contact Mob: 8095681281

FOR RENT
3 BHK 1st Floor House at 12th main, 3rd Cross, Saraswathipuram, Mysore. For Vegetarians Only Brokers Excuse. Contact:
9480057633

SALE/RENT
5 BHK House in 58x40, Corner Site, East Face (N/E) Vidyaranyapuram, Mysore. Contact:
9448842992

ತಕ್ಷಣ ಬೇಕಾಗಿದ್ದಾರೆ
SSLC and PUC, House keeping, CNC and VMC Operators
ತಕ್ಷಣ ಬೇಕಾಗಿದ್ದಾರೆ
Contact: 8553934317
9901607437/8660196479

ಛತ್ರ ಖಾಲಿ ಇದೆ
ಚಿಕ್ಕಮ್ಮಾನಿಕೇತನ ಕಮ್ಯೂನಿಟಿ ಹಾಲ್
ನವೆಂಬರ್ 4 ಮತ್ತು 5/2023ರಂದು ಖಾಲಿ ಇದೆ. ಸಂಪರ್ಕಿಸಿ:
9380902278
9945848538

ಬೇಕಾಗಿದ್ದಾರೆ
ಮೈಸೂರಿನ ಕಂಪನಿ ಅನಂತಕಾಯ ಪ್ರೈ.ಲಿ.
1) ಸೇಲ್ಸ್ ಎಕ್ಸಿಕ್ಯೂಟಿವ್ – 32 ಹುದ್ದೆ
2) ಏರಿಯಾ ಮ್ಯಾನೇಜರ್–08 ಹುದ್ದೆ
ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾ.ನಗರ, ಕೋಲಾರ, ತುಮಕೂರು, ಮಂಗಳೂರು ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ.
6361530704

COMMERCIAL SPACE AVAILABLE FOR RENT/LEASE
Cellar space suitable for godown of 2200 Sq. ft., Three shops measuring about 600 Sq. ft., Address: Sriranga Nilaya, # 1970/5, 3rd Cross, Jaykumar Layout. Halli Bogadi, Mysore.
Ph: 7411942495/8792728140

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮಹಿಷಾ ದಸರಾಕ್ಕೆ ಮಂಡ್ಯದಲ್ಲೂ ಬೆಂಬಲ: ನಾಳೆ ಮೈಸೂರಿಗೆ ಬೈಕ್ ಜಾಥಾ



ಮಂಡ್ಯ, ಅ.11– ದಸರಾ ಸಂದರ್ಭದಲ್ಲಿ ಮೈಸೂರಿನಲ್ಲಿ ನಡೆಸಲು ಉದ್ದೇಶಿಸಿರುವ ಮಹಿಷಾ ದಸರಾಕ್ಕೆ ಜಿಲ್ಲಾ ಸಮಾನ ಮನಸ್ಕರ ವೇದಿಕೆ ಬೆಂಬಲ ಸೂಚಿಸಿದ್ದು, ಬೈಕ್ ಜಾಥಾದ ಮೂಲಕ ಮಹಿಷಾ ಉತ್ಸವಕ್ಕೆ ತೆರಳುವುದಾಗಿ ವೇದಿಕೆಯ ಸಂಚಾಲಕ ಲಕ್ಷ್ಮಣ್ ಚೀರನಹಳ್ಳಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ರಾವಿಡ ಸಂಸ್ಕೃತಿಯ ನಾಶದ ಮೂಲಕ ತನ್ನ ವೈಭವವನ್ನು ಗಟ್ಟಿಗೊಳಿಸುವಂತಹ ವೈದಿಕ ಆರ್ಯರ ಪರವಾಗಿ ವಕಾಲತ್ತು ವಹಿಸುವ ಸಂಸದ ಪ್ರತಾಪ ಸಿಂಹ ಅವರ ಚೀರಾಟದ ವಿಚಾರಕ್ಕೆ ಯಾವುದೇ ಆಧಾರಗಳಿಲ್ಲ. ಮಹಿಷ ಶೂರನ ಊರು ಮೈಸೂರಾಗಿದೆ. ಇದರಲ್ಲಿ ಗೊಂದಲಗಳಿಲ್ಲ. ಮಹಾರಾಜರು ಚಾಮುಂಡಿ ಬೆಟ್ಟದಲ್ಲಿ ಮಹಿಷನ ಪ್ರತಿಮೆ ನಿರ್ಮಾಣ ಮಾಡಿರುವುದೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ಮಹಿಷನ ಬಗ್ಗೆ ಜಾನಪದದಲ್ಲೂ ನಾಡು ಮಹಿಷನಿಗೆ ಸೇರಿದ್ದು ಎನ್ನುವ ಸಾಕಷ್ಟು ಚಾರಿತ್ರಿಕ ಹಿನ್ನೆಲೆಯ ದಾಖಲೆಗಳಿವೆ. ದ್ರಾವಿಡ ನಾಡಿನಲ್ಲಿ ಮಹಿಷನ ಉತ್ಸವಗಳು ಹಿಂದೆಯೂ ನಡೆಯುತ್ತಿದ್ದವು, ಮುಂದೆಯೂ ಕೂಡ ನಡೆಯುತ್ತವೆ.

ಜಾನಪದ, ಚರಿತ್ರೆಯ ಗಂಧಗಾಳಿ ಗೊತ್ತಿಲ್ಲದ ದ್ರಾವಿಡ ಸಂಸ್ಕೃತಿಯ ಅರಿವು ಇರದ ಪ್ರತಾಪ ಸಿಂಹಗೆ ಛೀಮಾರಿ ಹಾಕಲು ಸಿದ್ಧರಿದ್ದೇವೆ. ಮಹಿಷನ ವಿರುದ್ಧ ನಡೆಯುವ ಅಪಪ್ರಚಾರಗಳನ್ನು ವಿರೋಧಿಸಿ, ಮಹಿಷ ದಸರಾಗೆ ವೇದಿಕೆ ಬೆಂಬಲಿಸುತ್ತದೆ. ಬಹುಸಂಸ್ಕೃತಿಯ ಉಳಿವಿಗಾಗಿ ಪ್ರಜಾತಾಂತ್ರಿಕ ಮೌಲ್ಯಗಳ ರಕ್ಷಣೆಗೆ ಸದಾಕಾಲ ಬದ್ಧರಾಗಿರುತ್ತೇವೆ. ಹೀಗಾಗಿ ಮೈಸೂರಲ್ಲಿ ನಡೆಯುತ್ತಿರುವ ಮಹಿಷ ದಸರಾಕ್ಕೆ ಸಾವಿರಾರು ಜನರು ಭಾಗವಹಿಸುತ್ತೇವೆ ಎಂದು ಹೇಳಿದರು.

ಮಹಿಷ ದಸರಾಕ್ಕೆ ಜಿಲ್ಲೆಯಿಂದ ಆಗಮಿಸುವ ಪ್ರಗತಿಪರ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಅಂದು ಬೆಳಗ್ಗೆ 7 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗವಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಆಗಮಿಸಬೇಕು ಎಂದು ಮನವಿ ಮಾಡಿದ ಅವರು, ಗೌರವ ಸಮರ್ಪಣೆ ನಂತರ ಮೈಸೂರಿಗೆ ಬೈಕ್ ಜಾಥಾ ಹೊರಡಲಾಗುವುದು ಎಂದು ತಿಳಿಸಿದರು.

ಗೋಷ್ಠಿಯಲ್ಲಿ ವೇದಿಕೆಯ ಮುಖಂಡರಾದ ನಾಗರಾಜ್, ದೇವರಾಜ್‌ಕೊಪ್ಪ, ದಸಂಸ ಎಂ.ವಿ.ಕೃಷ್ಣ, ನರಸಿಂಹಮೂರ್ತಿ, ಆಟೋ ಚಾಲಕರ ಸಂಘದ ಗುರುಶಂಕರ್, ಮುಸ್ಲಿಂ ಒಕ್ಕೂಟದ ಕಾರ್ಯದರ್ಶಿ ಮಹಮ್ಮದ್ ತಾಹಿರ್ ಹಾಜರಿದ್ದರು.

ಡಿಕೆಶಿ ಬಗ್ಗೆ ಹೆಚ್‌ಡಿಕೆ ಹೇಳಿಕೆಗೆ ಚಿದಂಬರ್ ಖಂಡನೆ



ಮಂಡ್ಯ,ಅ.11– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶೀಘ್ರದಲ್ಲೇ ತಿಹಾರ್ ಜೈಲಿಗೆ ಹೋಗುತ್ತಾರೆ ಎಂಬ ಹೇಳಿಕೆ ನೀಡಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಹಾಗೂ ಮಗ ನಿಖಿಲ್ ಸೋಲಿನ ಬಳಿಕ ಸ್ಥಿಮಿತ ಕಳೆದುಕೊಂಡಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಕಿಡಿಕಾರಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಡಿಕೆಶಿ ಮಾಡುತ್ತಿರುವ ಒಳ್ಳೆಯ ಕೆಲಸವನ್ನು ಹೆಚ್‌ಡಿಕೆಯಿಂದ ಸಹಿಸಿಕೊಳ್ಳಲು ಆಗುತ್ತಿಲ್ಲ. ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡು ಡಿ.ಕೆ.ಶಿವಕುಮಾರ್ ವಿರುದ್ಧ ಷಡ್ಯಂತ್ರ ಮಾಡುತ್ತಿರುವ ಅವರ ಹಗಲುಕನಸು ನನಸಾಗುವುದಿಲ್ಲ.

136 ಶಾಸಕರು ಗೆದ್ದು ಕಾಂಗ್ರೆಸ್ ಬಲಿಷ್ಠವಾಗಿದ್ದು, ಈ ಸರ್ಕಾರವನ್ನು ಅಸ್ಥಿರ ಮಾಡಲು ಸಾಧ್ಯವೇ ಇಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿರುವ ಕುಮಾರಸ್ವಾಮಿ ಅವರು ಘನತೆಗೆ ತಕ್ಕಂತೆ ಮಾತನಾಡಲಿ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ಸಿಗರ ವಿರುದ್ಧ ಮನಬಂದಂತೆ ಮಾತನಾಡಿದರೆ ಮುಂದಿನ ದಿನಗಳಲ್ಲಿ ಹೆಚ್ಡಿಕೆ ವಿರುದ್ಧ ಜಿಲ್ಲಾ ಕಾಂಗ್ರೆಸ್ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದ್ದಾರೆ.

ತಮಿಳುನಾಡಿಗೆ ಮತ್ತೆ ನೀರು ಬಿಡಲು ಆದೇಶ

ಹಿತರಕ್ಷಣಾ ಸಮಿತಿ ಆಕ್ರೋಶ, ಹೆದ್ದಾರಿ ತಡೆ



ಮಂಡ್ಯ, ಅ.11– ತಮಿಳುನಾಡಿಗೆ ಮತ್ತೆ ಮೂರು ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ರಾಜ್ಯ ಸರ್ಕಾರಕ್ಕೆ ಸಿಡಬ್ಲ್ಯೂಆರ್‌ಸಿ ಸೂಚನೆ ನೀಡಿರುವ ಕ್ರಮಕ್ಕೆ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಕ್ರೋಶ ವ್ಯಕ್ತಪಡಿಸಿದ್ದು, ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ.

ಬುಧವಾರ ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಹೋರಾಟ ಮುಂದುವರೆದಿದ್ದು, ಕಾವೇರಿ ಹೋರಾಟಗಾರರು ಧರಣಿ, ರಸ್ತೆ ತಡೆ ನಡೆಸಿದರು. ಆ ವೇಳೆಗೆ ಸಿಡಬ್ಲ್ಯೂಆರ್‌ಸಿ ತೀರ್ಮಾನ ಹೊರಬಿದ್ದ ಸಂದರ್ಭದಲ್ಲಿ ಹಿತರಕ್ಷಣಾ ಸಮಿತಿಯ ಮುಖಂಡರು ಆಕ್ರೋಶ ಹೊರಹಾಕಿದರು. ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡಿ, ರಾಜ್ಯ ಸರ್ಕಾರ ನೀರು ಉಳಿಸಿಕೊಳ್ಳಲು ವಿಫಲವಾಗಿದ್ದು, ನಮಗೆ ನಿರಂತರವಾಗಿ ಅನ್ಯಾಯ ಮಾಡುತ್ತಾ ಕಾವೇರಿ ಕೊಳ್ಳದ ಜನರ ಹಿತಕಾಯುವಲ್ಲಿ ವಿಫಲವಾಗಿದೆ. ಸಿಡಬ್ಲ್ಯೂಆರ್‌ಸಿ ತೀರ್ಮಾನದ ಮೂಲಕ ಇನ್ನೂ 15 ದಿನ ನಾವು ಹೋರಾಟ ಮಾಡುವಂತಾಗಿದೆ. ರಾಜ್ಯ ಸರ್ಕಾರಕ್ಕೆ ಕಾವೇರಿ ವಿಚಾರದಲ್ಲಿ ಕಣ್ಣು– ಕಿವಿ ಇಲ್ಲ ಎಂದು ಕಿಡಿಕಾರಿದರು.

ತಮಿಳುನಾಡಿನ ರಾಜಕಾರಣದಲ್ಲಿ ಇರುವ ಒಗ್ಗಟ್ಟು ನಮ್ಮಲ್ಲಿ ಇಲ್ಲ. ಈ ವಿಚಾರದಲ್ಲಿ ಅವರನ್ನು ಹೊಗಳಿ ನಿಮ್ಮನ್ನು ತೆಗಳುವಂತಾಗಿದೆ. ಮೈತ್ರಿ ಕಾಪಾಡಿಕೊಳ್ಳಲು ಸರ್ಕಾರ ನೀರು ಬಿಡುತ್ತಿದೆಯೇ ಎಂದು ಪ್ರಶ್ನಿಸಿದ ಅವರು, ಈವರೆಗೆ ರಾಜ್ಯ ಸರ್ಕಾರ ಒಮ್ಮೆಯೂ ಸಹ ನೀರು ಬಿಡಲ್ಲ ಎಂದು ಹೇಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾವೇರಿ ವಿಚಾರವಾಗಿ ಸುಪ್ರೀಂ ಹಾಗೂ ಕೇಂದ್ರದ ಮುಂದೆ ನ್ಯಾಯ ಸಿಗದ ಹಿನ್ನಲೆಯಲ್ಲಿ ಕೂಡಲೇ ರಾಜ್ಯ ಸರ್ಕಾರ ರಾಷ್ಟ್ರಪತಿಗಳ ಮೊರೆ ಹೋಗಬೇಕೆಂದು ಒತ್ತಾಯಿಸಿದ ಅವರು, ಮತ್ತೆ ತಮಿಳುನಾಡಿಗೆ ನೀರು ಹರಿಸುವ ತೀರ್ಪು ಬಂದಿರುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಹೋರಾಟದ ನಿಲುವನ್ನು ಬದಲಿಸುತ್ತೇವೆ ಎಂದು ಹೇಳಿದರು.

ಇದಕ್ಕೂ ಮುನ್ನ ನಗರದ ಸರ್‌ಎಂವಿ ಪ್ರತಿಮೆ ಎದುರು ನಿರಂತರ ಧರಣಿಯಲ್ಲಿ ಸಮಿತಿಯ ಮುಖಂಡರ ಜೊತೆಗೂಡಿದ ಜಾನಪದ ಕಲಾವಿದರು ಹಾಡುಗಳ ಮೂಲಕ ಕಾವೇರಿ ನದಿ ನೀರಿನ ವಿಚಾರದಲ್ಲಿ ರೈತರಿಗೆ ಆಗಿರುವ ಅನ್ಯಾಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು– ಮೈಸೂರು ಹೆದ್ದಾರಿಗೆ ಇಳಿದ ಹೋರಾಟಗಾರರು ವಾಹನ ಸಂಚಾರಕ್ಕೆ ಅಡ್ಡಿಪಡಿಸಿದರು. ಸುಮಾರು ಅರ್ಧ ತಾಸು ಹೆದ್ದಾರಿ ತಡೆದ ಹಿನ್ನೆಲೆಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದವರು ಅಲ್ಲಿಯೇ ಇಳಿದು ಬಸ್ ನಿಲ್ದಾಣದತ್ತ ಹೊರಟರು. ಅಕ್ಕ ಪಕ್ಕದ ರಸ್ತೆಯಿಂದ ಹೆದ್ದಾರಿಗೆ ಬರುತ್ತಿದ್ದ ವಾಹನಗಳನ್ನು ಸಹ ಪ್ರತಿಭಟನಾಕಾರರು ತಡೆದ ಹಿನ್ನೆಲೆಯಲ್ಲಿ ವಾಹನ ಸವಾರರಿಗೆ ಕಾವೇರಿ ಹೋರಾಟದ ಬಿಸಿ ತಟ್ಟಿತು.

ಕೇಂದ್ರ– ರಾಜ್ಯ ಸರ್ಕಾರ, ಸಂಸದರು, ಶಾಸಕರ ವಿರುದ್ಧ ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿ, ಆಳುವ ಸರ್ಕಾರಗಳು, ಚುನಾಯಿತ ಜನಪ್ರತಿನಿಧಿಗಳು ತಮ್ಮ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿಲ್ಲ, ಇದರಿಂದ ರೈತರು ಮತ್ತು ಜನತೆಗೆ ಸಂಕಷ್ಟ ಎದುರಾಗಿದೆ ಎಂದು ಹೇಳಿದರು. ರಾಜ್ಯ ಸರ್ಕಾರ ನೆರೆ ರಾಜ್ಯಕ್ಕೆ ನೀರು ಬಿಡುವುದಿಲ್ಲ ಎಂದು ಹೇಳುತ್ತಿಲ್ಲ, ಶಾಸಕರು ಕಂಡು ಕಾಣದಂತೆ ಇದ್ದಾರೆ, ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಪರಿಹಾರ ರೂಪಿಸುತ್ತಿಲ್ಲ, ಸಂಸದರು ದೆಹಲಿಗೆ ಹೋಗಿ ಪ್ರಧಾನ ಮಂತ್ರಿ ಮೇಲೆ ಒತ್ತಡ ಹಾಕಲು ಮುಂದಾಗುತ್ತಿಲ್ಲ, ಇವರ ನಿರ್ಲಕ್ಷ್ಯದಿಂದ ರೈತ ಕುಟುಂಬಗಳು ಬೀದಿಗೆ ಬೀಳುವ ಪರಿಸ್ಥಿತಿ ತಂದು ಬಿಟ್ಟಿದ್ದಾರೆ ಎಂದು ಕಿಡಿಕಾರಿದರು.

ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಇಂಡುವಾಳು ಚಂದ್ರಶೇಖರ್, ಮುದ್ದೇಗೌಡ, ಕನ್ನಡ ಸೇನೆ ಮಂಜುನಾಥ್, ಮಹಾಂತಪ್ಪ, ಜಾನಪದ ಕಲಾವಿದರ ಸಂಘದ ಗೊರವಾಲೆ ಚಂದ್ರಶೇಖರ್, ದೇವರಾಜ್‌ಕೊಪ್ಪ, ಕಾರಸವಾಡಿ ದೇವರಾಜ್, ಸಂತೋಷ್‌ಕುಮಾರ್, ಮಹದೇವ, ವೈರಮುಡಿ, ಮುದಗಂದೂರು ಕೃಷ್ಣಯ್ಯ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ನರೇಗಾ ಯೋಜನೆ ಸಮರ್ಪಕ ಜಾರಿಗಾಗಿ ಪ್ರತಿಭಟನೆ



ಮದ್ದೂರು, ಅ.11– ನರೇಗಾ ಯೋಜನೆಯ ಸಮರ್ಪಕ ಜಾರಿಗಾಗಿ, ನಿವೇಶನ ರಹಿತರಿಗೆ ನಿವೇಶನಕ್ಕಾಗಿ, ಸರ್ಕಾರಿ ಭೂಮಿಯಲ್ಲಿ ವಾಸ ಮಾಡುತ್ತಿರುವ ಬಡವರಿಗೆ ಹಕ್ಕುಪತ್ರಕ್ಕಾಗಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ತಾಲೂಕಿನ ಹಲವು ಗ್ರಾಮ ಪಂಚಾಯಿತಿಗಳಿಗೆ ಮುತ್ತಿಗೆ ಹಾಕಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಕೊಪ್ಪ, ಆತಗೂರು, ನಗರಕೆರೆ, ಕೆ.ಬೆಳ್ಳೂರು, ಕೂಳಗೆರೆ, ಎಸ್.ಐ. ಹೊನ್ನಲಗೆರೆ, ಸಿ.ಎ.ಕೆರೆ, ಕ್ಯಾತಘಟ್ಟ, ಮಣಿಸಗೆರೆ, ಕಾಡುಕೊತ್ತನಹಳ್ಳಿ, ಮಾದರಹಳ್ಳಿ, ಡಿ.ಎ.ಕೆರೆ, ತೊರೆಬೊಮ್ಮನಹಳ್ಳಿ ಸೇರಿದಂತೆ ಇತರ ಗ್ರಾಪಂಗಳ ಮುಂದೆ ಕೃಷಿ ಕೂಲಿಕಾರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ಎಂ. ಪುಟ್ಟಮಾದು ಪ್ರತಿಭಟನೆಗಳ ನೇತೃತ್ವ ವಹಿಸಿ ಮಾತನಾಡಿ, ಉದ್ಯೋಗ ಖಾತ್ರಿ ಕಾಯ್ದೆಯಡಿ ಕೆಲಸ ಮಾಡುತ್ತಿರುವ ಕೂಲಿಕಾರರಿಗೆ ಗ್ರಾಪಂ ಅಧಿಕಾರಿಗಳು ಸಕಾಲಕ್ಕೆ ಕೆಲಸ ನೀಡದೆ ವಂಚಿಸುತ್ತಿದ್ದಾರೆ. ನರೇಗಾ ಕೂಲಿ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಕೂಲಿ ಪಾವತಿ ಮಾಡದೆ ಮೀನಾ–ಮೇಷ ಎಣಿಸುವ ಮೂಲಕ ಬಡವರ ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಲಾಗುತ್ತಿದೆ. ಕಾಯಕ ಬಂಧುಗಳಿಗೆ ಪ್ರೋತ್ಸಾಹ ಧನ ನೀಡಿ ತರಬೇತಿ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಸರ್ಕಾರಗಳಿಗೆ ಎಚ್ಚರಿಕೆ ನೀಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ, ತಾಲೂಕು ಕಾರ್ಯದರ್ಶಿ ತೈಲೂರು ಟಿ.ಪಿ.ಅರುಣ್ ಕುಮಾರ, ರಾಜ್ಯ ಸಮಿತಿ ಸದಸ್ಯರಾದ ಬಿ.ಎ.ಮಧುಕುಮಾರ, ಟಿ.ಸಿ. ವಸಂತ, ಹೇಮಾವತಿ, ಜಯಮ್ಮ, ಪ್ರೇಮಮ್ಮ ಇದ್ದರು.

ಭಾರತೀನಗರ ವರದಿ: ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಪದಾಧಿಕಾರಿಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಭಾರತೀನಗರ ಸಮೀಪದ ಚಿಕ್ಕರಸಿನಕೆರೆ ಗ್ರಾಮಪಂಚಾಯಿತಿ ಎದುರು ಪ್ರತಿಭಟನೆ ನಡೆಸಿದರು. ಕೃಷಿಕೂಲಿಕಾರರ ಸಂಘದ ಪದಾಧಿಕಾರಿಗಳು ಗ್ರಾಮಪಂಚಾಯಿತಿ ಎದುರು ಜಮಾಯಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಕೃಷಿಕೂಲಿಕಾರರ ಸಂಘದ ಜಿಲ್ಲಾ ಸಹ ಕಾರ್ಯದರ್ಶಿ ಬಿ.ಎ.ಮಧುಕುಮಾರ್, ತಾಲೂಕು ಕಾರ್ಯದರ್ಶಿ ಟಿ.ಪಿ.ಅರುಣ್ ಕುಮಾರ್, ಯೋಗೇಶ್, ಬಸವೇಗೌಡ, ಮುಟ್ಟಸ್ವಾಮಿ, ಪುಟ್ಟತಾಯಮ್ಮ, ಪ್ರೇಮ ಸೇರಿದಂತೆ ಹಲವರಿದ್ದರು.



ಇಂದು ಉದ್ಯೋಗ ಮೇಳ

ಮಂಡ್ಯ, ಅ.11– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಭಾರತ್ ಫೈನಾನ್ಷಿಯಲ್ ಇನ್‌ಕ್ಲೂಷನ್ ಲಿ., ಫ್ಯೂಷನ್ ಮೈಕ್ರೋ ಫೈನಾನ್ಸ್ ಲಿ., ಹಾಗೂ ಮೆ॥ ಹೆಚ್ & ವಿ ಅಡ್ವಾನ್ಸ್ಡ್ ಮೆಟೀರಿಯಲ್ಸ್ ಇಂಡಿಯಾ ಪ್ರೈಲಿ. ಸಂಸ್ಥೆಗಳ ಸಹಭಾಗಿತ್ವದಲ್ಲಿ ಉದ್ಯೋಗ ನೀಡುವ ಸಂಬಂಧ ಅ.12 ರಂದು ಬೆಳಗ್ಗೆ 10.30ಕ್ಕೆ ನೇರ ಸಂದರ್ಶನ ನಡೆಯಲಿದೆ.

ಆಸಕ್ತ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ (ಫಿಟ್ಟರ್ & ಟರ್ನರ್ ಟ್ರೇಡ್) ಹಾಗೂ ಯಾವುದೇ ಪದವಿ ಸೇರಿದಂತೆ (ಬಿ.ಎಸ್ಸಿ–ಕೆಮಿಸ್ಟ್ರಿ) ಹಾಗೂ ಡಿಪ್ಲೊಮಾ (ಮೆಕ್ಯಾನಿಕಲ್) ಉತ್ತೀರ್ಣರಾದ 18 ರಿಂದ 30 ವರ್ಷದೊಳಗಿನ ಅಭ್ಯರ್ಥಿಗಳು ಅ.12 ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಆರ್‌ಟಿಓ ಆಫೀಸ್ ಎದುರು, ಮಂಡ್ಯ ಇಲ್ಲಿ ತಮ್ಮ ಸ್ವವಿವರದೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದು. ಮಾಹಿತಿಗೆ ದೂ:08232–295124, 8660061488 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಮತ್ತೆ 20 ಸಾವಿರ ಶಿಕ್ಷಕರ ನೇಮಕ

ಕಡ್ಡಾಯವಾಗಿರುತ್ತದೆ. ಗ್ರಾಮೀಣ ಭಾಗದಲ್ಲಿ ಖಾಸಗಿ ಇಂಗ್ಲೀಷ್ ಶಾಲೆಗಳು ಆಕರ್ಷಿತ ವಾಗಿ ನಮ್ಮ ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುವ ಪರಿಸ್ಥಿತಿ ಬಂದಿದೆ. ಈ ವ್ಯವಸ್ಥೆಗೆ ಕಡಿವಾಣ ಹಾಕಲು ಎರಡು ಗ್ರಾಮ ಪಂಚಾಯ್ತಿಗೆ ಒಂದರಂತೆ ಕರ್ನಾಟಕ ಪಬ್ಲಿಕ್ ಶಾಲೆ ತೆರೆಯಲು ಸರ್ಕಾರ ತೀರ್ಮಾನಿಸಿದೆ. ಎರಡೂವರೆ ಸಾವಿರ ಕೋಟಿ ರೂ. ವೆಚ್ಚದಲ್ಲಿ ಗ್ರಾಮೀಣ ಭಾಗದ 165 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿ ಕ್ಷೇತ್ರಕ್ಕೆ ನಾಲ್ಕರಂತೆ 500 ಶಾಲೆಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವುದಾಗಿ ಹೇಳಿದರು. ಎಲ್ಲಾ ಮೂಲಸೌಕರ್ಯಗಳನ್ನು ಒಳಗೊಂಡಿರುವ ಈ ಶಾಲೆ ಒಂದೇ ಸೂರಿನಡಿ, ಒಂದರಿಂದ 12ನೇ ತರಗತಿವರೆಗೂ ಕಲಿಯಲು ಅವಕಾಶ ಮಾಡಿಕೊಡಲಾಗುವುದು.

ಕೆಪಿಎಸ್ ಶೈಕ್ಷಣಿಕ ಸಂಸ್ಥೆಯ ಪ್ರದೇಶದ ಸುತ್ತಮುತ್ತಲಿನ ಪ್ರವೇಶ ಕೊರತೆ ಇರುವ ನಮ್ಮ ಸರ್ಕಾರಿ ಶಾಲೆಗಳನ್ನು ಇದರೊಂದಿಗೆ ವಿಲೀನ ಮಾಡಲಾಗುವುದು. 5,10 ಮಕ್ಕಳಿಗೆ ಇಬ್ಬರು– ಮೂವರು ಶಿಕ್ಷಕರು ಇಂತಹ ಶಾಲೆಗಳಲ್ಲಿ ಬೋಧನೆ ಮಾಡುತ್ತಿದ್ದು, ಅಂತಹ ಶಾಲೆಗಳನ್ನು ಮುಚ್ಚಿ ಕೆಪಿಎಸ್ ಶಾಲೆಗೆ ವರ್ಗಾಯಿಸುವುದರಿಂದ ಶಿಕ್ಷಕರ ಕೊರತೆ ನೀಗಲಿದೆ ಎಂದರು. ಒಟ್ಟಾರೆ 53 ಸಾವಿರ ಶಿಕ್ಷಕರ ಕೊರತೆ ಇದೆ. 3500 ಜತೆಗೆ 20 ಸಾವಿರ ಶಿಕ್ಷಕರ ನೇಮಕದಿಂದ ಬೋಧಕರ ಕೊರತೆಯೂ ನಿವಾರಣೆ ಆಗಲಿದೆ. ಅಜೀಂ ಪ್ರೇಂಜಿ ಪ್ರತಿಷ್ಠಾನದಿಂದ ಶಿಕ್ಷಕರಿಗೆ ತರಬೇತಿ ನೀಡಲಾಗುವುದು. ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ಗುಣಮಟ್ಟದ ಶಿಕ್ಷಣ ನೀಡಿ ಶಾಲೆ ಬಿಡುವವರ ಮಕ್ಕಳ ಸಂಖ್ಯೆ ತಪ್ಪಿಸುವುದು ಸರ್ಕಾರದ ಉದ್ದೇಶ.

ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವವರು ಮತ್ತೊಂದು ಸರ್ಕಾರಿ ಶಾಲೆಗೆ ಹೋದರೆ ಬೇರೆ ವಿಚಾರ. ಆದರೆ ಸರ್ಕಾರಿ ಶಾಲೆಯನ್ನು ತೊರೆದು ಅನುದಾನಿತ ಮತ್ತು ಖಾಸಗಿ ಶಾಲೆಗಳಿಗೆ ಹೋದರೆ ನಮ್ಮ ಶಾಲೆಗಳ ಗುಣಮಟ್ಟ ಸರಿಯಿಲ್ಲ ಎಂದೇ ಅರ್ಥ. ಹೀಗಾಗಿ ಇದನ್ನು ಗಂಭಿರವಾಗಿ ಪರಿಗಣಿಸಲಾಗಿದೆ ಎಂದು ಹೇಳಿದರು. ಸಿ.ಎಸ್.ಆರ್ ನಿಧಿಯಡಿ ಈ ವರ್ಷ ಲಭ್ಯ ಆಗಲಿರುವ 2500 ಕೋಟಿ ರೂಪಾಯಿಗಳನ್ನು ರಾಜ್ಯದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಆಸಕ್ತಿ ತೋರಿದ್ದಾರೆ.

ಆಸಕ್ತಿ ತೋರದ ಕಾಂಗ್ರೆಸ್ ಹೈಕಮಾಂಡ್

ಕಾಂಗ್ರೆಸ್ ನಾಯಕರು ಸೆಪ್ಟೆಂಬರ್‌ನೊಳಗೆ ನೇಮಕಾತಿಗಳನ್ನು ಪೂರ್ಣಗೊಳಿಸಬೇಕು. ಇದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಕೆಲಸ ಮಾಡಲು ನೇಮಕಗೊಂಡ ಸದಸ್ಯರಿಗೆ ಇದು ಪ್ರೋತ್ಸಾಹ ನೀಡಿದಂತಾಗುತ್ತಿತ್ತು ಎಂದು ಮತ್ತೊಂದು ಮೂಲ ತಿಳಿಸಿದೆ.

ಮೇ ತಿಂಗಳಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅನೇಕ ಪರಾಜಿತ ಅಭ್ಯರ್ಥಿಗಳು ಮತ್ತು ಪಕ್ಷದ ಕಾರ್ಯಕರ್ತರು ಮಂಡಳಿ ಮತ್ತು ನಿಗಮಗಳಲ್ಲಿ ಹುದ್ದೆಗಳಿಗಾಗಿ ಲಾಬಿ ನಡೆಸುತ್ತಿದ್ದಾರೆ. ಆದರೆ ನೇಮಕ ಮಾಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿದೆ. ನಿಗಮ–ಮಂಡಳಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ, ಆದಷ್ಟು ಬೇಗ ಮಾಡುತ್ತೇವೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದ್ದಾರೆ.

ಜಿಲ್ಲೆ ಮತ್ತು ತಾಲೂಕುಗಳಲ್ಲಿನ ನೇಮಕಾತಿಗಳನ್ನು ಪರಿಗಣಿಸಿ ಒಟ್ಟು 7,000 ಹುದ್ದೆಗಳನ್ನು ಭರ್ತಿ ಮಾಡಬೇಕಿದೆ. ಸುಮಾರು 600 ಅಧ್ಯಕ್ಷ ಮತ್ತು ನಿರ್ದೇಶಕ ಹುದ್ದೆಗಳಿಗೆ ಹೆಚ್ಚು ಬೇಡಿಕೆಯಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಇಬ್ಬರೂ ತಮ್ಮದೇ ಬೆಂಬಲಿಗರನ್ನು ನೇಮಿಸಬೇಕೆಂದು ಹಂಬಲ ಹೊಂದಿರುವುದರಿಂದ, ಪ್ರಕ್ರಿಯೆ ಮತ್ತಷ್ಟು ಕ್ಲಿಷ್ಟವಾಗಿದೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕದ ಉಸ್ತುವಾರಿ, ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಗೆ ರಾಜಸ್ಥಾನ ಚುನಾವಣೆಯ ಜವಾಬ್ದಾರಿಯನ್ನು ನೀಡಲಾಗಿದೆ, ಅವರು ವಿಧಾನಸಭೆ ಚುನಾವಣೆಗೆ ಮೊದಲು ಪಟ್ಟಿಯನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ. ವಿಧಾನಸಭೆಗಳ ಫಲಿತಾಂಶ ಡಿಸೆಂಬರ್ 3 ರಂದು ಪ್ರಕಟವಾಗಲಿದೆ. ಮಂಡಳಿಗಳು ಮತ್ತು ನಿಗಮಗಳ ಮುಖ್ಯಸ್ಥರ ನೇಮಕಾತಿಗಳನ್ನು ಶೀಘ್ರದಲ್ಲೇ ಮಾಡಲಾಗುವುದು. ಶಾಸಕರು ಮತ್ತು ಪಕ್ಷದ ಕಾರ್ಯಕರ್ತರಿಗೆ ಅವಕಾಶ ನೀಡಲಾಗುವುದು ಎಂದು ಶಿವಕುಮಾರ್ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ಸಿಗದಿರುವ ಬಗ್ಗೆ ಹಲವು ಎಂಎಲ್‌ಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಉಭಯ ಸದನಗಳಲ್ಲಿನ ಶಾಸಕರ ಸಂಖ್ಯೆಯನ್ನು ಪರಿಗಣಿಸಿ ಅನುಪಾತದ ಆಧಾರದ ಮೇಲೆ ಸಚಿವ ಸ್ಥಾನಗಳನ್ನು ನೀಡಬೇಕಾಗಿತ್ತು ಎಂದು ಅವರು ಹೇಳಿದ್ದಾರೆ. ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಅವರೆಲ್ಲರು ಈಗ ಮಂಡಳಿಗಳು ಮತ್ತು ನಿಗಮಗಳಲ್ಲಿ ಅವಕಾಶ ಪಡೆಯಲು ತುದಿಗಾಲಲ್ಲಿ ನಿಂತಿದ್ದಾರೆ.

ದಸರಾ ಕುಸ್ತಿ ಪಂದ್ಯಾವಳಿ

ಇದರಲ್ಲಿ ವಿಜೇತರಾದವರಿಗೆ ಒಂದೂಕಾಲು ಕೆ.ಜಿ. ಬೆಳ್ಳಿ ಗದೆಯನ್ನು ಬಹುಮಾನವಾಗಿ ನೀಡಲಾಗುವುದು. ದಸರಾ ಕಿಶೋರಿ ಸ್ಪರ್ಧೆಯಲ್ಲಿ ಭಾಗವಹಿಸುವ ಮಹಿಳೆಯರು 57 ರಿಂದ 62 ಕೆ.ಜಿ.ತೂಕ ಹೊಂದಿರಬೇಕು. ಇವರಿಗೆ ಅರ್ಧ ಕೆ.ಜಿ.ಬೆಳ್ಳಿ ಗದೆಯನ್ನು ಬಹುಮಾನವಾಗಿ ನೀಡಲಾಗುವುದು. ದಸರಾ ಕೇಸರಿ ಸ್ಪರ್ಧೆಯಲ್ಲಿ ಭಾಗವಹಿಸುವ ಕುಸ್ತಿ ಪಟು 74 ರಿಂದ 86 ಕೆ.ಜಿ.ತೂಕ ಹೊಂದಿರಬೇಕು. ಇದರಲ್ಲಿ ವಿಜೇತರಾದವರಿಗೆ ಒಂದು ಕೆ.ಜಿ.ಬೆಳ್ಳಿ ಗದೆ ನೀಡಲಾಗುವುದು ಎಂದು ನಂದಿನಿ ಮಾಹಿತಿ ನೀಡಿದರು. ಮೈಸೂರು ಕಂದಾಯ ವಿಭಾಗದ 8 ಜಿಲ್ಲೆಗಳಾದ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಮಂಗಳೂರು, ಉಡುಪಿ ಜಿಲ್ಲೆಯ ಕುಸ್ತಿ ಪಟುಗಳಿಗೆ ದಸರಾ ಕುಮಾರ್ ಸ್ಪರ್ಧೆ ಆಯೋಜಿಸಲಾಗಿದ್ದು, ಇದರಲ್ಲಿ ಭಾಗಿಯಾಗುವವರು 74 ಕೆ.ಜಿ.ಗಿಂತ ಹೆಚ್ಚು ತೂಕವುಳ್ಳವರಾಗಿರಬೇಕು. ಈ ಸ್ಪರ್ಧೆಯಲ್ಲಿ ವಿಜೇತರಾದ ಕುಸ್ತಿ ಪಟುವಿಗೆ ಮುಕ್ಕಾಲು ಕೆ.ಜಿ.ತೂಕದ ಬೆಳ್ಳಿ ಗದೆ ನೀಡಲಾಗುವುದು ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯವರು ಪಾಯಿಂಟ್ ಕುಸ್ತಿ ಆಯೋಜಿಸಿದ್ದಾರೆ. ಮಣ್ಣಿನಲ್ಲಿ ನಡೆಯುವ ನಾಡ ಕುಸ್ತಿಯಲ್ಲಿ 205 ಜೋಡಿಗಳು ಸೆಣಸಾಟ ನಡೆಸಲಿದ್ದು, ಇದರಲ್ಲಿ ವಿಜೇತರಾದವರಿಗೆ ಮೇಯರ್ ಕಪ್, ಸಾಹುಕಾರ್ ಚನ್ನಯ್ಯ ಕಪ್ ಹಾಗೂ ಮೈಸೂರು ಒಡೆಯರ್ ಕಪ್ ನೀಡಿ ಗೌರವ ಧನ ಕೂಡ ವಿತರಣೆ ಮಾಡಲಾಗುವುದು ಎಂದು ನಂದಿನಿ ತಿಳಿಸಿದರು. ಪ್ರತಿ ದಿನ ಅಂತಿಮ ಘಟ್ಟಕ್ಕೆ ಆಯ್ಕೆಯಾದ ಜೋಡಿಗೆ ಮಾರ್ಫಿಟ್ ಕುಸ್ತಿ ನಡೆಸಲಾಗುವುದು. ಈ ಬಾರಿ ಸುಮಾರು 30 ಜೋಡಿಗಳು ಮಾರ್ಫಿಟ್ ಕುಸ್ತಿಯಲ್ಲಿ ಸೆಣಸಾಟ ನಡೆಸಲಿದೆ ಎಂದು ಹೇಳಿದರು. ಎಲ್ಲಾ ವಿಭಾಗಗಳಲ್ಲಿ ಕ್ವಾರ್ಟರ್ ಫೈನಲ್, ಸೆಮಿ ಫೈನಲ್ ಕುಸ್ತಿ ಪಂದ್ಯಾವಳಿ ನಡೆಸಲಾಗುವುದು. ಅಕ್ಟೋಬರ್ 20 ರಂದು ಸಿಎಂ ಕಪ್ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಕುಸ್ತಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ಎಲ್ಲಾ ಕುಸ್ತಿ ಪಟುಗಳಿಗೆ ಮೊದಲು ತೂಕ ಮಾಡಿಸಿ ನಿಯಮದಂತೆ ಆಯ್ಕೆ ಮಾಡಲಾಗುವುದು ಎಂದು ನಂದಿನಿ ತಿಳಿಸಿದರು.


ಹಿತ ಕಾಯಲು ಸರ್ಕಾರ ಬದ್ಧ

ದಿನ ಬೆಂಗಳೂರು ಸುತ್ತಮುತ್ತ ಮಳೆ ತುಸು ಜಾಸ್ತಿಯಾದ್ದರಿಂದ ಸ್ವಲ್ಪ ಜಾಸ್ತಿಯೂ ನೀರು ಹೋಗಿದೆ. ಇದರಿಂದ ಹೆಚ್ಚುಕಡಿಮೆ ಸರಿದೂಗಿದೆ. ಸಮಿತಿಗೆ ರಾಜ್ಯದ ಪರಿಸ್ಥಿತಿಯನ್ನು ನಾವು ಮನದಟ್ಟು ಮಾಡಿಕೊಟ್ಟಿದ್ದೇವೆ ಎಂದು ಹೇಳಿದರು. ಹಲವು ಬಾರಿ ಮನವಿ ಮಾಡಿದರೂ ವಾಸ್ತವಾಂಶ ಅರಿಯಲು ಕೇಂದ್ರದಿಂದ ತಂಡ ಕಳುಹಿಸದ ಸಂಬಂಧ ಪ್ರತಿಕ್ರಿಯಿಸಿ, ಅದನ್ನು ಸಾರ್ವಜನಿಕವಾಗಿ ಮಾತನಾಡಲು ಆಗುವುದಿಲ್ಲ. ಕೇಂದ್ರದಿಂದ ತಂಡ ಕಳುಹಿಸಬೇಕೆಂದು ನಾವು ಹಲವು ಬಾರಿ ಮನವಿ ಮಾಡಿದ್ದೇವೆ. ಅಂತಿಮವಾಗಿ ಅವರು ತೀರ್ಮಾನ ಮಾಡಬೇಕು ಎಂದರು.

ಮೇಕೆದಾಟು ಯೋಜನೆ ಸಂಬಂಧ ಪ್ರತಿಕ್ರಿಯಿಸಿ, ಈ ಯೋಜನೆ ನಮ್ಮ ಸರ್ಕಾರದ ಮುಖ್ಯ ಆದ್ಯತೆ ಆಗಿದೆ. ನಾವು ಕೋರ್ಟ್ ಮೊರೆ ಹೋಗಲು ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಕರ್ನಾಟಕದಲ್ಲಿ ಮೇಕೆದಾಟು ಅಣೆಕಟ್ಟು ನಿರ್ಮಿಸಿ ತಮಿಳುನಾಡಿಗೆ 177 ಟಿಎಂಸಿ ನೀರು ಕೊಡುವ ಬಗ್ಗೆ ಯಾವುದೇ ತಕರಾರು ತೆಗೆಯಬಾರದು ಎಂದು ತಮಿಳುನಾಡು ಸರ್ಕಾರಕ್ಕೆ ಈಗಾಗಲೇ ಕೋರ್ಟ್ ನೇರವಾಗಿ ಹೇಳಿದೆ. ಈ ಯೋಜನೆ ಅನುಷ್ಠಾನ ಸಂಬಂಧ ಅಗತ್ಯವಿರುವ ಭೂಮಿಗೆ ಪರ್ಯಾಯವಾಗಿ ರೈತರಿಗೆ ಪರಿಹಾರ ನೀಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಲೋಡ್ ಶೆಡ್ಡಿಂಗ್‌ನಿಂದ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಲ್ಲಿ ತೊಂದರೆಯಾಗಿದೆ? ಎಂಬ ಬಗ್ಗೆ ಪ್ರತಿಕ್ರಿಯಿಸಿ, 192 ತಾಲೂಕುಗಳಲ್ಲಿ ಬರವಿದೆ ಎಂದು ಘೋಷಣೆ ಮಾಡಿದ್ದೇವೆ. ಕಳೆದ ಬಾರಿ ಮಳೆ ಉತ್ತಮವಾಗಿತ್ತು ಈ ವರ್ಷ ಕಡಿಮೆಯಾಗಿದೆ. ಇದರಿಂದ ಜಲವಿದ್ಯುತ್ ಉತ್ಪಾದನೆ ಸ್ವಲ್ಪ ಕಡಿಮೆಯಾಗಿದೆ. ಆದರೂ ಸರ್ಕಾರ ಇದನ್ನು ಸರಿದೂಗಿಸಲು ಕ್ರಮ ವಹಿಸಲಿದೆ ಎಂದರು.

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ರೈತರ ಸ್ಥಿತಿ ಅಧೋಗತಿ: ಜಿಟಿಡಿ

- ವಿಜಯಪುರದಲ್ಲಿ ಜೆಡಿಎಸ್ ಕಾರ್ಯಕರ್ತರ ಸಮಾವೇಶ
- ಕೇಂದ್ರದ ಅಕ್ಕಿ ಬಿಟ್ಟರೆ ರಾಜ್ಯದಿಂದ ಒಂದು ಕಾಳು ನೀಡಿಲ್ಲ
- ಬೆಳೆ ಹಾನಿಯಿಂದ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಿಲ್ಲ
- 7 ಗಂಟೆ ವಿದ್ಯುತ್ ಭರವಸೆ ನೀಡಿ 2 ಗಂಟೆಯೂ ನೀಡುತ್ತಿಲ್ಲ



ವಿಜಯಪುರ, ಅ.11– ಅನ್ನಭಾಗ್ಯ ಯೋಜನೆಯಡಿ ಪ್ರತಿ ಕುಟುಂಬಕ್ಕೆ 5 ಕೆಜಿ ಅಕ್ಕಿ ನೀಡುತ್ತಿರುವುದಾಗಿ ಕಾಂಗ್ರೆಸ್ ಸರ್ಕಾರ ಹೇಳುತ್ತಿದೆ. ಆದರೆ ಪ್ರಧಾನಿ ಮೋದಿ ಅವರು ನೀಡುತ್ತಿರುವ 5 ಕೆಜಿ ಅಕ್ಕಿ ಬಿಟ್ಟರೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾದರೂ ಇದುವರೆವಿಗೂ ತಾನು ಒಂದು ಕಾಳು ಅಕ್ಕಿಯನ್ನು ಕೂಡ ನೀಡಿಲ್ಲ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಆರೋಪಿಸಿದರು.

ರಾಜ್ಯ ಕೋರ್ ಕಮಿಟಿಯು ರಾಜ್ಯ ಪ್ರವಾಸ ಕೈಗೊಂಡಿದ್ದು, ಇಂದು ವಿಜಯಪುರದಲ್ಲಿ ನಡೆದ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಭೀಕರ ಬರಗಾಲವಿದ್ದು ಸರ್ಕಾರ ಘೋಷಿಸಿರುವಂತೆ ಬರಪೀಡಿತ 195 ತಾಲೂಕುಗಳ ಸುಮಾರು 40 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದ್ದು, ಅಂದಾಜು 4 ಸಾವಿರ ಕೋಟಿ ನಷ್ಟವಾಗಿದೆ. ಆದರೆ ರಾಜ್ಯ ಸರ್ಕಾರ ಇದುವರೆಗೂ ಒಂದು ರೂ. ಪರಿಹಾರವನ್ನೂ ಬಿಡುಗಡೆ ಮಾಡಿಲ್ಲ. ಈ ಹಿಂದಿನ ಸರ್ಕಾರಗಳು ಮೊದಲು ರಾಜ್ಯ ಸರ್ಕಾರದಿಂದ ಪರಿಹಾರ ನೀಡಿ, ನಂತರ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುತ್ತಿದ್ದವು. ಆದರೆ ಈ ಸರ್ಕಾರ ಅಂತಹ ಕೆಲಸ ಮಾಡಿಲ್ಲ ಎಂದರು. ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ಕೇಂದ್ರ ಸರ್ಕಾರದ 6 ಸಾವಿರ ಜೊತೆಗೆ ಯಡಿಯೂರಪ್ಪ ಸರ್ಕಾರವಿದ್ದಾಗ 4 ಸಾವಿರ ಸೇರಿಸಿ 10 ಸಾವಿರ ನೀಡುತ್ತಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ಬಂದ ತಕ್ಷಣ ರೈತರಿಗೆ ರಾಜ್ಯದಿಂದ ಕೊಡುತ್ತಿದ್ದ 4 ಸಾವಿರ ರೂ. ನಿಲ್ಲಿಸಲಾಗಿದೆ. ಮೈಸೂರಿನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು, ರೈತರು ದೇಶದ ಬೆನ್ನೆಲುಬು, ಇನ್ನು ರೈತರು ಉದ್ಧಾರವಾಗುತ್ತಾರೆ ಎಂದು ಹೇಳಿದ್ದರು. ಸರ್ಕಾರವೂ ಐದು ಗ್ಯಾರಂಟಿ ಜೊತೆ ಆರನೇ ಗ್ಯಾರಂಟಿಯಾಗಿ ರೈತರಿಗೆ ಯೋಜನೆ ಘೋಷಿಸಬೇಕಾಗಿತ್ತು. ಆದರೆ ಅಂತಹ ಕೆಲಸ ಆಗಿಲ್ಲ ಎಂದು ಹೇಳಿದರು.

2 ಗಂಟೆ ವಿದ್ಯುತ್ ಇಲ್ಲ: ಕಳೆದ ಸರ್ಕಾರದಲ್ಲಿ ಸೋಲಾರ್ ಮೂಲಕ ವಿದ್ಯುತ್ ಉತ್ಪಾದನೆ ಮಾಡಿ ರೈತರಿಗೆ ಪ್ರತಿ ದಿನ 7 ಗಂಟೆ ನಿರಂತರ ವಿದ್ಯುತ್ ನೀಡಲಾಗುತ್ತಿತ್ತು. ಆದರೆ ಈಗ ಎರಡು ಗಂಟೆ ವಿದ್ಯುತ್ ನೀಡಲು ಸಹ ಸರ್ಕಾರ ಹೆಣಗಾಡುತ್ತಿದೆ. ಮೊದಲು 10 ಸಾವಿರ ಕಟ್ಟಿದರೆ ಸಾಕು ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿದ್ದರು. ಆದರೆ ಈಗ ರೈತರು ವಿದ್ಯುತ್ ಸಂಪರ್ಕ ಪಡೆಯಲು 4 ರಿಂದ 5 ಲಕ್ಷ ವೆಚ್ಚವಾಗುತ್ತಿದೆ. ಆದರೂ ವಿದ್ಯುತ್ ಅನ್ನು ಸರಿಯಾಗಿ ನೀಡುತ್ತಿಲ್ಲ ಎಂಬ ಕಾಂಗ್ರೆಸ್ ಶಾಸಕ ರಾಜುಕಾಗೆ ಅವರ ಹೇಳಿಕೆಯನ್ನು ಉಲ್ಲೇಖಿಸಿದರು.

ಗೃಹ ಜ್ಯೋತಿ ಯೋಜನೆಯಲ್ಲಿ ಮಹದೇವಪ್ಪ ನಿನಗೂ 200 ಯೂನಿಟ್ ಫ್ರೀ, ನನಗೂ ಫ್ರೀ, ವೆಂಕಟೇಶ್ ನಿನಗೂ ಫ್ರೀ ಅಂತ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಘೋಷಿಸಿ, ಈಗ ಪ್ರತಿ ಕುಟುಂಬದ ಸರಾಸರಿ 53 ಯೂನಿಟ್ ಅಷ್ಟೇ ಎಂದು ಸರ್ಕಾರ ಹೇಳುತ್ತಿದೆ. ಪ್ರತಿ ಕುಟುಂಬಕ್ಕೂ 200 ಯೂನಿಟ್ ಎಲ್ಲಿ ಫ್ರೀ ಕೊಡುತ್ತಿದ್ದಾರೆ. ಇದು ಗ್ಯಾರಂಟಿ ಸರ್ಕಾರದ ಮತ್ತೊಂದು ಸುಳ್ಳು ಎಂದು ಸರ್ಕಾರಕ್ಕೆ ಚಾಟಿ ಬೀಸಿದರು.



ಸಿದ್ದೇಶ್ವರ ಶ್ರೀಗಳ ಸ್ಮಾರಕಕ್ಕೆ ಶಾಸಕ ಜಿ.ಟಿ.ದೇವೇಗೌಡರ ನಮನ.

ನೀರಾವರಿ ಯೋಜನೆ ಸ್ಥಗಿತ: ಹೆಚ್.ಡಿ. ದೇವೇಗೌಡರು ಪ್ರಧಾನಿಯಾಗಿದ್ದಾಗ ಆಲಮಟ್ಟಿ ಜಲಾಶಯದ ಮಟ್ಟವನ್ನು 519 ಮೀಟರ್ ನಿಂದ 524 ಮೀಟರ್‌ಗೆ ಹೆಚ್ಚಿಸಲು ಕ್ರಮ ಕೈಗೊಂಡಿದ್ದರು. ನಾರಾಯಣಪುರ ಬಲದಂಡ ನಾಲೆ ವಿಸ್ತರಿಸಿದರು. ಮುಳವಾಡ ಏತನೀರಾವರಿ ಯೋಜನೆ ಮೂಲಕ ಈ ಭಾಗದ ರೈತರಿಗೆ ಅನುಕೂಲ ಮಾಡಿಕೊಟ್ಟರು ಎಂದು ದೇವೇಗೌಡರ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮಕ್ಕೂ ಮುನ್ನ ವಿಜಯಪುರದಲ್ಲಿರುವ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಜ್ಞಾನ ಯೋಗಾಶ್ರಮ ಹಾಗೂ ಪ್ರಸಿದ್ಧ ಸಿದ್ದೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದರು.

ಕಾರ್ಯಕ್ರಮದಲ್ಲಿ ಕೋರ್ ಕಮಿಟಿ ಸಂಚಾಲಕ ವೈಎಸ್‌ವಿ ದತ್ತ ಸದಸ್ಯರಾದ ಆಲ್ಕೋಡ್ ಹನುಮಂತಪ್ಪ, ಹೆಚ್.ಕೆ. ಕುಮಾರಸ್ವಾಮಿ, ಬಂಡೆಪ್ಪ ಕಾಶಂಪೂರ್, ನಾಡಗೌಡ, ರಾಜೂಗೌಡ, ನೇಮಿರಾಜ್ ನಾಯ್ಕ್, ಸುರೇಶಗೌಡ, ಕೃಷ್ಣಾರೆಡ್ಡಿ, ಪ್ರಸನ್ನ ಕುಮಾರ್, ದೊಡ್ಡಪ್ಪಗೌಡ ಪಾಟೀಲ್, ವೀರಭದ್ರಪ್ಪ ಹಾಲರವಿ, ತಿಮ್ಮರಾಯಪ್ಪ, ಸುನಿತಾ ಚೌಹಣ್, ಸಿ.ವಿ. ಚಂದ್ರಶೇಖರ್, ಸುಧಾಕರ್ ಶೆಟ್ಟಿ, ಮಾಜಿ ಶಾಸಕ ದೇವಾನಂದ ಚೌಹಣ್, ವಿಜಯಪುರ, ಬಾಗಲಕೋಟೆ ಜಿಲ್ಲಾಧ್ಯಕ್ಷರುಗಳು, ಎರಡು ಜಿಲ್ಲೆಗಳ ಅಭ್ಯರ್ಥಿಗಳು, ತಾಲೂಕು ಅಧ್ಯಕ್ಷರುಗಳು, ಪದಾಧಿಕಾರಿಗಳು, ಮುಖಂಡರುಗಳು, ಸಾವಿರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

'ತಲಕಾವೇರಿ ತಾಯಿ... ಕಾಪಾಡು ತಾಯಿ' ಯಾತ್ರೆ

ಕಾವೇರಿ ವಿವಾದ ನಿವಾರಣೆಗಾಗಿ ಕದಂಬ ಸೈನ್ಯದಿಂದ ವಿನೂತನ ಚಳವಳಿ



ಮಡಿಕೇರಿ,ಅ.11– ಮಳೆಯ ಅಭಾವದಿಂದ ಕಾವೇರಿ ನೀರು ಹಂಚಿಕೆಯ ವಿವಾದ ಉದ್ಭವವಾದ ಯಾವುದೇ ಸಂದರ್ಭಗಳಲ್ಲಿ ಸರ್ಕಾರಗಳಾಗಲಿ, ರಾಜಕೀಯ ಪಕ್ಷಗಳಾಗಲಿ ಅದನ್ನು ಬಗೆಹರಿಸಲು ಆಸಕ್ತಿಯನ್ನೇ ತೋರಿಲ್ಲ. ಈ ಹಿನ್ನೆಲೆ ಕಾವೇರಿ ನದಿ ನೀರಿನ ಹಂಚಿಕೆಗೆ ಕನ್ನಡಿಗರೆಲ್ಲರ ಬೆಂಬಲವನ್ನು ಪಡೆಯುವ ನಿಟ್ಟಿನಲ್ಲಿ 'ತಲಕಾವೇರಿ ತಾಯಿ...ಕಾಪಾಡು ತಾಯಿ' ಯಾತ್ರೆಯನ್ನು ಕದಂಬ ಸೈನ್ಯ ಹಮ್ಮಿಕೊಂಡಿರುವುದಾಗಿ ಸಂಘಟನೆಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೆರೆಯ ತಮಿಳುನಾಡಿನಲ್ಲಿ ಕಾವೇರಿಯ ವಿಚಾರ ಎದುರಾದ ಸಂದರ್ಭಗಳಲ್ಲೆಲ್ಲ ಅಲ್ಲಿನ ಜನತೆ ಪಕ್ಷಾತೀತವಾಗಿ ಒಗ್ಗೂಡುತ್ತಾರೆ. ಆದರೆ, ಕರ್ನಾಟಕದಲ್ಲಿ ಅದು ಸಾಧ್ಯವಾಗುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರಲ್ಲದೇ ಕಾವೇರಿ, ಕೃಷ್ಣ, ಮಹದಾಯಿ ಪ್ರತಿಯೊಬ್ಬ ಕನ್ನಡಿಗರ ಹೃದಯ ಬಡಿತವಾಗಬೇಕೆಂದು ಆಶಿಸಿದರು.

ಮಳೆಯಿಲ್ಲದೆ ಕಾವೇರಿಯಲ್ಲಿ ನಮ್ಮ ಬಳಕೆಗೆ ಅಗತ್ಯ ನೀರಿಲ್ಲ ಎನ್ನುವುದನ್ನು ಕೇಂದ್ರಕ್ಕೆ ತಿಳಿಸುವಲ್ಲಿ ಎಲ್ಲಾ ಸರ್ಕಾರಗಳು ವಿಫಲವಾಗಿದ್ದರೆ, ವಿರೋಧ ಪಕ್ಷಗಳಿಂದ ಸರ್ಕಾರವನ್ನು ಎಚ್ಚರಿಸುವ ಪ್ರಯತ್ನಗಳು ನಡೆಯುತ್ತಿಲ್ಲ ವೆಂದು ತೀವ್ರ ಬೇಸರ ವ್ಯಕ್ತಪಡಿಸಿದರು. ಎಲ್ಲಾ ಸರ್ಕಾರಗಳು, ರಾಜಕೀಯ ಪಕ್ಷಗಳು ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ರೈತರ ಹಿತವನ್ನು ಬಲಿಕೊಡುತ್ತಿರುವುದಾಗಿ ಆಕ್ರೋಶ ಹೊರ ಹಾಕಿದರು.

ಕಾವೇರಿ ಸಂಕಷ್ಟ ಸೂತ್ರಕ್ಕೆ ಆಗ್ರಹ: ಮಳೆಯ ಕೊರತೆಯ ಸಂದರ್ಭ ಕರ್ನಾಟಕ ಮತ್ತು ತಮಿಳುನಾಡು ನಡುವೆ ನೀರು ಹಂಚಿಕೆ ಹೇಗೆ ಎನ್ನುವ ಬಗ್ಗೆ 'ಕಾವೇರಿ ಸಂಕಷ್ಟ ಸೂತ್ರವನ್ನು' ರಚಿಸಬೇಕೆಂದು ಬೇಕ್ರಿ ರಮೇಶ್ ಇದೇ ಸಂದರ್ಭದಲ್ಲಿ ಆಗ್ರಹಿಸಿದರು. ಪ್ರಸ್ತುತ ಕಾವೇರಿ, ಕೃಷ್ಣ, ಮಹದಾಯಿ ಹೀಗೆ ಎಲ್ಲವೂ ರಾಜಕೀಯ ಕಾರಣಗಳಿಗೆ ಬಳಕೆಯಾಗುತ್ತಿದೆ ಎಂದು ತೀಕ್ಷ್ಣವಾಗಿ ನುಡಿದ ಅವರು, ರಾಜ್ಯದ 224 ಶಾಸಕರು, ವಿಧಾನಪರಿಷತ್ ಸದಸ್ಯರು, ಸಂಸದರು ರಾಜ್ಯದ ರೈತರ ಸಂಕಷ್ಟಗಳಿಗೆ ಕಿಂಚಿತ್ ಕಾಳಜಿ ತೋರಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಈ ಹಿಂದೆ ಹಿರಿಯರಾದ, ರೈತ ಹೋರಾಟಗಾರರಾದ ಮಾದೇಗೌಡರ ಮಾತಿಗೆ ಸರ್ಕಾರಗಳು, ಪಕ್ಷಗಳು ಗಮನ ಹರಿಸುತ್ತಿದ್ದವು. ಇಂದು ನಮಗೆ ನಾಯಕರೇ ಇಲ್ಲದಂತಹ ಪರಿಸ್ಥಿತಿ ಇದೆ. ನೀವು ಹೋರಾಟ ಬೇಕಾದರೆ ಮಾಡಿಕೊಳ್ಳಿ ಎನ್ನುವ ಧಾರ್ಷ್ಟ್ಯದಿಂದ ತಮಿಳುನಾಡಿಗೆ ಪ್ರತಿನಿತ್ಯ ಇಂತಹ ಸಂಕಷ್ಟಕರ ಪರಿಸ್ಥಿತಿಯಲ್ಲು 5600 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿದರು. ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ. ದೇವನಹಳ್ಳಿ ದೇವರಾಜ್ ಮಾತನಾಡಿ, ಕಾವೇರಿ ಸಂಕಷ್ಟ ಬಗೆಹರಿಕೆಗೆ ರಾಷ್ಟ್ರೀಯ ಜಲ ನೀತಿಯನ್ನು ರೂಪಿಸುವುದು ಅತ್ಯವಶ್ಯವೆಂದು ಅಭಿಪ್ರಾಯಿಸಿದರು.

ಕಾವೇರಿಗೆ ಯಾತ್ರೆ: ಕದಂಬ ಸೈನ್ಯದ ಮಂಡ್ಯ, ಬೆಂಗಳೂರು, ಗ್ರಾಮಾಂತರ, ಮಂಡ್ಯ, ರಾಮನಗರ, ಮೈಸೂರು ಜಿಲ್ಲೆಗಳ ಪ್ರಮುಖರು ಕಾವೇರಿ ಸಂಕಷ್ಟ ನಿವಾರಣೆಗೆ ರಾಜ್ಯದ ಜನರ ಒಕ್ಕೊರಲಿನ ಬೆಂಬಲವನ್ನು ಕೋರಿ ಮಂಡ್ಯದಿಂದ ಯಾತ್ರೆಯನ್ನು ಆರಂಭಿಸಿದೆ. ಯಾತ್ರೆ ಮೈಸೂರು ಮೂಲಕ ಕೊಡಗಿನ ಗೋಣಿಕೊಪ್ಪ, ಸಿದ್ದಾಪುರ, ಅಮ್ಮತ್ತಿ, ಮಡಿಕೇರಿ ಮೂಲಕ ಭಾಗಮಂಡಲ ಮತ್ತು ತಲಕಾವೇರಿಗೆ ತೆರಳಲಿದೆ. ಅಲ್ಲಿ ಕಾವೇರಿಗೆ ವಿಶೇಷ ಪೂಜೆ ಸಲ್ಲಿಸಿ ಸಂಕಷ್ಟ ಪರಿಹಾರಕ್ಕೆ ಪ್ರಾರ್ಥನೆ ಸಲ್ಲಿಸಲಾಗುತ್ತದೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ರಾಜ್ಯ ಸಂಚಾಲಕ ಎಸ್.ಶಿವಕುಮಾರ್, ರಾಮನಗರ ಜಿಲ್ಲಾ ಅಧ್ಯಕ್ಷ ಶಿವಕುಮಾರ್ ಪಟ್ಲಿ, ಮಂಡ್ಯ ಜಿಲ್ಲಾ ಉಪಾಧ್ಯಕ್ಷ ಜೋಸೆಫ್ ರಾಮು, ಮೈಸೂರು ಮಹದೇವಸ್ವಾಮಿ ಉಪಸ್ಥಿತರಿದ್ದರು.



ಜಿಲ್ಲಾಡಳಿತದಿಂದ ಎನ್‌ಡಿಆರ್‌ಎಫ್ ತಂಡಕ್ಕೆ ಬೀಳ್ಕೊಡುಗೆ

ಮಡಿಕೇರಿ, ಅ.11– ಮುಂಗಾರು ಮಳೆ ಸಂದರ್ಭದಲ್ಲಿ ಉಂಟಾಗಬಹುದಾಗಿದ್ದ ಪ್ರಾಕೃತಿಕ ವಿಕೋಪ ಎದುರಿಸಲು ಆಗಮಿಸಿದ್ದ ಎನ್‌ಡಿಆರ್‌ಎಫ್ ತಂಡಕ್ಕೆ ಜಿಲ್ಲಾಡಳಿತ ವತಿಯಿಂದ ಬುಧವಾರ ಬೀಳ್ಕೊಡಲಾಯಿತು.

ನಗರದ ಖಾಸಗಿ ಹೋಟೆಲ್‌ನಲ್ಲಿ 10 ನೇ ಬೆಟಾಲಿಯನ್‌ನ ಎನ್‌ಡಿಆರ್‌ಎಫ್ ತಂಡದ ಮುಖ್ಯಸ್ಥರಾದ ಶಾಂತಿಲಾಲ್ ಜಾಟಿಯಾ ಅವರಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಆತ್ಮೀಯವಾಗಿ ಸನ್ಮಾನಿಸಿದರು. ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ ರಾಜಾ, ಕೊಡಗು ಜಿಲ್ಲೆಯಲ್ಲಿ 2018, 2019, 2020 ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದ ಹಿನ್ನೆಲೆ, ಈ ಬಾರಿಯೂ ಸಹ ಎನ್‌ಡಿಆರ್‌ಎಫ್ ತಂಡ ಜಿಲ್ಲೆಗೆ ಆಗಮಿಸಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿತ್ತು ಎಂದು ಹೇಳಿದರು.

ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಬರುವ ಕೊಡಗು ವಿಶೇಷ ಜಿಲ್ಲೆಯಾಗಿದೆ. ಬರೆ ಕುಸಿತ, ಪ್ರವಾಹ ಉಂಟಾದ ಸಂದರ್ಭದಲ್ಲಿ ಹೇಗೆ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಅಣಕು ಪ್ರದರ್ಶನವನ್ನು ಏರ್ಪಡಿಸಿ ಜಿಲ್ಲೆಯ ಜನತೆಯಲ್ಲಿ ಧೈರ್ಯ ತುಂಬುವ ಕೆಲಸ ಮಾಡಿತ್ತು ಎಂದು ಹೇಳಿದರು.

ಶಾಂತಿಲಾಲ್ ಜಾಟಿಯಾ ಅವರ ನೇತೃತ್ವದ ಎನ್‌ಡಿಆರ್‌ಎಫ್ ತಂಡ ಹಲವು ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ಉತ್ತಮವಾಗಿ ಕಾರ್ಯನಿರ್ವಹಿಸಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿ.ಪಂ ಸಿಇಒ ವರ್ಣಿತ್ ನೇಗಿ ಅವರು ಮಾತನಾಡಿ, ಅತಿವೃಷ್ಟಿ, ಅನಾವೃಷ್ಟಿ ಎದುರಿಸುವಲ್ಲಿ ಪ್ರತೀ ಹಂತದಲ್ಲಿಯೂ ಸಿದ್ಧತೆ ಅತ್ಯಗತ್ಯ. ಆ ನಿಟ್ಟಿನಲ್ಲಿ ಎನ್‌ಡಿಆರ್‌ಎಫ್ ತಂಡ ತಮ್ಮದೇ ಕಾರ್ಯ ಚಟುವಟಿಕೆಯನ್ನು ಕೈಗೊಂಡು ಜಿಲ್ಲೆಯ ಜನತೆಯಲ್ಲಿ ವಿಶ್ವಾಸ ಉಂಟುಮಾಡಿದೆ ಎಂದು ಹೇಳಿದರು.

ಎನ್‌ಡಿಆರ್‌ಎಫ್ ತಂಡದ 10 ನೇ ಬೆಟಾಲಿಯನ್ ಮುಖ್ಯಸ್ಥರಾದ ಶಾಂತಿಲಾಲ್ ಜಾಟಿಯಾ ಅವರು ಮಾತನಾಡಿ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಜೊತೆಗೆ ಜೂನ್ ತಿಂಗಳಿನಿಂದ ಇಲ್ಲಿಯವರೆಗೆ ಪ್ರಾಕೃತಿಕ ವಿಕೋಪ ಎದುರಿಸುವ ನಿಟ್ಟಿನಲ್ಲಿ ಅಣಕು ಪ್ರದರ್ಶನ, ವಿವಿಧ ಗ್ರಾ.ಪಂ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮಗಳು, 20 ಶಾಲೆಗಳಲ್ಲಿ ಶಾಲಾ ಮಕ್ಕಳಿಗೆ ಅರಿವು ಕಾರ್ಯಕ್ರಮ, ಮೆಡಿಕಲ್ ಕಿಟ್ ವಿತರಣೆ, ವಿವಿಧ ಕಡೆಗಳಲ್ಲಿ ಗಿಡ ನೆಡುವ ಕಾರ್ಯಕ್ರಮ, ಗಾಂಧಿ ಜಯಂತಿ ಪ್ರಯುಕ್ತ ನಗರಸಭೆಯೊಂದಿಗೆ ಶ್ರಮದಾನ ಕಾರ್ಯಕ್ರಮ, ಹೀಗೆ ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗಿತ್ತು ಎಂದು ವಿವರಿಸಿದರು. ಉಪ ವಿಭಾಗಾಧಿಕಾರಿ ಡಾ. ಯತೀಶ್ ಉಳ್ಳಾಲ್ ಮಾತನಾಡಿ, ಎನ್‌ಡಿಆರ್‌ಎಫ್ ತಂಡದ ಕಾರ್ಯ ಚಟುವಟಿಕೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಎನ್‌ಡಿಆರ್‌ಎಫ್ ತಂಡದ ಜಿ.ಎಲ್. ಆರ್ಕಷ್ ಮಾತನಾಡಿ, ಯಾವುದೇ ರೀತಿಯ ವಿಕೋಪಗಳು ಸಂಭವಿಸಿದ್ದಲ್ಲಿ ಎದುರಿಸುವುದು ಅತ್ಯಗತ್ಯವಾಗಿದೆ ಎಂದರು.

ಜಿಲ್ಲಾ ವಿಪತ್ತು ನಿರ್ವಹಣಾ ಪರಿಣತರಾದ ಅನನ್ಯ ವಾಸುದೇವ್, ಡಿವೈಎಸ್‌ಪಿ ಜಗದೀಶ್, ಅನೂಪ್ ಮಾದಪ್ಪ, ಶಿರಸ್ತೇದಾರ್ ಪ್ರಕಾಶ್, ಎನ್‌ಡಿಆರ್‌ಎಫ್ ತಂಡದ ಪ್ರತಿನಿಧಿಗಳು ಇತರರು ಇದ್ದರು.

ನಾಳೆ ಲೋಕಾಯುಕ್ತರಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಅ.11– ಕರ್ನಾಟಕ ಲೋಕಾಯುಕ್ತದ ಮಡಿಕೇರಿ ಕಚೇರಿಯ ಅಧಿಕಾರಿಗಳು ಅ.13 ರಂದು ಬೆಳಗ್ಗೆ 11 ಗಂಟೆಯಿಂದ 1 ಗಂಟೆಯವರೆಗೆ ಮಡಿಕೇರಿ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ವಿತರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡೆವಿಟ್ ಮಾಡಿಸಿದ ಅರ್ಜಿಯನ್ನು ಸ್ವೀಕರಿಸಲಾಗುತ್ತದೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದು. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ ಮಡಿಕೇರಿಯ ದೂ.ಸಂ. 08272–295297ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಕೂಡಿಗೆಯಲ್ಲಿ ರಾಜ್ಯಮಟ್ಟದ ಹಾಕಿ ಟೂರ್ನಿಗೆ ತೆರೆ

14ರ ವಯೋಮಾನದ ಬಾಲಕರ ಹಾಕಿ: ಮೈಸೂರು ತಂಡ ರಾಷ್ಟ್ರೀಯ ಟೂರ್ನಿಗೆ ಆಯ್ಕೆ



ಕುಶಾಲನಗರ (ಕೊಡಗು ಜಿಲ್ಲೆ), ಅ.11– ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಮೂರು ದಿನಗಳ ಕಾಲದ ರಾಜ್ಯ ಮಟ್ಟದ ಬಾಲಕರು, ಮತ್ತು ಬಾಲಕಿಯರ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದ ಹಾಕಿ ಪಂದ್ಯಾವಳಿಯು ಕೂಡಿಗೆಯ ಸರ್ಕಾರಿ ಕ್ರೀಡಾ ಪ್ರೌಢ ಶಾಲಾ ಹಾಕಿ ಟರ್ಫ್ ಮೈದಾನದಲ್ಲಿ ಬುಧವಾರ ಮುಕ್ತಾಯಗೊಂಡಿತು.

ರಾಜ್ಯ ಮಟ್ಟದ 14 ವಯೋಮಾನದ ಬಾಲಕರ ಹಾಕಿ ಪಂದ್ಯಾವಳಿಯಲ್ಲಿ ಮೈಸೂರು ವಿಭಾಗದ ತಂಡವು ಪ್ರಥಮ ಸ್ಥಾನ ಪಡೆದು ರಾಷ್ಟ್ರೀಯ ಹಾಕಿ ಟೂರ್ನಿಗೆ ಆಯ್ಕೆಗೊಂಡಿತು. ಕಲ್ಬುರ್ಗಿ ತಂಡವು ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟಿತು.

ಮೈಸೂರು ತಂಡವು 13 ಗೋಲು ಗಳಿಸಿ ವಿಜೇತಗೊಂಡು ರಾಷ್ಟ್ರೀಯ ಟೂರ್ನಿಗೆ ಆಯ್ಕೆಗೊಂಡಿದೆ. ಕಲ್ಬುರ್ಗಿ ತಂಡವು 11 ಗೋಲು ಗಳಿಸಿತು. ಆಟಗಾರರು ಉತ್ತಮ ಪ್ರದರ್ಶನ ನೀಡಿದರು. ಟೂರ್ನಿಯಲ್ಲಿ ಹೆಚ್ಚು ಗೋಲು ಗಳಿಸಿದ ಮೈಸೂರು ವಿಭಾಗದ ತಂಡವು ಪ್ರಥಮ ಸ್ಥಾನ ಗಳಿಸಿ ರಾಷ್ಟ್ರೀಯ ಟೂರ್ನಿಗೆ ಆಯ್ಕೆಗೊಂಡಿತು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ್, ರಾಷ್ಟ್ರೀಯ ಟೂರ್ನಿಗೆ ಆಯ್ಕೆಗೊಂಡ ಮೈಸೂರು ವಿಭಾಗದ ತಂಡಗಳಿಗೆ ಟ್ರೋಫಿ ವಿತರಿಸಿದರು.

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಡಾ ಸದಾಶಿವಯ್ಯ ಎಸ್.ಪಲ್ಲೇದ್, ಕ್ರೀಡಾ ಶಾಲೆಯ ಮುಖ್ಯ ಶಿಕ್ಷಕ ಬಿ.ಟಿ.ದೇವಕುಮಾರ್, ಕೂಡ್ಲೂರು ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ್, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕಿ ಎಂ.ಎಲ್.ಸುಕುಮಾರಿ, ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ದೈಹಿಕ ಶಿಕ್ಷಣ ಶಿಕ್ಷಕ ಬಿ.ಟಿ.ಪೂರ್ಣೇಶ್, ತಾಂತ್ರಿಕ ಅಧಿಕಾರಿಗಳಾದ ಎನ್.ಎಲ್. ಸುರೇಶ್ ಕುಮಾರ್ ಪಿ.ಇ.ನಂದ, ಗಣೇಶ್ ಕುಮಾರ್, ದೈಹಿಕ ಶಿಕ್ಷಣ ಶಿಕ್ಷಕರು, ಇತರರು ಇದ್ದರು.

ವಿಜೇತ ತಂಡಗಳು ರಾಷ್ಟ್ರೀಯ ಮಟ್ಟದ ಹಾಕಿ ಕ್ರೀಡೆಯಲ್ಲಿ ಭಾಗವಹಿಸಲಿವೆ. ಟೂರ್ನಿಯಲ್ಲಿ ನಾಲ್ಕು ವಿಭಾಗಗಳಾದ ಕಲಬುರ್ಗಿ, ಬೆಳಗಾವಿ, ಬೆಂಗಳೂರು, ಮೈಸೂರು ವಿಭಾಗಗಳ ತಂಡಗಳು ಪಾಲ್ಗೊಂಡು ಗೆಲುವಿಗಾಗಿ ತೀವ್ರ ಸೆಣಸಾಟ ನಡೆಸಿದವು.

ಅ.18 ರಂದು ಶ್ರೀ ಕಾವೇರಿ ತೀರ್ಥ ವಿತರಣಾ ರಥಯಾತ್ರೆ

ಮಡಿಕೇರಿ,ಅ.11– ಮಡಿಕೇರಿ ನಗರದ ಮ್ಯಾನ್ಸ್ ಕಾಂಪೌಂಡ್ ಬಳಿಯಿರುವ ಶ್ರೀ ಕಾವೇರಿ ಭಕ್ತ ಮಂಡಳಿ ವತಿಯಿಂದ 69ನೇ ವರ್ಷದ ಶ್ರೀ ಕಾವೇರಿ ತೀರ್ಥ ವಿತರಣಾ ರಥಯಾತ್ರೆಯು ಅ.18ರಂದು ನೆರವೇರಲಿದೆ. ಅಂದು ಬೆಳಗ್ಗೆ 7 ಗಂಟೆಗೆ ಗಣಪತಿ ಹೋಮದೊಂದಿಗೆ ಪ್ರಾರಂಭಗೊಂಡು ಶ್ರೀ ಕಾವೇರಿ ಮಾತೆಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಾ ಕೈಂಕರ್ಯಗಳು ಜರುಗಲಿವೆ. 12 ಗಂಟೆಗೆ ಅನ್ನದಾನದ ನಂತರ ಮಧ್ಯಾಹ್ನ ಶ್ರೀ ಕಾವೇರಿ ತೀರ್ಥ ವಿತರಣಾ ರಥಯಾತ್ರೆಯು ಮ್ಯಾನ್ಸ್ ಕಾಂಪೌಂಡ್ ಬಳಿಯಿಂದ ಹೊರಟು ಜೂನಿಯರ್ ಕಾಲೇಜು ಮಾರ್ಗವಾಗಿ ಓಂಕಾರೇಶ್ವರ ದೇವಾಲಯ, ಜನರಲ್ ತಿಮ್ಮಯ್ಯ ವೃತ್ತ, ಶಾಂತಿನಿಕೇತನ, ಮರಳಿ ಜನರಲ್ ತಿಮ್ಮಯ್ಯ ವೃತ್ತ, ಗೌಳಿಬೀದಿ, ಕೋಹಿನೂರು ರಸ್ತೆ, ಎಸ್.ಬಿ.ಐ, ಪೇಟೆ ಶ್ರೀ ರಾಮಮಂದಿರ, ಚೌಕಿ, ಗಣಪತಿ ಬೀದಿ, ಬನ್ನಿಮಂಟಪ, ಮಹದೇವಪೇಟೆ, ಚೌಕಿ, ಸ್ಕ್ವಾಡರ್ನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತ, ಜೂನಿಯರ್ ಕಾಲೇಜು ಮಾರ್ಗವಾಗಿ ಮ್ಯಾನ್ಸ್ ಕಾಂಪೌಂಡ್ ಬಳಿ ಸಂಪನ್ನಗೊಳ್ಳಲಿದೆ. ಶ್ರೀ ಕಾವೇರಿ ತೀರ್ಥ ವಿತರಣಾ ರಥಯಾತ್ರೆ ಉತ್ಸವದಲ್ಲಿ ಸರ್ವರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಕಾವೇರಿ ಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಕಾವೇರಿ ಭಕ್ತ ಮಂಡಳಿ ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್‌ಗೆ ಆಗ್ರಹಿಸಿ ರೈತರ ಪ್ರತಿಭಟನೆ

ಸರ್ಕಾರ, ಸೆಸ್ಕ್ ಇಲಾಖೆ ವಿರುದ್ಧ ಆಕ್ರೋಶ



ಚಾಮರಾಜನಗರ, ಅ.11– ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂತೆ ಆಗ್ರಹಿಸಿ ರೈತ ಸಂಘಟನೆಗಳ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಮಂಗಳವಾರ ಸಂಜೆಯಿಂದಲೇ ಧರಣಿ ಆರಂಭಿಸಿದ್ದ ಪ್ರತಿಭಟನಾಕಾರರು ಅಹೋರಾತ್ರಿ ಧರಣಿ ನಡೆಸಿದ್ದರು. ಅದರ ಮುಂದುವರಿದ ಭಾಗವಾಗಿ ಬುಧವಾರ ಕೂಡ ಪ್ರತಿಭಟನೆ ನಡೆಯಿತು. ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ್ದ ರೈತರು, ರೈತ ಸಂಘಟನೆಗಳ ಮುಖಂಡರು ಸರ್ಕಾರ, ಸೆಸ್ಕ್ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಸರ್ಕಾರದ ಆದೇಶ ಉಲ್ಲಂಘಿಸುತ್ತಿರುವ ಸೆಸ್ಕ್ ಇಲಾಖೆಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಸರ್ಕಾರ ಹಾಗೂ ಜಿಲ್ಲಾಡಳಿತ ಬದುಕಿಲ್ಲ. ಒಂದು ವೇಳೆ ಬದುಕಿದ್ದರೆ ಜಿಲ್ಲಾ ಉಸ್ತುವಾರಿ ಸಚಿವರು ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದರು.

ರೈತ ಸಂಘದ ಮಹೇಶ್ ಪ್ರಭು ಮಾತನಾಡಿ, ಸೆಸ್ಕ್ ಇಲಾಖೆ ತನ್ನ ವ್ಯಾಪ್ತಿಯಲ್ಲಿರುವ 5 ಜಿಲ್ಲೆಗಳಲ್ಲಿ ಹಗಲು 4 ಗಂಟೆ ಹಾಗೂ ರಾತ್ರಿ 3 ಗಂಟೆ ವಿದ್ಯುತ್ ಕೊಡುತ್ತೇವೆ ಎಂದು ಹೇಳುತ್ತಿದೆ. ಆದರೆ, ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಕೊಡುತ್ತಿಲ್ಲ. ಲೈನ್ ರಿಪೇರಿ, ಲೋಡ್ ಶೆಡ್ಡಿಂಗ್ ನೆಪ ಹೇಳಿ ಪ್ರತಿದಿನ 2 ಗಂಟೆ ಮಾತ್ರ ಕೊಡುತ್ತಿದ್ದಾರೆ. ಇದರಿಂದ ಕೃಷಿ ಚಟುವಟಿಕೆ ಮಾಡಲಾಗುತ್ತಿಲ್ಲ. ಇರುವ ಬೆಳೆಯನ್ನು ಉಳಿಸಿಕೊಳ್ಳಲು ಕಷ್ಟವಾಗಿದೆ. ಕೂಡಲೇ ಸಮರ್ಪಕ ವಿದ್ಯುತ್ ನೀಡಬೇಕು. ಇಲ್ಲದಿದ್ದರೆ ಸೆಸ್ಕ್ ಎಂಡಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದರು. ಪ್ರತಿಭಟನೆಯಲ್ಲಿ ನೂರಾರು ರೈತರು ಭಾಗವಹಿಸಿದ್ದರು.

ಹಾಲಿನ ನಾಗರಾಜು, ಚೆನ್ನಸ್ವಾಮಿ ಗೌಂಡರ್, ಎಚ್ ಸಿ ಮಹೇಶ್ ಕುಮಾರ್, ಹೆಬ್ಬಸೂರು ಬಸವಣ್ಣ, ಕುದೇರು ರಾಜೇಂದ್ರಸ್ವಾಮಿ, ಕಾಳನಹುಂಡಿ ಗುರುಸ್ವಾಮಿ, ಕಾರ್ಯಾಧ್ಯಕ್ಷ ಮಲಿಯೂರು ಹರ್ಷ, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಮಲೆಯೂರು ಗ್ರಾಮ ಘಟಕದ ಅಧ್ಯಕ್ಷ ಬಸವರಾಜಪ್ಪ, ಮಹೇಂದ್ರ, ಸತೀಶ್, ಕಾಳಪ್ಪ, ಮಹೇಶ್, ಕೃಷ್ಣ, ಮಾದೇವ ಸ್ವಾಮಿ, ಗುರುಮಲ್ಲಪ್ಪ, ಗುರುಸಿದ್ದಪ್ಪ, ಮಾದೇಶ್, ಸಿದ್ದೇಶ್, ಸಿದ್ದಲಿಂಗಪ್ಪ, ಮಹೇಶ್, ಮಲ್ಲಪ್ಪ, ಪ್ರಕಾಶ್, ನಾಗಣ್ಣ, ರಾಜಣ್ಣ, ಸುಧಾಕರ, ರಘು, ನಾಗು, ಸುರೇಶ್, ಶೇಖರ್, ಹರಳಿಕಟ್ಟೆ ಪ್ರಭುಸ್ವಾಮಿ, ಮಾದೇವಪ್ಪ, ಗುರುಸಿದ್ದಪ್ಪ, ಸಿದ್ದಲಿಂಗಪ್ಪ, ರಾಮ ಸಮುದ್ರ ಮಂಜು ಮತ್ತಿತರರು ಭಾಗವಹಿಸಿದ್ದರು.

ಅ.17ರಿಂದ ದಸರಾ ಮಹೋತ್ಸವ

4 ದಿನಗಳ ಕಾಲವು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ

ಸರ್ವರ ಸಹಕಾರ ಕೋರಿದ ಜಿಲ್ಲಾಧಿಕಾರಿ ಶಿಲ್ಪಾನಾಗ್



ಚಾಮರಾಜನಗರ, ಅ.11– ಮೈಸೂರು ದಸರಾ ಮಹೋತ್ಸವ ಭಾಗವಾಗಿ ಚಾಮರಾಜನಗರ ಜಿಲ್ಲೆಯಲ್ಲೂ ಅ.17 ರಿಂದ 20ರವರೆಗೆ ಚಾಮರಾಜನಗರ ದಸರಾ ಮಹೋತ್ಸವ ನಡೆಯಲಿದ್ದು, ಸರ್ವರು ಸಹಕರಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಮನವಿ ಮಾಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಚಾಮರಾಜನಗರ ದಸರಾ ಮಹೋತ್ಸವ ಸಂಬಂಧ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಕಲಾವಿದರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚಾಮರಾಜನಗರ ದಸರಾ ಮಹೋತ್ಸವಕ್ಕೆ ಈ ಹಿಂದೆ ನೀಡಿದಂತೆ ಈ ಬಾರಿಯೂ ಎಲ್ಲರ ಸಹಕಾರ, ಸಲಹೆ ಅಗತ್ಯವಿದೆ. ಸರ್ವರ ಸಹಭಾಗಿತ್ವದಲ್ಲಿ ದಸರಾ ನಡೆಸಲಾಗುತ್ತದೆ. ಹೀಗಾಗಿ ಪ್ರತಿಯೊಬ್ಬರ ಅಭಿಪ್ರಾಯ ಸಲಹೆಗಳು ಮುಖ್ಯವಾಗಿವೆ ಎಲ್ಲರೂ ಸೇರಿ ಅರ್ಥಪೂರ್ಣವಾಗಿ ದಸರಾ ಮಹೋತ್ಸವ ಆಚರಿಸೋಣ ಎಂದು ಅವರು ತಿಳಿಸಿದರು.

ದಸರಾ ಮಹೋತ್ಸವದಲ್ಲಿ 4 ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಇದರೊಂದಿಗೆ ದಸರಾ ಕವಿಗೋಷ್ಠಿ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುತ್ತದೆ ಎಂದರು.

ಸಭೆಯಲ್ಲಿ ಹಾಜರಿದ್ದ ಮುಖಂಡರು, ಕಲಾವಿದರು ಮಾತನಾಡಿ, ವಿದ್ಯುತ್ ದೀಪಾಲಂಕಾರ ರಾಮಸಮುದ್ರದ ಕೊನೆಯವರೆಗೂ ಮಾಡಬೇಕು. ನಗರದ ಎಲ್ಲಾ ಪ್ರಮುಖ ವೃತ್ತಗಳು, ರಸ್ತೆಗಳು ಸೇರಿದಂತೆ ವಿವಿಧೆಡೆ ದೀಪಾಲಂಕಾರ ಆಗಬೇಕು. ಜನನ ಮಂಟಪ ಸೇರಿದಂತೆ ಐತಿಹಾಸಿಕ ಸ್ಥಳಗಳಲ್ಲಿ ಸ್ವಚ್ಛತೆ ದೀಪಾಲಂಕಾರಕ್ಕೆ ವಿಶೇಷ ಗಮನಹರಿಸಬೇಕು. ಜೈ ಭುವನೇಶ್ವರಿ ಪ್ರತಿಮೆಗೆ ದಸರಾ ಉದ್ಘಾಟನೆಯಂದು ಗೌರವ ಸಲ್ಲಿಸಬೇಕು ಎಂದರು.

ಇದೇ ವೇಳೆ ಕೆಲ ಉದ್ಯಮಿಗಳು, ಮುಖಂಡರು ಕಾರ್ಯಕ್ರಮದ ಆಯೋಜನೆಗೆ ಪ್ರಾಯೋಜಕತ್ವ ನೆರವು ನೀಡುವ ಬಗ್ಗೆ ತಿಳಿಸಿದರು. ಎಲ್ಲರ ಅಭಿಪ್ರಾಯ ಸಲಹೆಗಳನ್ನು ಆಲಿಸಿದ ಜಿಲ್ಲಾಧಿಕಾರಿಯವರು ಸರ್ವರ ಸಹಕಾರದೊಂದಿಗೆ ಈ ಬಾರಿಯು ಚಾಮರಾಜನಗರ ದಸರಾ ಮಹೋತ್ಸವವನ್ನು ಯಶಸ್ವಿಯಾಗಿ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ನುಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಮುಖಂಡರಾದ ಶಾ. ಮುರಳಿ, ಚಾ.ರಂ. ಶ್ರೀನಿವಾಸಗೌಡ, ಸುರೇಶ್‌ನಾಯಕ, ಸಿ.ಎಂ. ಕೃಷ್ಣಮೂರ್ತಿ, ಸಿ.ಎಂ. ನರಸಿಂಹಮೂರ್ತಿ, ಸಿ.ಕೆ. ಮಂಜುನಾಥ್, ಸುರೇಶ್ ವಾಜಪೇಯಿ, ಸೋಮಶೇಖರ್ ಬಿಸಲ್ವಾಡಿ ಕೆ.ಎಂ. ನಾಗರಾಜು, ನಿಜಧ್ವನಿ ಗೋವಿಂದರಾಜು, ಚಾ.ಗು.ನಾಗರಾಜು, ಗು.ಪುರುಷೋತ್ತಮ್, ಜಿ.ಬಂಗಾರು, ಸಂಘಸೇನಾ, ಮಹೇಶ್ ಗೌಡ, ನಾರಾಯಣ, ಬಸವಣ್ಣ, ರವಿಚಂದ್ರ ಪ್ರಸಾದ್, ಎಲ್. ಸುರೇಶ್, ವಾಸು, ಜಬಿವುಲ್ಲಾ ಖಾನ್, ಸುರೇಶ್ ಎನ್. ಋಗ್ವೇದಿ, ಅರುಣ್ ಕುಮಾರ್, ಬ್ಯಾಡಮೂಡ್ಲು ಬಸವಣ್ಣ, ಪಣ್ಯದಹುಂಡಿ ರಾಜು, ಸೋಮನಾಯಕ, ಶಿವು, ಶಿವಣ್ಣ ಅವತಾರ್ ಪ್ರವೀಣ್ ಸೇರಿದಂತೆ ಮುಖಂಡರು, ಕಲಾವಿದರು ಉಪಸ್ಥಿತರಿದ್ದರು.

ಸಾರ್ವಜನಿಕರ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಕ್ರಮ

ಚಂದಕವಾಡಿ ಗ್ರಾ.ಪಂ ಸಾರ್ವಜನಿಕರ ಕುಂದು ಕೊರತೆಗಳ ಸಭೆ

ಚಾಮರಾಜನಗರ, ಅ.11– ಚಂದಕವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಸಾರ್ವಜನಿಕರಿಂದ ಬಂದಿರುವ ಅರ್ಜಿಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಪೂರ್ಣಿಮಾ ಹೇಳಿದರು.

ತಾಲೂಕಿನ ಚಂದಕವಾಡಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಡೆದ ಸಾರ್ವಜನಿಕ ಕುಂದು ಕೊರತೆಗಳ ಸಭೆಯನ್ನು ಉದ್ಘಾಟಿಸಿ, ಅರ್ಜಿಗಳನ್ನು ಸ್ವೀಕರಿಸಿ ಮಾತನಾಡಿದರು.

ಇಂದು ನಡೆದ ಸಭೆಯಲ್ಲಿ ಗ್ರಾಮ ಪಂಚಾಯಿತಿ ಯೋಜನೆ ಹಾಗೂ ಕಾರ್ಯಕ್ರಮಗಳ ಅನುಷ್ಠಾನ ಸಾರ್ವಜನಿಕ ಸಮಸ್ಯೆಗಳ ಕುರಿತು ದೂರು–ಮನವಿಗಳನ್ನು ಸ್ವೀಕರಿಸಲಾಗಿದ್ದು ಎಲ್ಲ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಒಟ್ಟು 25 ಅರ್ಜಿಗಳು ಸಲ್ಲಿಕೆಯಾಗಿದ್ದು, ಅದರಲ್ಲಿ ವಿದ್ಯುತ್ ಸಮಸ್ಯೆ, ಜಲಜೀವನ ಮಿಷನ್ ಯೋಜನೆ ಸಮಸ್ಯೆ ಕುರಿತು ಅರ್ಜಿಗಳು ಸಲ್ಲಿಕೆಯಾಗಿವೆ. ಸಭೆಯಲ್ಲಿ ತಾಲೂಕು ಪಂಚಾಯಿತಿ ಅಭಿವೃದ್ಧಿ ಸಹಾಯಕ ನಿರ್ದೇಶಕ ಕೆ ವಿ ಉಮೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷ ನಟರಾಜು, ಉಪಾಧ್ಯಕ್ಷೆ ಆರ್ ರಾಜೇಶ್ವರಿ, ಸದಸ್ಯರುಗಳು ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸಂಘದ ಸದಸ್ಯರುಗಳು ಮತ್ತು ಗ್ರಾಮಸ್ಥರುಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಕಾರಿ ಎಂ.ಸಿದ್ದರಾಜು, ಕಾರ್ಯದರ್ಶಿ ಮಾದಪ್ಪ ಲೆಕ್ಕಸಹಾಯಕ ರಾಜೇಶ್, ಗ್ರಾಮ ಪಂಚಾಯಿತಿ ಎಲ್ಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕುರಿತು ಇಂದು ಪೂರ್ವಭಾವಿ ಸಭೆ

ಚಾಮರಾಜನಗರ, ಅ.11– ಜಿಲ್ಲಾಡಳಿತದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಸಂಬಂಧ ಚರ್ಚಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಗುರುವಾರ ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಸಿದ್ಧತಾ ಸಭೆಯನ್ನು ಏರ್ಪಡಿಸಲಾಗಿದೆ.

ಸಭೆಗೆ ಪರಿಶಿಷ್ಟ ವರ್ಗದ, ಇತರೆ ಜನಾಂಗದ ಮುಖಂಡರು, ಎಲ್ಲಾ ಸಂಘಸಂಸ್ಥೆಗಳ ಪದಾಧಿಕಾರಿಗಳು, ಮುಖ್ಯಸ್ಥರು, ಜನಪ್ರತಿನಿಧಿಗಳು, ಸಾರ್ವಜನಿಕರು ಭಾಗವಹಿಸಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಸಂಬಂಧ ಸಲಹೆ, ಸೂಚನೆ ನೀಡುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಾದ ಮಂಜುಳ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

'ಕಾವೇರಿ'ಗಾಗಿ ಕರ್ನಾಟಕ ಸೇನಾಪಡೆಯಿಂದ ಖಾಲಿ ಸಿಡಿ ಹಿಡಿದು ಪ್ರತಿಭಟನೆ



ಚಾಮರಾಜನಗರ, ಅ.11– ರಾಜ್ಯ ಸರ್ಕಾರವು ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಖಾಲಿ ಸಿಡಿ ಕ್ಯಾಸೆಟ್ ಹಿಡಿದು ಪ್ರತಿಭಟನೆ ನಡೆಸಲಾಯಿತು.


ನಗರದ ಜಿಲ್ಲಾಡಳಿತ ಭವನದ ಮುಖ್ಯ ದ್ವಾರದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಪ್ರತಿಭಟನಾನಿರತರು ಖಾಲಿ ಸಿಡಿ ಕ್ಯಾಸೆಟ್ ಹಿಡಿದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ಖಾಲಿ ಸಿಡಿ ಕ್ಯಾಸೆಟ್ ಎಂದು ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಮೂಲಕ ಇದೊಂದು ಖಾಲಿ ಕ್ಯಾಸೆಟ್ ಸರ್ಕಾರ, ತಮಿಳುನಾಡು ಸರ್ಕಾರ, ಕೇಂದ್ರ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ಒಂದು ಖಾಲಿ ಕ್ಯಾಸೆಟ್ ಆಗಿದೆ. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಹರಿಸಬಾರದು, ನೀರು ಹರಿಸಿ ಮತ್ತೇ ಮತ್ತೇ ರೈತರನ್ನು ಸಂಕಷ್ಟಕ್ಕೆ ದೂಡಬಾರದು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ವಿರುದ್ಧ ಗಾಯದ ಮೇಲೆ ಬರೆ ಎಳೆಯುತ್ತಿದ್ದು ವಾಸ್ತವ ಸ್ಥಿತಿ ಅರಿತು ಸಂಕಷ್ಟ ಸೂತ್ರ ಕೊಡಲಿ ಎಂದು ಒತ್ತಾಯಿಸಿದರು.

ಇದೇ ರೀತಿ ರಾಜ್ಯಕ್ಕೆ ಅನ್ಯಾಯ ಮುಂದುವರೆದರೇ ತಮಿಳುನಾಡಿನ ಉತ್ಪನ್ನಗಳನ್ನು ಬಹಿಷ್ಕಾರ ಮಾಡುತ್ತೇವೆ, ತಮಿಳುನಾಡು ಗಡಿಯನ್ನು ಬಂದ್ ಮಾಡುತ್ತೇವೆ ಎಂದು ಶ್ರೀನಿವಾಸಗೌಡ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದ ರಾಜು, ಸಿ.ಎಂ.ಕೃಷ್ಣ ಮೂರ್ತಿ, ಮಹೇಶ್ ಗೌಡ, ರವಿಚಂದ್ರಪ್ರಸಾದ್ ಕಹಳೆ, ಲಿಂಗರಾಜು ಇತರರು ಭಾಗವಹಿಸಿದ್ದರು.

ಮಹದೇಶ್ವರ ಬೆಟ್ಟದಲ್ಲಿ ಇಂದಿನಿಂದ ಮಹಾಲಯ ಜಾತ್ರೆ ಆರಂಭ

ಚಾಮರಾಜನಗರ, ಅ.11– ಹನೂರು ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೈ ಮಹದೇಶ್ವರ ಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ, ಕಾರ್ತಿಕ ಸೋಮವಾರದಂದು ಜಾತ್ರಾ ಮಹೋತ್ಸವಗಳು, ವಿಶೇಷ ಪೂಜೆ, ಉತ್ಸವಾದಿಗಳು ನಡೆಯಲಿವೆ.



ಅ.12ರಂದು ಮಹಾಲಯ ಜಾತ್ರೆ ಪ್ರಾರಂಭವಾಗಲಿದೆ. 13ರಂದು ಚತುರ್ದಶಿ ಶ್ರೀ ಸ್ವಾಮಿಗೆ ಎಣ್ಣೆಮಜ್ಜನ ವಿಶೇಷ ಸೇವೆ ಉತ್ಸವಾದಿಗಳು ಹಾಗೂ 14ರಂದು ಮಹಾಲಯ ಅಮಾವಾಸ್ಯೆ ವಿಶೇಷ ಉತ್ಸವಾದಿಗಳು ಜರುಗಲಿವೆ. ಅ.15ರಂದು ದಸರಾ ಜಾತ್ರಾ ಮಹೋತ್ಸವದ ಶರನ್ನವರಾತ್ರಿ ಉಯ್ಯಾಲೋತ್ಸವ ಪ್ರಾರಂಭವಾಗಲಿದೆ. 23ರಂದು ಮಹಾನವಮಿ, ಆಯುಧಪೂಜೆ ಹಾಗೂ 24ರಂದು ವಿಜಯದಶಮಿ, ಕುದುರೆ ವಾಹನೋತ್ಸವ ನಡೆಯಲಿದೆ.

ನ.10ರಂದು ದೀಪಾವಳಿ ಪ್ರಯುಕ್ತ ವಿಶೇಷ ಕಾರ್ಯಕ್ರಮ ಪ್ರಾರಂಭವಾಗಲಿದೆ. 11 ರಂದು ಶ್ರೀ ಸ್ವಾಮಿಗೆ ಎಣ್ಣೆಮಜ್ಜನ ಸೇವೆ ಮತ್ತು ಉತ್ಸವಾದಿಗಳು, 12ರಂದು ನರಕ ಚತುರ್ದಶಿ ವಿಶೇಷ ಉತ್ಸವಾದಿಗಳು, 13ರಂದು ಅಮಾವಾಸ್ಯೆ, ಹಾಲರುವೆ ಉತ್ಸವ ಹಾಗೂ 14ರಂದು ದೀಪಾವಳಿ ಮಹಾರಥೋತ್ಸವವು ಬೆಳಿಗ್ಗೆ 8.50 ರಿಂದ 9.10 ಗಂಟೆಯವರೆಗೆ ಜರುಗಲಿದೆ.

ನ.20ರಂದು ಮೊದಲನೇ ಕಾರ್ತಿಕ ಸೋಮವಾರ, 27ರಂದು ಎರಡನೇ ಕಾರ್ತಿಕ ಸೋಮವಾರ, ಡಿ.4ರಂದು ಮೂರನೇ ಕಾರ್ತಿಕ ಸೋಮವಾರದಂದು ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. 11ರಂದು ನಾಲ್ಕನೇ ಕಾರ್ತಿಕ ಸೋಮವಾರದಂದು ಶ್ರೀ ಸ್ವಾಮಿಗೆ ಎಣ್ಣೆಮಜ್ಜನ ಸೇವೆ, ರಾತ್ರಿ ಶ್ರೀ ಮಹದೇಶ್ವರ ಜ್ಯೋತಿ ದರ್ಶನ ಹಾಗೂ 12ರಂದು ಕಾರ್ತಿಕ ಅಮಾವಾಸ್ಯೆ ವಿಶೇಷ ಸೇವೆ ಉತ್ಸವಗಳು ನಡೆಯಲಿವೆ ಎಂದು ದೇವಾಲಯ ಪ್ರಕಟಣೆ ತಿಳಿಸಿದೆ.

ಜಯದೇವದಲ್ಲಿ ನಿತ್ಯವೂ 600 ಮಂದಿವರೆಗೂ ಹೃದಯ ತಪಾಸಣೆ



ಮೈಸೂರು, ಅ.11– ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ದಿನನಿತ್ಯ 500 ರಿಂದ 600 ಮಂದಿ ಹೃದಯ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆಯ ಮುಖ್ಯಸ್ಥ ಡಾ. ಕೆ.ಎಸ್. ಸದಾನಂದ ಹೇಳಿದರು.

ಮೈಸೂರಿನ ಹೆಬ್ಬಾಳ್‌ನಲ್ಲಿರುವ ದಿ ರಿವೈವ್ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ವಿಶ್ವ ಹೃದಯ ದಿನಾಚರಣೆ ಹಾಗೂ ಹಾರ್ಟ್ ಫೆಲ್ಯೂರ್ ಕ್ಲಿನಿಕ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜಯದೇವದಲ್ಲಿ ಪ್ರತಿನಿತ್ಯ ಅಂದಾಜು 100 ಮಂದಿ ತುರ್ತು ಚಿಕಿತ್ಸೆಗೆ ಹಾಗೂ 50ಕ್ಕೂ ಹೆಚ್ಚು ಮಂದಿ ಹೃದಯಾಘಾತವಾಗಿ ಆಸ್ಪತ್ರೆಗೆ ಬರುತ್ತಿದ್ದಾರೆ. ದಿನನಿತ್ಯ 30ರಿಂದ 40 ಮಂದಿಗೆ ಆಂಜಿಯೋಪ್ಲಾಸ್ಟಿ ಹಾಗೂ 4 ರಿಂದ 5 ಮಂದಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

ಮೊದಲ ಹಂತದ ಹೃದಯ ಚಿಕಿತ್ಸೆ ನಮ್ಮಲ್ಲಿ ಲಭ್ಯವಿದೆ. ಕೆಲವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದಂತಹ ಸನ್ನಿವೇಶ ಸೃಷ್ಟಿಯಾದಾಗ ಅಂತಹವರಿಗೆ ಹಾರ್ಟ್ ಫೆಲ್ಯೂರ್ ಕ್ಲಿನಿಕ್ ಉಪಯುಕ್ತವಾಗಿದೆ ಎಂದರು. ದಿ ರಿವೈವ್ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ವಿ.ಮೋಹನ್‌ಕುಮಾರ್ ಮಾತನಾಡಿ, ಶಸ್ತ್ರಚಿಕಿತ್ಸೆ ಹಾಗೂ ಔಷಧೋಪಚಾರದಿಂದ ಚಿಕಿತ್ಸೆ ಮುಂದುವರೆಸಲು ಸಾಧ್ಯವಾಗದಂತಹ ಕೊನೆ ಹಂತದ ಹೃದ್ರೋಗಿಗಳು ಇಸಿಪಿ, ಇಎಸ್‌ಎಂಆರ್ ಚಿಕಿತ್ಸೆ ಬಳಸಿಕೊಳ್ಳಬಹುದು ಎಂದರು.

ಕಾರ್ಯಕ್ರಮವನ್ನು ಶಾಸಕ ಶ್ರೀವತ್ಸ ಉದ್ಘಾಟಿಸಿದರು. ದಿ ರಿವೈವ್ ಆಸ್ಪತ್ರೆ ಮನೋವೈದ್ಯ ಡಾ. ಕೆ.ಆರ್.ಕೃಷ್ಣ, ನಿರ್ದೇಶಕ ಪವನ್‌ನಾಗ್ ಇತರರಿದ್ದರು.

ವಿಶ್ವ ಆಭರಣ ಒಕ್ಕೂಟದಿಂದ ಜೋಯ್ ಅಲುಕ್ಕಾಸ್‌ಗೆ ಗೌರವ



ಮೈಸೂರು, ಅ. 11–ಜೋಯ್ ಅಲುಕ್ಕಾಸ್ ಅವರು, ಜೋಯಲುಕ್ಕಾಸ್ ಗುಂಪಿನ ಛೇರ್ಮನ್ ಹಾಗೂ ಆಡಳಿತ ನಿರ್ದೇಶಕರಾಗಿದ್ದು, ಅವರು ಭಾರತ ಹಾಗೂ ಜಾಗತಿಕವಾಗಿ ಆಭರಣ ಕ್ಷೇತ್ರಕ್ಕೆ ನೀಡಿದ ಅಪ್ರತಿಮ ಕೊಡುಗೆಗಾಗಿ ವಿಶ್ವ ಆಭರಣ ಒಕ್ಕೂಟದಿಂದ ಅವರಿಗೆ ವಿಶೇಷ ಪ್ರಶಸ್ತಿ ನೀಡಲಾಗಿದೆ. ಜೈಪುರದಲ್ಲಿ ನಡೆದ 2023ರ ವರ್ಲ್ಡ್ ಜ್ಯೂವೆಲ್ಲರಿ ಕಾನ್ಫೆಡರೇಷನ್ ಸಿಐಬಿಜೆಓ ಕಾಂಗ್ರೆಸ್‌ನಲ್ಲಿ ನಡೆದ ಸಮಾರಂಭದಲ್ಲಿ ಅಂತರರಾಷ್ಟ್ರೀಯ ಆಭರಣ ವಲಯದ ಪ್ರಮುಖರು ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ಜೋಯ್ ಅಲುಕ್ಕಾಸ್ ಪರವಾಗಿ ಜಾನ್ ಪಾಲ್ ಅಲುಕ್ಕಾಸ್ ಗೌರವ ಪ್ರಶಸ್ತಿ ಸ್ವೀಕರಿಸಿದರು.

ವಿಶ್ವ ಆಭರಣ ಒಕ್ಕೂಟವು ಅಲುಕ್ಕಾಸ್ ಅವರ ನೈತಿಕ ಕಾರ್ಯಗಳಿಗಾಗಿ ಬದ್ಧತೆ ಮತ್ತು ಆಭರಣ ಪೂರೈಕೆ ಸರಪಳಿಯಲ್ಲಿನ ಸುರಕ್ಷತೆಗಾಗಿ ನೀಡಿದ ಗಣನೀಯ ಕೊಡುಗೆಗಾಗಿ ಅವರನ್ನು ಪ್ರಶಸ್ತಿಗೆ ಪರಿಗಣಿಸಿತ್ತು. ಆಭರಣಗಳ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಉತ್ತೇಜಿಸುವುದು ಮತ್ತು ಸಾಂಪ್ರದಾಯಿಕ ಕರಕುಶಲತೆಯನ್ನು ಸಂರಕ್ಷಿಸುವಲ್ಲಿ ಅವರ ಸಮರ್ಪಣಾ ಭಾವವು ಆಭರಣ ವಲಯವನ್ನು ಒಂದು ಹೊಸ ಎತ್ತರಕ್ಕೆ ಕೊಂಡೊಯ್ಯಲು ಪ್ರಮುಖ ಪಾತ್ರ ವಹಿಸಿದೆ. ಈ ಸಾಧನೆಯ ಬಗ್ಗೆ ಮಾತನಾಡಿದ ಜೋಯ್ ಅಲುಕ್ಕಾಸ್ ಅವರು, ವಿಶ್ವ ಆಭರಣ ಒಕ್ಕೂಟದಿಂದ ಈ ಪ್ರಶಸ್ತಿ ಸ್ವೀಕರಿಸಲು ತುಂಬಾ ಸಂತೋಷವಾಗಿದೆ. ಇದು ಅವಿರತ ಶ್ರಮ ಹಾಗೂ ಸಮರ್ಪಣೆಗಾಗಿ ಜೋಯ್ ಅಲುಕ್ಕಾಸ್ ಸಂಪೂರ್ಣ ತಂಡ ಹಾಗೂ ಅಚಲ ಬದ್ಧತೆಯಿಂದಿರುವ ನಮ್ಮ ಗ್ರಾಹಕರಿಗೆ ಸಂದ ಗೌರವವಾಗಿದೆ. ಈ ಮನ್ನಣೆಯನ್ನು ನಾನು ನನ್ನ ಸಂಘಟನೆಯ ಪ್ರತಿಯೊಬ್ಬ ಸದಸ್ಯರೊಂದಿಗೆ ಹಂಚಿಕೊಳ್ಳಲು ಸಂತೋಷ ಪಡುತ್ತೇನೆ ಎಂದರು.

ಅ.15ರಂದು ಅಮೃತ ವಿಶ್ವವಿದ್ಯಾಪೀಠಂನಲ್ಲಿ 13ನೇ ಪದವಿ ಪ್ರದಾನ ಸಮಾರಂಭ

ಮೈಸೂರು, ಅ. 11– ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ ಕ್ಯಾಂಪಸ್‌ನ "13ನೇ ಪದವಿ ಪ್ರದಾನ" ಸಮಾರಂಭವು ಅ. 15ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಕಾರ್ಯಕ್ರಮವನ್ನು ಮೈಸೂರಿನ ಬೋಗಾದಿಯ ಎರಡನೇ ಹಂತದಲ್ಲಿರುವ ಅಮೃತ ವಿಶ್ವವಿದ್ಯಾಪೀಠಂನ ಆವರಣದಲ್ಲಿ ಆಯೋಜಿಸಲಾಗಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ನಿವೃತ್ತ ಅಧ್ಯಕ್ಷರಾದ ಪದ್ಮಶ್ರೀ ಎ.ಎಸ್.ಕಿರಣ್ ಕುಮಾರ್ ಅವರು ಪದವಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ನೂತನ ಯುವ ಪದವೀಧರರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಇಸ್ರೋದ ಯು.ಆರ್.ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ಎಂ.ಶಂಕರನ್ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಪೂರ್ಣಾಮೃತಾನಂದಪುರಿ; ಅಮೃತ ವಿಶ್ವವಿದ್ಯಾಪೀಠಂನ ಕುಲಸಚಿವರಾದ ಡಾ.ಕೆ.ಶಂಕರನ್, ಪರೀಕ್ಷಾ ನಿಯಂತ್ರಕರಾದ ಡಾ. ಆರ್.ದಂಡಪಾಣಿ ಹಾಗೂ ಮತ್ತಿತರರು ಪದವಿ ಪ್ರದಾನ ಸಮಾರಂಭದಲ್ಲಿ ಉಪಸ್ಥಿತರಿರಲಿದ್ದಾರೆ.

ಪಿಹೆಚ್‌ಡಿ, ಪದವಿ ಹಾಗೂ ಸ್ನಾತಕೋತ್ತರ ಪದವಿಯ 502 ವಿದ್ಯಾರ್ಥಿಗಳು ತಮ್ಮ ಪದವಿಯನ್ನು ಸ್ವೀಕರಿಸಲಿದ್ದಾರೆ. ಒಟ್ಟು 62 ವಿದ್ಯಾರ್ಥಿಗಳು ರ್‍ಯಾಂಕ್ ಹಾಗೂ ಪದಕಗಳನ್ನು ಸ್ವೀಕರಿಸಲಿದ್ದಾರೆ.

ಸಂಘರ್ಷದ ಹೇಳಿಕೆ ಮೂಲಕ ಸಂಸದ ಪ್ರತಾಪ್ ಸಿಂಹ ಶಾಂತಿ ಕದಡುವ ಯತ್ನ ಆರೋಪ



ಮೈಸೂರು, ಅ.11(ಜಿಎ)–ಸಾಂಸ್ಕೃತಿಕ ನಗರಿ ಮೈಸೂರು ಶಾಂತಿ, ಸುವ್ಯವಸ್ಥೆಗೆ ಹೆಸರಾದ ನಗರವಾಗಿದ್ದು, ಮಹಿಷಾ ದಸರಾ ತಡೆಗೆ ಸಂಘರ್ಷಕ್ಕೂ ಸಿದ್ದ ಎನ್ನುವ ಪ್ರಚೋದನಾಕಾರಿ ಹೇಳಿಕೆ ಮೂಲಕ ಸಂಸದ ಪ್ರತಾಪ ಸಿಂಹ ಅವರು ಮೈಸೂರು ನಗರದ ಶಾಂತಿ ಕದಡಲು ಯತ್ನಿಸುತ್ತಿದ್ದಾರೆಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ದೂರಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಶಾಂತಿ ಸುವ್ಯವಸ್ಥೆ ಹದಗೆಡಿಸಲು ಪಿತೂರಿ ನಡೆಸುತ್ತಿದ್ದು, ಧರ್ಮ–ಧರ್ಮಗಳ ನಡುವೆ ಹಾಗೂ ಶೋಷಿತ ಸಮುದಾಯಗಳ ವಿರುದ್ಧ ಇದೊಂದು ರೀತಿ ಪ್ರಚೋದನೆಯಾಗಿದೆ. ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಅವರವರ ಧಾರ್ಮಿಕ ಭಾವನೆ, ಆಚರಣೆ, ಧಾರ್ಮಿಕ ಸ್ವಾತಂತ್ರ್ಯ ಇದೆ. ಈ ಧಾರ್ಮಿಕ ಸ್ವಾತಂತ್ರ್ಯ ಕಸಿದುಕೊಳ್ಳುವ ಪ್ರಯತ್ನ ಪ್ರತಾಪ್ ಸಿಂಹದವರದ್ದಾಗಿದೆ. ಈ ನಡೆ ಸಂವಿಧಾನ ವಿರೋಧಿಯಾಗಿದೆ. ಪ್ರತಾಪ ಸಿಂಹ ಅವರನ್ನು ಈ ಕೂಡಲೇ ಬಂಧಿಸ ಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿ ಯಲ್ಲಿ ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾರ್ಯದರ್ಶಿ ಎಸ್.ಎ.ರಹೀಮ್, ಕುರುಬಾರಹಳ್ಳಿ ಪ್ರಕಾಶ್, ಕೆಪಿಸಿಸಿ ಕಾರ್ಯದರ್ಶಿ ಪಿ.ರಾಜು, ಅಂಬೇಡ್ಕರ್ ಸಂಘದ ಅಧ್ಯಕ್ಷ ರಂಗಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ರೋಹಿತ್ ಭರ್ಜರಿ ಶತಕ, ಭಾರತಕ್ಕೆ ಸುಲಭ ಗೆಲುವು

ಕ್ರಿಸ್‌ಗೇಲ್ ದಾಖಲೆ ಮುರಿದ ರೋಹಿತ್ ಶರ್ಮ

ಸಚಿನ್ ದಾಖಲೆ ಮುರಿದ ರೋಹಿತ್ ಶರ್ಮಾ

ನವದೆಹಲಿ, ಅ. 11– ಅಫ್ಘಾನಿಸ್ತಾನ ಎದುರು ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಹೆಸರಿನಲ್ಲಿದ್ದ ದಾಖಲೆ ಮುರಿದಿದ್ದಾರೆ. ಬುಧವಾರ ನಡೆದ ಅಫ್ಘಾನಿಸ್ತಾನ ಎದುರಿನ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಅಬ್ಬರದ ಬ್ಯಾಟಿಂಗ್ ನಡೆಸಿದ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ವಿಶ್ವಕಪ್‌ನಲ್ಲಿ 7 ಶತಕಗಳನ್ನು ಬಾರಿಸುವ ಮೂಲಕ ಸಚಿನ್ ತೆಂಡೂಲ್ಕರ್ ದಾಖಲೆ ಮುರಿದರು. 5 ವಿಶ್ವಕಪ್ ಟೂರ್ನಿಗಳಲ್ಲಿ ಸಚಿನ್ 6 ಶತಕಗಳನ್ನು ಸಿಡಿಸಿದ್ದರು. ರೋಹಿತ್ ಶರ್ಮಾ 3 ವಿಶ್ವಕಪ್‌ಗಳಲ್ಲೇ ಈ ದಾಖಲೆ ಮುರಿದಿದ್ದಾರೆ.



ನವದೆಹಲಿ, ಅ. 11– ನಾಯಕ ರೋಹಿತ್ ಶರ್ಮ ಅವರ ಭರ್ಜರಿ ಶತಕ ಮತ್ತು ಬೂಮ್ರಾ ಅವರ ಉತ್ತಮ ಬೌಲಿಂಗ್‌ನಿಂದ ಐಸಿಸಿ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡದ ವಿರುದ್ಧ ಆತಿಥೇಯ ಭಾರತ 8 ವಿಕೆಟ್‌ಗಳ ಜಯ ದಾಖಲಿಸುವ ಮೂಲಕ ತನ್ನ ಗೆಲುವಿನ ನಾಗಾಲೋಟ ಮುಂದುವರೆಸಿದೆ. ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 272 ರನ್ ಕಲೆಹಾಕಿತು. ಈ ಗುರಿ ಬೆನ್ನತ್ತಿದ ಭಾರತ 35 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ಸುಲಭವಾಗಿ ಗುರಿ ಮುಟ್ಟಿತು.

ಇನಿಂಗ್ಸ್ ಆರಂಭಿಸಿದ ಅಫ್ಘಾನಿಸ್ತಾನ ಪರ ಆರಂಭಿಕ ಆಟಗಾರರಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರಲಿಲ್ಲ. ಆದರೆ, ಮಧ್ಯಮ ಕ್ರಮಾಂಕದ ಹಷ್ಮತ್‌ಉಲ್ಲಾ ಶಾಹಿದಿ ಹಾಗೂ ಅಜ್ಮತ್‌ಉಲ್ಲಾ ಒಮರ್‌ಝೈ ಅವರು ತಮ್ಮ ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಶಾಹಿದಿ 88 ಎಸೆತಗಳಲ್ಲಿ 80 ರನ್ ಗಳಿಸಿದರೆ, ಒಮರ್‌ಝೈ 69 ಎಸೆತಗಳಲ್ಲಿ 62 ರನ್ ಬಾರಿಸಿದರು. ಹೀಗಾಗಿ ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ಸಾಧ್ಯವಾಯಿತು. ಜಸ್‌ಪ್ರೀತ್ ಬೂಮ್ರಾ 39 ರನ್ ನೀಡಿ 4 ವಿಕೆಟ್ ಪಡೆಯುವ ಮೂಲಕ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದರು. ಹಾರ್ದಿಕ್ ಪಾಂಡ್ಯ 2 ವಿಕೆಟ್ ಕಿತ್ತರು. ಶಾರ್ದೂಲ್ ಠಾಕೂರ್ ಮತ್ತು ಕುಲದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.

ಅಫ್ಘಾನಿಸ್ತಾನದ ಮೊತ್ತವನ್ನು ಬೆನ್ನಟ್ಟಿದ ಭಾರತ 35 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 273 ರನ್ ಮಾಡಿ ಭರ್ಜರಿ ಜಯ ಗಳಿಸಿತು. ನಾಯಕ ರೋಹಿತ್ ಶರ್ಮಾ ಆಕರ್ಷಕ ಶತಕ ಸಿಡಿಸಿದರು. ರೋಹಿತ್ ಶರ್ಮಾ 131 ರನ್ ಗಳಿಸಿ ಔಟಾದರು. ಇಶಾನ್ ಕಿಸಾನ್ 47 ರನ್ ಗಳಿಸಿ ನಿರ್ಗಮಿಸಿದರು. ರೋಹಿತ್ ಶರ್ಮ ಮತ್ತು ಇಶಾನ್ ಕಿಸಾನ್ ಜೋಡಿ 12 ಓವರುಗಳಲ್ಲಿ 100 ರನ್ ಕಲೆಹಾಕಿ ಗೆಲುವಿನ ಹಾದಿಯನ್ನು ಸುಲಭಗೊಳಿಸಿದರು. ವಿರಾಟ್ ಕೊಹ್ಲಿ 55, ಅಯ್ಯರ್ 25 ರನ್ ಗಳಿಸಿ ಅಜೇಯರಾಗಿ ಉಳಿದರು. ಅಫ್ಘಾನಿಸ್ತಾನ ಪರ ರಶೀದ್ ಖಾನ್ ಎರಡು ವಿಕೆಟ್ ಪಡೆದರು.

ಕ್ರಿಸ್ ಗೇಲ್ ದಾಖಲೆ ಮುರಿದ ರೋಹಿತ್ ಶರ್ಮಾ: ಅಫ್ಘಾನಿಸ್ತಾನ ಎದುರಿನ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಅಬ್ಬರದ ಬ್ಯಾಟಿಂಗ್ ನಡೆಸಿದ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ಸಿಡಿಸಿದ ಆಟಗಾರ ಎಂಬ ಕೀರ್ತಿಗೆ ಭಾಜನರಾದರು.


ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹೆಚ್ಚು ಸಿಕ್ಸರ್ ಸಿಡಿಸಿದ ಆಟಗಾರ ಎಂಬ ದಾಖಲೆ ಈವರೆಗೆ ವೆಸ್ಟ್ ಇಂಡೀಸ್‌ನ ಸ್ಫೋಟಕ ಆಟಗಾರ ಕ್ರಿಸ್ ಗೇಲ್ ಅವರ ಹೆಸರಿನಲ್ಲಿತ್ತು. ಇದೀಗ ಆ ದಾಖಲೆಯನ್ನು ರೋಹಿತ್ ಕಸಿದುಕೊಂಡಿದ್ದಾರೆ. ಗೇಲ್ ಖಾತೆಯಲ್ಲಿ 553 ಸಿಕ್ಸರ್‌ಗಳಿದ್ದರೆ, ರೋಹಿತ್ ಬರೋಬ್ಬರಿ 555 ಸಿಕ್ಸರ್ ಸಿಡಿಸಿದ್ದಾರೆ. ನಂತರದ ಸ್ಥಾನದಲ್ಲಿ ಕ್ರಮವಾಗಿ ಪಾಕಿಸ್ತಾನ ಶಾಹಿದ್ ಅಫ್ರಿದಿ (476), ನ್ಯೂಜಿಲೆಂಡ್‌ನ ಬ್ರೆಂಡನ್ ಮೆಕಲಂ (398) ಮತ್ತು ಮಾರ್ಟಿನ್ ಗಪ್ಟಿಲ್ (383) ಇದ್ದಾರೆ.

ವಿಶ್ವಕಪ್‌ನಲ್ಲಿ ಸಾವಿರ ರನ್: ಅಫ್ಘಾನಿಸ್ತಾನ ಬೌಲರ್‌ಗಳನ್ನು ಲೀಲಾಜಾಲವಾಗಿ ಎದುರಿಸಿದ ರೋಹಿತ್, ಏಕದಿನ ವಿಶ್ವಕಪ್ ಪಂದ್ಯಗಳಲ್ಲಿ 1 ಸಾವಿರ ರನ್ ಕಲೆಹಾಕಿದ ಆಟಗಾರರ ಸಾಲಿಗೆ ಸೇರಿದರು. ಆ ಮೂಲಕ ಈ ಸಾಧನೆ ಮಾಡಿದ ವಿಶ್ವದ 23ನೇ ಹಾಗೂ ಭಾರತದ 4ನೇ ಆಟಗಾರ ಎನಿಸಿದರು. ಈವರೆಗೆ 19 ಪಂದ್ಯಗಳಲ್ಲಿ ಬ್ಯಾಟಿಂಗ್ ಮಾಡಿರುವ ರೋಹಿತ್ 6 ಶತಕ ಮತ್ತು 4 ಅರ್ಧಶತಕ ಸೇರಿ 1055 ರನ್ ಗಳಿಸಿದ್ದಾರೆ.

ಇಸ್ರೇಲ್‌ನಲ್ಲಿ ಹಮಾಸ್ ಉಗ್ರರಿಂದ ನನ್ನ ಸಹೋದರಿ ಕುಟುಂಬದ ಭೀಕರ ಹತ್ಯೆ: ನಟಿ ಮಧುರಾ ನಾಯ್ಕ್

ಮುಂಬಯಿ, ಅ.11– ಇಸ್ರೇಲ್–ಪ್ಯಾಲೆಸ್ತೀನ್ ಯುದ್ಧದಿಂದ ಅಪಾರ ಹಾನಿ ಆಗುವುದರ ಜೊತೆಗೆ ಸಾವಿರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಒಂದು ಕಡೆ ಗುಂಡಿನ ಸದ್ದು, ಇನ್ನೊಂದೆಡೆ ದುಃಖದ ಕೂಗು. ಇಸ್ರೇಲ್–ಹಮಾಸ್ ನಡುವೆ ನಡೆಯುತ್ತಿರುವ ಕದನದಲ್ಲಿ ನನ್ನ ಸಹೋದರಿ ಹಾಗೂ ಆಕೆಯ ಪತಿಯನ್ನು ಪ್ಯಾಲೆಸ್ತೀನ್ ಉಗ್ರರು ಹತ್ಯೆ ಮಾಡಿದ್ದಾರೆ ಎಂದು ಬಾಲಿವುಡ್ ನಟಿ ಹಾಗೂ ರೂಪದರ್ಶಿ ಮಧುರಾ ನಾಯ್ಕ್ ಹೇಳಿದ್ದಾರೆ.

ಸಹೋದರಿ ಒಡಾಯ, ಆಕೆಯ ಪತಿಯನ್ನು ಅವರ ಮಕ್ಕಳ ಮುಂದೆಯೇ ಹತ್ಯೆ ಮಾಡಲಾಗಿದೆ ಎಂದು ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇಸ್ರೇಲ್‌ನಲ್ಲಿ ಅವರ ಮಕ್ಕಳ ಕಣ್ಣುಗಳ ಮುಂದೆಯೇ ಇಬ್ಬರನ್ನು ಕೊಲ್ಲಲಾಯಿತು ಎಂದು ಅವರು ಹೇಳಿದ್ದಾರೆ. ಇಸ್ರೇಲ್‌ನಲ್ಲಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರನ್ನು ಗುರಿಯಾಗಿಸಿಕೊಂಡು ಹತ್ಯೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ನನ್ನ ಸಹೋದರಿ ಮತ್ತು ಅವಳ ಪತಿಯನ್ನು ಪ್ಯಾಲೆಸ್ತೀನ್ ಉಗ್ರರು ಮಕ್ಕಳ ಮುಂದೆ ಬರ್ಬರವಾಗಿ ಹತ್ಯೆ ಮಾಡಿದ್ದಾರೆ ಎಂದು ಇನ್ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿದ್ದಾರೆ.



ನಾನು ಯಾವುದೇ ರೀತಿಯ ಹಿಂಸಾಚಾರವನ್ನು ಬೆಂಬಲಿಸುವುದಿಲ್ಲ ಮತ್ತು ಇಸ್ರೇಲ್‌ನಲ್ಲಿ ರುವ ಜನರಿಗಾಗಿ ಮತ್ತು ಬಲಿಪಶುಗಳ ಕುಟುಂಬಗಳಿಗಾಗಿ ಪ್ರಾರ್ಥಿಸಬೇಕೆಂದು ಅವರು ಒತ್ತಾಯಿಸಿದ್ದಾರೆ. 'ಕಸೌತಿ ಜಿಂದಗಿ ಕೇ', 'ಉತ್ತರಾನ್', 'ಪ್ಯಾರ್ ಕಿ ಯೇ ಏಕ್ ಕಹಾನಿ', 'ಇಸ್ ಪ್ಯಾರ್ ಕೋ ಕ್ಯಾ ನಾಮ್ ದೂನ್' ಮುಂತಾದ ಸೀರಿಯಲ್‌ಗಳಲ್ಲಿ ಮಧುರಾ ನಾಯ್ಕ್ ನಟಿಸಿದ್ದಾರೆ.

ಮಹಿಷಾ ದಸರಾ ಬಿಡಿ; ದಸರೆಯಲ್ಲಿ ಸಾರ್ವಜನಿಕರ ಸುಲಿಗೆ ತಪ್ಪಿಸಿ

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಆಗ್ರಹ



ಮೈಸೂರು, ಅ.11(ಜಿಎ)–ಕೇವಲ ಮಹಿಷಾ ದಸರೆಯನ್ನು ಮುಂದಿಟ್ಟುಕೊಂಡು ರಾಜಕೀಯ ಹೇಳಿಕೆ ನೀಡುತ್ತಿರುವ ಜನ ಪ್ರತಿನಿಧಿಗಳು ದಸರೆಯಲ್ಲಿ ನಡೆಯುವ ಸುಲಿಗೆ ಬಗ್ಗೆಯೂ ಮಾತನಾಡಲಿ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.13ರಂದು ಚಾಮುಂಡಿಬೆಟ್ಟದಲ್ಲಿ ನಡೆಸಲು ಹೊರಟಿರುವ ಮಹಿಷಾ ದಸರಾ ಪರ ಹಾಗೂ ವಿರೋಧ ಚರ್ಚೆಗಳು ನಡೆಯುತ್ತಿವೆ. ಆದರೆ, ವಾಸ್ತವದಲ್ಲಿ ಶಾಂತಿಯುತ ಜೀವನ ಕಟ್ಟಿಕೊಂಡಿರುವ ಸಾಂಸ್ಕೃತಿಕ ನಗರದ ಮೈಸೂರು ಜನತೆಗೆ ಈ ಮೂಲಕ ಭಯದ ವಾತಾವಾರಣ ಸೃಷ್ಟಿಸುತ್ತಿದ್ದಾರೆ. ದಸರಾ ಮಹೋತ್ಸವದ ಹೆಸರಿನಲ್ಲಿ ಜನರ ತೆರಿಗೆ ಹಣವನ್ನು ದುಂದು ವೆಚ್ಚ ಮಾಡಲಾಗುತ್ತಿದೆ. ಟೆಂಡರ್ ಹೆಸರಿನಲ್ಲಿ, ಪ್ರವಾಸಿಗರಿಂದ ನಡೆಯುತ್ತಿರುವ ಸುಲಿಗೆ, ಚಾಮುಂಡಿ ಬೆಟ್ಟ ಮತ್ತು ತಪ್ಪಲಿನ ಪಾರ್ಕಿಂಗ್ ಮತ್ತು ಫಲಪುಷ್ಪ ಪ್ರದರ್ಶನದ ಪ್ರವೇಶ ಶುಲ್ಕ ಹೆಸರಿನಲ್ಲಿ ಲೂಟಿ ಮಾಡುತ್ತಿರುವ ಬಗ್ಗೆ ಮಾತನಾಡಿ ಎಂದು ಒತ್ತಾಯಿಸಿದರು.

ದಸರಾ ಗೋಲ್ಡ್ ಪಾಸ್ ಉಳ್ಳವರ ಪಾಲಾಗುತ್ತಿದೆ. ಕಾನೂನು ಸುವ್ಯವಸ್ಥೆ ಹಾಳು ಮಾಡುತ್ತಿರುವ ಸಂಸದ ಪ್ರತಾಪ ಸಿಂಹ ಹಾಗೂ ಮಹೇಶ್ ಚಂದ್ರಗುರು ಮೇಲೆ ಕಾನೂನು ಕ್ರಮ ಯಾಕೆ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಾ.ಸ.ಪ್ರವೀಣ್, ರಾಜೇಗೌಡ, ಎಸ್.ನಾಗೇಂದ್ರ, ಸುಂದರ್, ಪ್ರೇಮ್ ಕುಮಾರ್ ಉಪಸ್ಥಿತರಿದ್ದರು.

ಬಿಜೆಪಿ ಕೋರ್ ಕಮಿಟಿಯಲ್ಲಿ ಮಹಿಷಾ ದಸರಾ ಪ್ರಸ್ತಾಪವೇ ಆಗಿಲ್ಲ

- ಬಿಜೆಪಿ ಮುಖಂಡರ ಅಸಮಾಧಾನ
- ಮಹಿಷಾ ದಸರಾಕ್ಕೆ ವಿರೋಧ ಸಂಸದ ಪ್ರತಾಪ್ ಸಿಂಹರ ವೈಯಕ್ತಿಕ ಹೋರಾಟ



ಮೈಸೂರು, ಅ.11(ಜಿಎ)–ಕಳೆದ ಒಂಭತ್ತು ವರ್ಷದಿಂದ ಅಭಿವೃದ್ಧಿ ಕೆಲಸಗಳನ್ನು ಮಾಡದೇ, ಬರೀ ಪ್ರಚೋದನಕಾರಿ ಹೇಳಿಕೆ ನೀಡುತ್ತಿರುವ ಸಂಸದ ಪ್ರತಾಪಸಿಂಹ ಅವರಿಗೆ ಮುಂಬರುವ ಲೋಕಸಭಾ ಚುನಾಣೆಯಲ್ಲಿ ಬಿಜೆಪಿ ಟಿಕೆಟ್ ಕೊಟ್ಟರೆ ಅವರನ್ನು ನಾವು ಬೆಂಬಲಿಸುವುದಿಲ್ಲ. ಅದರ ಬದಲು ಪ್ರತಾಪ್ ಸಿಂಹ ಹಠಾವೋ ಮೈಸೂರು ಬಚಾವೋ ಚಳವಳಿ ಮಾಡುತ್ತೇವೆ ಎಂದು ಬಿಜೆಪಿ ಮುಖಂಡ ವಿ.ಗಿರಿಧರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಷ ದಸರಾಗೆ ವಿರೋಧ ಸಂಸದ ಪ್ರತಾಪ್ ಸಿಂಹ ಅವರ ವೈಯಕ್ತಿಕ ಹೋರಾಟವಾಗಿದೆ. ಕಾರಣ ಇದರ ಬಗ್ಗೆ ಬಿಜೆಪಿ ಕಾರ್ಯಕರ್ತರ ಸಭೆ ಕರೆದು ಚರ್ಚಿಸಿಲ್ಲ. ಮೈಸೂರಿನ ಬಿಜೆಪಿ ಕೋರ್ ಕಮಿಟಿಯಲ್ಲಿ ಚರ್ಚೆ ಮಾಡಿಲ್ಲ. ಕಾರ್ಯಕರ್ತರಿಗೆ ಈ ಬಗ್ಗೆ ಯಾವುದೇ ಮಾಹಿತಿಯಿಲ್ಲ. ಅದು ಪ್ರತಾಪ್‌ಸಿಂಹ ಅವರ ವೈಯಕ್ತಿಕ ಹೋರಾಟ ಎಂದ ಅವರು, ಇನ್ನೊಬ್ಬರ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡುವ ಮಹಿಷ ದಸರಾವನ್ನು ವಿರೋಧಿಸುವಂತೆ ಪ್ರತಾಪ್‌ಸಿಂಹ ಕರೆ ನೀಡಿರುವುದು ಸರಿಯಲ್ಲ ಎಂದು ದೂರಿದರು.

ಲೋಕಸಭಾ ಚುನಾವಣೆ ಹತ್ತಿರದಲ್ಲಿದೆ ಎಂದು ರಾಜಕೀಯ ಮಾಡಿ, ಜನರು ಮತ್ತು ಕಾರ್ಯಕರ್ತರನ್ನು ಪ್ರೇರೇಪಿಸಿ ಸಂಘರ್ಷಕ್ಕೆ ಆಹ್ವಾನ ನೀಡುತ್ತಿರುವುದು ಕಾನೂನು ಬಾಹಿರ ಕೃತ್ಯ, ಅದು ಸರಿಯಲ್ಲ. ಇದೇ ರೀತಿಯ ವಿವಾದಾಸ್ಪದ ಹೇಳಿಕೆಗಳ ಮೂಲಕ ಒಂಭತ್ತೂವರೆ ವರ್ಷ ಕಳೆದಿದ್ದೀರಿ. ಯಾವುದೇ ಅಭಿವೃದ್ಧಿ ಕಡೆ ತಾವು ಗಮನ ಕೊಡದೆ ಮಾತೆತ್ತಿದರೆ ಮೈಸೂರು–ಬೆಂಗಳೂರು ರೋಡ್ ಮಾಡಿದ್ದೀನಿ ಎಂದು ಹೇಳುತ್ತೀರಿ. ಇವರ ಈ ಹೇಳಿಕೆಗಳಿಂದ ಪಕ್ಷಕ್ಕೆ ಡ್ಯಾಮೇಜ್ ಆಗುತ್ತಿದೆ. ಮತಗಳು ರಿವರ್ಸ್ ಆಗುತ್ತಿವೆ. ಹೀಗಾಗಿ ಈ ಬಾರಿ ಲೋಕಸಭೆಯ ಟಿಕೆಟ್ ಬೇರೆಯವರಿಗೆ ಕೊಡಬೇಕು. ಪ್ರತಾಪ್ ಸಿಂಹರಿಗೆ ಕೊಡಬಾರದು ಎಂದು ಕೇಂದ್ರದ ವರಿಷ್ಠರಿಗೂ ಪತ್ರ ಬರೆಯುತ್ತೇವೆ. ಅವರನ್ನು ಬಿಟ್ಟು ಬೇರೆ ಯಾರಿಗಾದರೂ ಪಕ್ಷದ ಟಿಕೆಟ್ ನೀಡಿ ದರೆ, ಮಾತ್ರ ನಾವು ಬೆಂಬಲಿಸುತ್ತೇವೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸತೀಶ್, ನಾಗಣ್ಣ, ರಾಚಪ್ಪ, ಕುಮಾರ್ ಮತ್ತು ಶ್ರೀಕಂಠ ಉಪಸ್ಥಿತರಿದ್ದರು.

ಅ.15ರಿಂದ ನವರಾತ್ರಿ ರಂಗೋತ್ಸವ

ಮೈಸೂರು, ಅ. 11– ಮೈಸೂರು ರಂಗಾಯಣವು ಪ್ರತಿವರ್ಷದಂತೆ ಈ ವರ್ಷವೂ ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ನವರಾತ್ರಿ ರಂಗೋತ್ಸವವನ್ನು ಅ.15ರಿಂದ 23ರವರೆಗೆ ಆಯೋಜಿಸಿದೆ.

ಈ ರಂಗೋತ್ಸವದಲ್ಲಿ 9 ದಿನಗಳ ಕಾಲ 9 ನಾಟಕಗಳನ್ನು ಪ್ರದರ್ಶಿಸಲಾಗುವುದು. ನವರಾತ್ರಿ ರಂಗೋತ್ಸವದ ಉದ್ಘಾಟನೆಯನ್ನು ಅ.15 ರಂದು ಸಂಜೆ 5.30ಕ್ಕೆ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್ ತಂಗಡಗಿ ರಂಗೋತ್ಸವವನ್ನು ಉದ್ಘಾಟಿಸಲಿದ್ದಾರೆ. ದಸರಾ ಬೊಂಬೆ ಪ್ರದರ್ಶನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಾದ ಡಾ.ಎನ್.ಮಂಜುಳ ಉದ್ಘಾಟಿಸಲಿದ್ದು, ಛಾಯಾಚಿತ್ರ ಪ್ರದರ್ಶನವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಧರಣಿದೇವಿ ಮಾಲಗತ್ತಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ನವರಾತ್ರಿ ರಂಗೋತ್ಸವದ ಉದ್ಘಾಟನೆಯ ದಿನದಂದು ರಂಗಭೂಮಿಯಲ್ಲಿ ಅನನ್ಯ ಸೇವೆ ಸಲ್ಲಿಸಿರುವ ಹಿರಿಯ ರಂಗಕರ್ಮಿ ಎ. ನಾರಾಯಣ ರೈ ಅವರಿಗೆ 'ರಂಗ ಗೌರವ ಪುರಸ್ಕಾರ'ವನ್ನು ನೀಡಿ ಗೌರವಿಸಲಾಗುವುದು.

ದಸರಾ ಬಂದರೂ ಸಿದ್ಧತೆ ಇನ್ನು ಮುಗಿದಿಲ್ಲ!

ಮೈಸೂರು,ಅ.11(ಪಿಎಂ)– ದಸರಾ ಮಹೋತ್ಸವದ ಉದ್ಘಾಟನೆಗೆ ನಾಲ್ಕೇ ದಿನ ಬಾಕಿ ಇದ್ದರೂ ಸಿದ್ಧತೆ ಮಾತ್ರ ಮಾಮೂಲಿ ಮಂದಗತಿಯಲ್ಲಿದೆ. ಇದೇನು ಹೊಸದಲ್ಲ ಬಿಡಿ. ಹಿಂದಿನ ವರ್ಷಗಳಂತೆಯೇ ಈ ಬಾರಿಯೂ ಸಾಗಿದೆ ಬಿಡಿ.





ರಾಜ್ಯದಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದರೂ ಅಧಿಕಾರಿಗಳೇನು ತಮ್ಮ ಕಾರ್ಯವೈಖರಿ ಬದಲಿಸಿಕೊಂಡಿಲ್ಲ ಎಂಬುದು ಇದರಿಂದ ತಿಳಿದು ಬರುತ್ತೆ. ಕನಿಷ್ಠ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವ ಕಾರ್ಯವೂ ಪರಿಪೂರ್ಣತೆ ಪಡೆದುಕೊಂಡಿಲ್ಲ. ನಗರದ ಪ್ರಮುಖ ರಸ್ತೆಗಳಲ್ಲಿ ದೀಪಾಲಂಕಾರ ಮಾತ್ರ ದಸರಾ ಮಹೋತ್ಸವದ ವಾತಾವರಣ ಸೃಷ್ಟಿಸಿದೆಯಾದರೂ ಅದೂ ಪರಿಪೂರ್ಣಗೊಂಡಂತೆ ಕಾಣುತ್ತಿಲ್ಲ. ಅಲ್ಲದೆ, ಹಲವು ವೃತ್ತಗಳಲ್ಲಿ ದೀಪಾಲಂಕಾರ ಪೂರ್ಣಗೊಂಡಿಲ್ಲ. ಇಲ್ಲಿ ಕಲಾಕೃತಿಗಳ ಕಲಾತ್ಮಕ ಚಿತ್ತಾರವೂ ಪೂರ್ಣವಾಗಿಲ್ಲ.





ಬಹುತೇಕ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಿಲ್ಲ. ರಸ್ತೆ ಗುಂಡಿಗಳೊಂದಿಗೆ ಗುದ್ದಾಡಿ ವಾಹನ ಚಾಲನೆ ಮಾಡುತ್ತಿದ್ದ ಸವಾರರು ದಸರಾಗಾದರೂ ಈ ಸಮಸ್ಯೆಗೊಂದು ಪರಿಹಾರ ದೊರೆಯಲಿದೆ ಎಂಬ ಲೆಕ್ಕಾಚಾರ ಈ ಬಾರಿಯೂ ತಪ್ಪಾಗಿದೆ. ಇನ್ನು ಇಲ್ಲೆಲ್ಲಾ ಡಾಂಬರೀಕರಣ ಶುರುವಾಗುವುದು ಯಾವಾಗ ಎಂಬ ಪ್ರಶ್ನೆ ಉದ್ಭವಿಸಿದೆ. ಇನ್ನು ಕೆಆರ್ ಸರ್ಕಲ್ ಸೇರಿದಂತೆ ರಾಜ ಮಾರ್ಗದ ಫುಟ್‌ಪಾತ್‌ನಲ್ಲಿ ಟೈಲ್ಸ್ ತುಂಡಾಗಿ, ಹೊಂಡ ಮಯವಾಗಿದ್ದು, ಕಾಣದೇ ಕಾಲಿಟ್ಟರೆ ಮುಗಿಯಿತು. ದಸರಾ ಇನ್ನೇನು ಒಂದೆರಡು ತಿಂಗಳಿದೆ ಎನ್ನುವಾಗ ವರ್ಗಾವಣೆಗೊಂಡು ಬರುವ ಅಧಿಕಾರಿಗಳಿಗೆ ದಸರಾ ಏರ್ಪಾಡಿನ ಬಗ್ಗೆ ಏನು ಅರಿವಿದೆ ಎಂಬುದು ಮೈಸೂರಿಗರ ಪ್ರಶ್ನೆ.

ದಸರಾಗಾಗಿಯೇ ಪ್ರತ್ಯೇಕ ಅನುದಾನ ವಿನಿಯೋಗಿಸಿದರೂ ಸರಿಯಾದ ಸಮಯಕ್ಕೆ ಸಿದ್ಧತೆಗಳು ಮುಗಿದ ಉದಾಹರಣೆ ಯಾವುದೇ ವರ್ಷದಲ್ಲಿ ಕಂಡು ಬಂದಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದು, ಪ್ರತಿ ವರ್ಷವೂ ದಸರಾ ಉದ್ಘಾಟನೆಗೊಂಡ ಬಳಿಕವೂ ಸಿದ್ಧತೆಗಳು ಆಮೆಗತಿಯಲ್ಲಿ ಸಾಗುವುದು ಸರ್ವೇ ಸಾಮಾನ್ಯವಾಗಿದೆ. ದಸರಾ ವಸ್ತುಪ್ರದರ್ಶನದಲ್ಲಿ ದಸರಾ ಉದ್ಘಾಟನೆ ದಿನದಂದೇ ಮಳಿಗೆಗಳು ಆರಂಭಗೊಳ್ಳಬೇಕು ಎಂಬ ಪ್ರಯತ್ನ ಬಹುತೇಕ ಎಲ್ಲಾ ವರ್ಷದಲ್ಲೂ ವಿಫಲವಾಗಿದ್ದು, ಈ ಬಾರಿಯೂ ಅದೇ ಪರಿಸ್ಥಿತಿ ಎದುರಾಗುವುದೇ ಎನ್ನುವಂತಾಗಿದೆ.

> “ದಸರಾ ಮಹೋತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಮಾತ್ರವಲ್ಲದೆ, ದೇಶ–ವಿದೇಶಗಳಿಂದಲೂ ಪ್ರವಾಸಿಗರು ಆಗಮಿಸುತ್ತಿದ್ದು, ಅವರನ್ನು ಅಪೂರ್ಣ ಸಿದ್ಧತೆಗಳು ಸ್ವಾಗತಿಸುವಂತಾಗಿದೆ. ಫುಟ್‌ಪಾತ್‌ಗಳ ಬಣ್ಣ ಮಾಸಿದ್ದು, ಅವುಗಳಿಗೆ ಬಣ್ಣ ಬಳಿಯುವ ಕಾರ್ಯವೂ ಪೂರ್ಣಗೊಂಡಿಲ್ಲ. ಮೈಸೂರಿನ ಅನೇಕ ರಸ್ತೆಗಳಲ್ಲಿ ಅನೈರ್ಮಲ್ಯದ ವಾತಾವರಣ ಹಾಗೆಯೇ ಉಳಿದಿದ್ದು, ಅದರತ್ತಲೂ ಗಮನನೀಡಿದಂತಿಲ್ಲ.

ಹುಣಸೂರಲ್ಲಿ ಮನೆಗಳಿಗೆ ನುಗ್ಗಿದ ಮಳೆ ನೀರು

ಮಂಜುನಾಥ, ಸಾಕೇತ, ಹೊಸಮಾರುತಿ ಬಡಾವಣೆ ಜನರ ಸಂಕಷ್ಟ



ಹುಣಸೂರು, ಅ.11– ಹುಣಸೂರು ವ್ಯಾಪ್ತಿ ಎರಡು ದಿನಗಳಿಂದ ಸುರಿದ ಭಾರಿ ಮಳೆಯಿಂದ ನಗರದ ಮಂಜುನಾಥ ಮತ್ತು ಸಾಕೇತ, ಹೊಸಮಾರುತಿ ಬಡಾವಣೆಯ ಮನೆಗಳಿಗೆ ನೀರು ನುಗ್ಗಿ ಜನರು ಸಂಕಷ್ಟಕ್ಕೀಡಾಗಿದ್ದಾರೆ.

ಮಳೆ ಬಂದಾಗ ನಗರಸಭೆ ಅಧಿಕಾರಿಗಳು ಸ್ಥಳಕ್ಕೆ ಬಂದು ತಾತ್ಕಾಲಿಕವಾಗಿ ಜೆಸಿಬಿ ಕಳುಹಿಸಿ ಸಣ್ಣಪುಟ್ಟ ಕಾರ್ಯ ಕೈಗೊಂಡು ಕೈ ತೊಳೆದುಕೊಳ್ಳುತ್ತಾರೆ. ಆದರೆ, ಪ್ರತಿ ಬಾರಿ ಮಳೆ ಬಂದಾಗ ಬಡಾವಣೆ ನಿವಾಸಿಗಳ ಗೋಳು ಯಾವ ಅಧಿಕಾರಿಗಳು ಹಾಗೂ ಸರ್ಕಾರಕ್ಕೂ ತಲುಪದಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಅವರಿಗೆ ಸಾಂತ್ವನ ನೀಡುವ ಕೆಲಸವನ್ನು ಸಹ ಅಧಿಕಾರಿಗಳು ಮಾಡಿರುವುದಿಲ್ಲ.

ನಗರಸಭೆ ಅಧಿಕಾರಿಗಳು ಸರ್ಕಾರಕ್ಕೆ ಸರಿಯಾದ ಮಾಹಿತಿ ನೀಡದೆ ತಮ್ಮ ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಇದರೊಂದಿಗೆ 15 ವರ್ಷಗಳಿಂದಲೂ ಶಾಸಕರಾಗಿದ್ದ ಹೆಚ್.ಪಿ. ಮಂಜುನಾಥ್ ಅವರು ನಗರದ ಮಧ್ಯ ಭಾಗದ ಈ ಬಡಾವಣೆಗಳ ಕಡೆ ಗಮನ ಹರಿಸದೆ ಹಾಗೂ ನಗರ ಪ್ರದೇಶಗಳ ಚರಂಡಿ ಕಾಲುವೆಗಳನ್ನು ಅಭಿವೃದ್ಧಿ ಪಡಿಸಿಲ್ಲ. ಅವೈಜ್ಞಾನಿಕ ಬಡಾವಣೆಗಳು ಹಾಗೂ ಅನಧಿಕೃತ ಕಟ್ಟಡಗಳಿಗೆ ಪರವಾನಗಿ ನೀಡುತ್ತಾ, ನೀರು ಹರಿದು ಹೋಗುವ ಸ್ಥಳಗಳಲ್ಲಿ ಮಳೆಗಾಲ ಬರುವ ಸಂದರ್ಭದಲ್ಲಿ ಚರಂಡಿಗಳನ್ನು ಸ್ವಚ್ಛಗೊಳಿಸದೆ ನಗರಸಭೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತ್ತಿದ್ದಾರೆ.

ಆದ್ದರಿಂದ ಕೂಡಲೇ ಶಾಸಕ ಜಿ.ಡಿ. ಹರೀಶ್‌ಗೌಡ, ಸಂಸದರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಹುಣಸೂರಿನಲ್ಲಿ ಮಳೆಯಿಂದ ಹಾನಿಯಾಗಿರುವ ಬಡಾವಣೆಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಸರ್ಕಾರಕ್ಕೆ ನೀಡುವ ಕೆಲಸ ಮಾಡಬೇಕು. ಚರಂಡಿ, ನಾಲೆಗಳನ್ನು ಅಭಿವೃದ್ಧಿಪಡಿಸಬೇಕು. ಇಲ್ಲದಿದ್ದಲ್ಲಿ ಪುರಸಭೆ ಕಚೇರಿ ಎದುರು ಜನರೊಂದಿಗೆ ಪ್ರತಿಭಟನೆ ನಡೆಸುವುದಾಗಿ ಸತ್ಯಎಂಎಎಸ್ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಎಚ್ಚರಿಸಿದ್ದಾರೆ.

ಕಪಿಲಾ ನದಿಗೆ ತೆರಳುವ ರಸ್ತೆ ಬಂದ್ ತೆರವುಗೊಳಿಸಿ

ಸರಗೂರು, ಅ.11– ಪಟ್ಟಣದ ನೃಪತುಂಗ ಸರ್ಕಲ್ ಬಳಿ ಕಪಿಲಾ ನದಿಗೆ ತೆರಳುವ ರಸ್ತೆಯನ್ನು ಬಂದ್ ಮಾಡಿರುವುದರಿಂದ ತಿರುಗಾಟಕ್ಕೆ ತೊಂದರೆಯಾಗಿದ್ದು, ಇದನ್ನು ತೆರವುಗೊಳಿಸುವಂತೆ ಇಲ್ಲಿನ ನಿವಾಸಿಗಳು ಒತ್ತಾಯಿಸಿದರು.

ಇಲ್ಲಿನ ನಿವಾಸಿಯೊಬ್ಬರು ಬೊಂಬುಗಳ ತಡಿಕೆಯೊಂದಿಗೆ ರಸ್ತೆಯನ್ನು ಬಂದ್ ಮಾಡಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದೆ. ಆದರೆ, ರಸ್ತೆ ಬಂದ್‌ಗೆ ಕಾರಣ ತಿಳಿದು ಬಂದಿಲ್ಲ. ಇದರಿಂದ ಪಕ್ಕದ ಚರಂಡಿಯಲ್ಲಿ ಪೊದೆಗಳು ಬೆಳೆದು ವಿಷಜಂತುಗಳ ಆವಾಸಸ್ಥಾನವಾಗಿದೆ.

ಈ ಚರಂಡಿಯ ಕೆಸರಿನಲ್ಲಿ ಹಂದಿಗಳ ಓಡಾಟದಿಂದ ಪಟ್ಟಣದಲ್ಲಿ ಮಾಲಿನ್ಯ ಸೃಷ್ಟಿಯಾಗಿ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗಿದೆ. ಆದ್ದರಿಂದ ರಸ್ತೆ ಬಂದ್ ತೆರವುಗೊಳಿಸಿ, ಚರಂಡಿಯನ್ನು ಸ್ವಚ್ಛಗೊಳಿಸುವಂತೆ ಸಾರ್ವಜನಿಕರು ಪಟ್ಟಣ ಪಂಚಾಯಿತಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಬುಧವಾರ ಪಪಂ ಮುಖ್ಯಾಧಿಕಾರಿ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಇದೇ ವೇಳೆ ರಸ್ತೆ ಬಂದ್ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ನಿವಾಸಿಗಳು ಆಗ್ರಹಿಸಿದರು. ಸಾರ್ವಜನಿಕರ ಅನುಕೂಲಕ್ಕಾಗಿ ರಸ್ತೆ ಬಂದ್ ತೆರವುಗೊಳಿಸುವಂತೆ ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಅಧಿಕಾರಿಗಳಿಗೆ ಸೂಚಿಸಿದರು. ಮುಖಂಡರಾದ ಶ್ರೀನಾಥ್, ಅಶ್ವತ್, ಬುಲೆಟ್ ಮಂಜು, ಸೂರಿ, ನಾಗರಾಜು, ಸುನೀಲ್, ಶಿವು, ಸುರೇಶ್, ಶಂಭು, ಲೋಕೇಶ್ ಇದ್ದರು.



ವಿದ್ಯಾರ್ಥಿಗಳಿಗೆ ಸ್ಕೌಟ್ಸ್–ಗೈಡ್ಸ್ ತರಬೇತಿ ನೀಡಲು ಸಿದ್ಧ



ಭೇರ್ಯ, ಅ.11– ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ವಿದ್ಯಾರ್ಥಿಗಳಿಗೆ ದೇಶ ಸೇವೆ ಮತ್ತು ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕಿದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಮೀಲ್ ಹೇಳಿದರು.

ಭೇರ್ಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ (ರೋವರ್ ಮತ್ತು ರೇಂಜರ್) ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಶಾಲಾ–ಕಾಲೇಜು ಹಂತದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಸರ್ಕಾರ ಸಾಕಷ್ಟು ಉತ್ತೇಜನ ನೀಡುತ್ತಿದೆ. ಹೀಗಾಗಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು. ಯಾವುದೇ ಸಂದಿಗ್ಧ ಸ್ಥಿತಿಯಲ್ಲಿ ಸಮಾಜ ಸೇವೆಗೆ ಮುಂದಾಗಲು ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡಲು ನಾನು ಸಿದ್ಧನಿದ್ದೇನೆ ಎಂದು ಹೇಳಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಆಯುಕ್ತ ಡಾ.ಅಜಯ್ ಕುಮಾರ್ ಜೈನ್, ಪ್ರಾಂಶುಪಾಲೆ ಕೋಮಲಾ, ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷೆ ಹರ್ಷವರ್ಧಿನಿ ಮೋಹನ್ ಮಾತನಾಡಿದರು. ಇದೇ ವೇಳೆ ಕಾಲೇಜು ಮುಂಭಾಗ ಸ್ಕೌಟ್ಸ್ ಮತ್ತು ಗೈಡ್ಸ್‌ನ ಧ್ವಜಾರೋಹಣ ನೆರವೇರಿಸಲಾಯಿತು. ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲಾ ಸ್ಥಾನಿಕ ಆಯುಕ್ತ ಉಮೇಶ್, ಜಿಲ್ಲಾ ಸಂಘಟಕರಾದ ಆರ್.ಪಿ.ಚಂದ್ರು, ರಾಮ್‌ಪ್ರಸಾದ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಮೋಹನ್ ಕುಮಾರ್, ಸಂಘಟನಾ ಕಾರ್ಯದರ್ಶಿ ಬಿ.ಆರ್.ಮಹೇಶ್, ರೋವರ್ ಗ್ರೂಪ್‌ನ ಲೀಡರ್ ಬಾಲಕೃಷ್ಣ ಎಂ.ಎನ್, ರೇಂಜರ್ ಗ್ರೂಪ್‌ನ ಲೀಡರ್ ಡಾ.ಪುಷ್ಪಲತಾ, ಉಪನ್ಯಾಸಕರಾದ ನಾಗೇಂದ್ರ, ಡಾ.ಮಹೇಶ್, ರಾಘವೇಂದ್ರ, ಯೋಗೀಶ್, ಮಂಜುಳಾ, ಗೀತಾ, ಜಯಶ್ರೀ, ಪೂಜಿತಾ ಇದ್ದರು.

ಮಹಿಷ ದಸರಾ ಆಚರಣೆ ತಡೆಯಲು ಸಾಧ್ಯವಿಲ್ಲ

ಹೆಚ್.ಡಿ.ಕೋಟೆ, ಅ.11–ಮಹಾರಾಜರ ಕಾಲದಲ್ಲಿ ಮಹಿಷನಿಗೆ ಪುಷ್ಪಾರ್ಚನೆ ಮಾಡಿ, ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುತ್ತಿದ್ದರು ಎಂದು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಎಚ್.ಸಿ.ನರಸಿಂಹಮೂರ್ತಿ ತಿಳಿಸಿದರು.

ಮೈಸೂರಿನಲ್ಲಿ ಅ.13ರಂದು ನಡೆಯುವ ಮಹಿಷ ದಸರಾ ಆಚರಣೆಯನ್ನು ವಿರೋಧಪಡಿಸಲು ಯಾರಿಂದಲೂ ಸಾಧ್ಯವಿಲ್ಲ. ನಾವು ಮಹಿಷ ದಸರಾವನ್ನು ಆಚರಿಸುತ್ತೇವೆ. ಯಾರಿಗೆ ಯಾವ ಆಚರಣೆ ಬೇಕೋ ಅದನ್ನು ಆಚರಿಸಲಿ. ನಾಡಿನ ಪ್ರಗತಿಪರ ಚಿಂತಕರು, ಅಂಬೇಡ್ಕರ್ ಹಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳು ಮೈಸೂರಿನ ಚಾಮುಂಡಿಬೆಟ್ಟದ ಮಹಿಷ ಪ್ರತಿಮೆ ಬಳಿ ಪುಷ್ಪಾರ್ಚನೆ ಮಾಡಿ, ಮೆರವಣಿಗೆ ನಡೆಸುತ್ತೇವೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚಾಮುಂಡಿಬೆಟ್ಟದ ಮಹಾದ್ವಾರದ ಬಳಿಯಿಂದ ವಿವಿಧ ವೇಷಭೂಷಣ, ಸಾಂಸ್ಕೃತಿಕ ಕಲಾತಂಡ, ಜಾತ್ಯತೀತ ಮಹನೀಯರ ಭಾವಚಿತ್ರಗಳೊಂದಿಗೆ ಮೆರವಣಿಗೆ ಹೊರಟು ತಾವರೆಕಟ್ಟೆಯಿಂದ ಕುರುಬಾರಹಳ್ಳಿ ವೃತ್ತ, ಸಿದ್ಧಾರ್ಥ ಬಡಾವಣೆ, ನಜರ್‌ಬಾದ್, ಹಾರ್ಡಿಂಗ್ ವೃತ್ತದ ಮೂಲಕ ಪುರಭವನದಲ್ಲಿ ಸಮಾವೇಶಗೊಳ್ಳಲಾಗುವುದು. ಮಹಿಷ ದಸರಾದಲ್ಲಿ ತಾಲೂಕಿನಿಂದ 2000 ಜನ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮುದ್ದುಮಲ್ಲಯ್ಯ, ಹೈರಿಗೆ ಶಿವರಾಜು, ಸೋಗಳ್ಳಿ ಶಿವಣ್ಣ, ಸಣ್ಣಕುಮಾರ್, ವನಸಿರಿ ಶಂಕರ್, ಮಟಕೆರೆ ಮಹೇಶ್ ಇದ್ದರು.

7 ಲಕ್ಷ ರೂ. ಮೌಲ್ಯದ ಪಟಾಕಿ ವಶ



ಹುಣಸೂರು, ಅ.11–ನಗರದ ಮಂಜುನಾಥ ಬಡಾವಣೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಸುಮಾರು 7 ಲಕ್ಷ ರೂ. ಮೌಲ್ಯದ ಪಟಾಕಿಗಳನ್ನು ಪೊಲೀಸರು ಬುಧವಾರ ರಾತ್ರಿ ವಶಪಡಿಸಿಕೊಂಡರು. ಮಾಹಿತಿ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಧರ್ಮೇಂದ್ರ, ಸಿಬ್ಬಂದಿ ಯೋಗೇಶ್, ನಗರಸಭೆ ಆರೋಗ್ಯ ನಿರೀಕ್ಷಕ ಸತೀಶ್, ಕಂದಾಯ ಇಲಾಖೆ ಅಧಿಕಾರಿಗಳು ಬಡಾವಣೆಯ ಸೋಮಶೇಖರ್ ಅವರ ಪಕ್ಕದ ನಾಗರಾಜ್ ಮನೆ ಮೇಲೆ ದಿಢೀರ್ ದಾಳಿ ನಡೆಸಿದರು.

ಈ ವೇಳೆ 2100 ಕೆಜಿಯ ವಿವಿಧ ಪಟಾಕಿಗಳನ್ನು ಸಂಗ್ರಹಿಸಿರುವುದು ಪತ್ತೆಯಾಗಿದ್ದು, ನಂತರ ವಶಪಡಿಸಿಕೊಂಡರು. ಕಾರ್ಯಾಚರಣೆಯಲ್ಲಿ ಪಿಎಸ್‌ಗಳಾದ ಜಮೀರ್ ಅಹಮದ್, ತಮ್ಮಣ್ಣೇಗೌಡ, ಬಸವೇಗೌಡ, ಪ್ರಭಾಕರ್, ವೆಂಕಟೇಶ್ ಭಾಗವಹಿಸಿದ್ದರು.

ಮಹಿಷ ದಸರಾದಲ್ಲಿ ದಸಂಸ ಕಾರ್ಯಕರ್ತರು ಭಾಗಿ

ಹುಣಸೂರು, ಅ.11– ಮೈಸೂರಿನಲ್ಲಿ ಅ.13ರಂದು ನಡೆಯುವ ಮಹಿಷ ದಸರಾಕ್ಕೆ ಹುಣಸೂರು ದಸಂಸದ ವತಿಯಿಂದ ನೂರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ತಿಳಿಸಿದರು.

ನಗರದಲ್ಲಿ ಈ ಸಂಬಂಧ ಮಾತನಾಡಿದ ಅವರು, ಮಹಿಷ ಒಬ್ಬ ಬಲಶಾಲಿ ರಾಜನಾಗಿದ್ದು, ಈತನು ಅಂದಿನ ಕಾಲದಲ್ಲಿ ಮಹಾರಾಜರಾಗಿದ್ದರು. ಇವರ ಕಾಲದಲ್ಲಿ ಶೋಷಿತ ಸಮುದಾಯಗಳ ಹಕ್ಕು ಬಾಧ್ಯತೆಗಳ ಬಗ್ಗೆ ಸಮಾನತೆಯನ್ನು ಕಂಡುಕೊಂಡಿದ್ದರು. ಇಂತಹ ಮಹಾರಾಜರನ್ನು ಸನಾತನ ಧರ್ಮದವರು ಮಹಿಷ ರಾಕ್ಷಸ ಎಂದು ಬಿಂಬಿಸಿ ಇತಿಹಾಸ ತಿರುಚಿದ್ದಾರೆ. ಮಹಿಷ ರಾಜರ ಹೆಸರಿನಿಂದಲೇ ಮೈಸೂರು ಎಂದು ನಾಮಕರಣವಾಗಿದ್ದು, ಅಂದಿನ ಮೈಸೂರು ಮಹಾರಾಜರೇ ಕಲ್ಲಿನಲ್ಲಿ ಕೆತ್ತಿರುವ ಇತಿಹಾಸದ ಕುರುಹು ಇದೆ. ಇಂಥ ಸಾಮಾಜಿಕ ಕಳಕಳಿಯುಳ್ಳ ಮಹಿಷ ದಸರಾವನ್ನು ಶೋಷಿತ ಸಮುದಾಯಗಳು ಆಚರಿಸುವುದನ್ನು ಸಂಸದ ಪ್ರತಾಪ್ ಸಿಂಹ ವಿರೋಧಿಸಿ ತಡೆಯಲು ಹೊರಟಿರುವುದನ್ನು ದಸಂಸ ತೀವ್ರವಾಗಿ ಖಂಡಿಸುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಸಂಸ ಮುಖಂಡರಾದ ಹೆಚ್.ಪಿ.ದಿವಾಕರ್, ಕೆ.ನಂಜಪ್ಪ ಬಸವನಗುಡಿ, ದೇವೇಂದ್ರ ಕುಳುವಾಡಿ, ಕಿರಿಜಾಜಿ ಗಜೇಂದ್ರ, ಬಲ್ಲೇನಹಳ್ಳಿ ಕೆಂಪರಾಜು, ಶೇಖರ ಯಶೋಧರಪುರ, ವೆಂಕಟೇಶ ಏಕಲವ್ಯ ನಗರ ಇದ್ದರು.

ಆನೆ ಕಾರ್ಯಪಡೆ ವಾಹನ ಚಾಲಕ ಆತ್ಮಹತ್ಯೆಗೆ ಯತ್ನ



ಹೆಚ್.ಡಿ.ಕೋಟೆ, ಅ.11–ತಾಲೂಕಿನ ಆನೆ ಕಾರ್ಯಪಡೆಯ ವಾಹನ ಚಾಲಕ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಪಟ್ಟಣದಲ್ಲಿ ಬುಧವಾರ ನಡೆದಿದೆ.

ಹುಣಸೂರು ತಾಲೂಕಿನ ಸಿಂಗರಮಾರನಹಳ್ಳಿ ಗ್ರಾಮದ ವಿನೋದ್(25) ಆತ್ಮಹತ್ಯೆಗೆ ಯತ್ನಿಸಿದ ಚಾಲಕ. ಈತ ಡಿಆರ್‌ಎಫ್ ನವೀನ್ ಬೈದರು ಎಂದು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಕ್ಷಣ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ.

ನಾವು ಸಿಬ್ಬಂದಿಗೆ ಕೆಲಸ ಹೇಳುತ್ತೇವೆ, ಬೈಯುತ್ತೇವೆ ಎಂಬ ಕಾರಣಕ್ಕೆ ಆತ್ಮಹತ್ಯೆಗೆ ಮುಂದಾದರೆ ನಾವು ಕೆಲಸ ಮಾಡುವುದು ಹೇಗೆ ಎಂದು 'ಮೈಸೂರು ಮಿತ್ರ'ನಿಗೆ ಆನೆ ಕಾರ್ಯಪಡೆಯ ಆರ್‌ಎಫ್‌ಓ ಅನಿತ್ ರಾಜ್ ಅವರು ತಿಳಿಸಿದ್ದಾರೆ.

ಎ.ಜೆ.ಕಾಳೇಗೌಡ ತಂಬಾಕು ಮಂಡಳಿಯ ಕ್ರಾಪ್ ಕಮಿಟಿ ಅಧ್ಯಕ್ಷ



ಹುಣಸೂರು, ಅ.11–ತಂಬಾಕು ಮಂಡಳಿಯ ಕ್ರಾಪ್ ಕಮಿಟಿಯ ಅಧ್ಯಕ್ಷರಾಗಿ ಹೆಚ್.ಡಿ.ಕೋಟೆ ಪ್ಲಾಟ್‌ಫಾರಂನ ಎ.ಜೆ.ಕಾಳೇಗೌಡ, ಉಪಾಧ್ಯಕ್ಷರಾಗಿ ರಾಮನಾಥಪುರ ಪ್ಲಾಟ್‌ಫಾರಂನ ಮಂಜು ಹಾಗೂ ಕಾರ್ಯದರ್ಶಿಯಾಗಿ ಕಟ್ಟೆಮಳಲವಾಡಿ ಪ್ಲಾಟ್‌ಫಾರಂನ ಮರಿಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

ಮೈಸೂರಿನ ತಂಬಾಕು ಮಂಡಳಿಯ ಪ್ರಾದೇಶಿಕ ವ್ಯವಸ್ಥಾಪಕರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ವ್ಯವಸ್ಥಾಪಕ ಸುಬ್ಬರಾವ್ ಅವರು ಸರ್ವಾನುಮತದಿಂದ ಆಯ್ಕೆ ಮಾಡಿದರು. ಸದಸ್ಯರಾಗಿ ಕಟ್ಟೆಮಳಲವಾಡಿ ಪ್ಲಾಟ್‌ಫಾರಂ–3ರ ನವೀನ್, ರವಿ, ಚಿಲ್ಕುಂದ ಪ್ಲಾಟ್‌ಫಾರಂನ ಬೀರೇಗೌಡ, ಕಗ್ಗುಂಡಿ ಪ್ಲಾಟ್‌ಫಾರಂ–3ರ ಶಂಕರೇಗೌಡ, ಚಿಕ್ಕೇಗೌಡ, ಶ್ರೀನಿವಾಸ್, ರಾಮನಾಥಪುರ ಪ್ಲಾಟ್‌ಫಾರಂ–2ರ ಮಂಜೇಗೌಡ ಹಾಗೂ ಕಮಿಟಿಗೆ ತಂಬಾಕು ಸಂಶೋಧನ ಪ್ರತಿನಿಧಿಯಾಗಿ ಐಟಿಸಿ ಕಂಪನಿಯ ರಾಮಕೃಷ್ಣ, ಗೋಲ್ಡನ್ ಕಂಪನಿಯ ಶ್ರೀನಿವಾಸ ರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ.

ಮಾಜಿ ಅಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, ಕಳೆದ ವರ್ಷ ರೈತರಿಗೆ 3800 ರೂ. ಕಡಿಮೆ ಬೆಲೆಯಲ್ಲಿ ರಸಗೊಬ್ಬರ ವಿತರಿಸಲಾಗಿತ್ತು. ಬೆಳೆಗಾರರ ಎಲ್ಲಾ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಸಮಯಕ್ಕೆ ಸರಿಯಾಗಿ ರಸಗೊಬ್ಬರ ವಿತರಿಸಲಾಗಿತ್ತು. ಮಂಡಳಿಯ ನಿರ್ದೇಶಕರು, ಪ್ರಾದೇಶಿಕ ವ್ಯವಸ್ಥಾಪಕರು, ಕ್ರಾಪ್ ಕಮಿಟಿಯ ಸದಸ್ಯರ ಸಹಕಾರದೊಂದಿಗೆ ಕಳೆದ ವರ್ಷ ಸಮರ್ಪಕವಾಗಿ ರಸಗೊಬ್ಬರ ವಿತರಣೆ ಮಾಡಲಾಯಿತು ಎಂದರು.

ಇದೇ ವೇಳೆ ಅಧಿಕೃತ ಬೆಳೆಗಾರರಿಗೆ ತಂಬಾಕು ಮಾರಾಟಕ್ಕೆ ಅವಕಾಶ ನೀಡಬೇಕು. ಅವಕಾಶ ನೀಡದಿದ್ದಲ್ಲಿ ಸರ್ಕಾರ ಮತ್ತು ಮಂಡಳಿಗೆ ತೆರಿಗೆ ಇಲ್ಲದಂತೆ ಕಳ್ಳ ಮಾರ್ಗದಲ್ಲಿ ಮಾರಾಟವಾಗುತ್ತದೆ. ಇದನ್ನು ತಪ್ಪಿಸಲು ಅನಧಿಕೃತ ಬೆಳೆಗಾರರಿಗೆ ಅವಕಾಶ ನೀಡಬೇಕು ಎಂದು ಮಂಡಳಿಯ ಪ್ರಾದೇಶಿಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು. ತಂಬಾಕು ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ಐಟಿಸಿ ಕಂಪನಿಯ ಪೂರ್ಣೇಶ್, ಚನ್ನವೀರಯ್ಯ, ಕಿರಿಜಾಜಿ ಧನಂಜಯ, ಅಗ್ರಹಾರ ಸತೀಶ, ಭೀಮನಹಳ್ಳಿ ಜಯರಾಮ ಮತ್ತಿತರರು ಹಾಜರಿದ್ದರು.

ವಿವಿಧ ಸಂಘ–ಸಂಸ್ಥೆಗಳಿಂದ ಪಿ.ಪುಟ್ಟರಾಜುಗೆ ಶ್ರದ್ಧಾಂಜಲಿ

ತಿ.ನರಸೀಪುರ, ಅ.11– ಇತ್ತೀಚೆಗೆ ನಿಧನರಾದ ತಾಲೂಕು ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜುಗೆ ಮಂಗಳವಾರ ಪಟ್ಟಣದ ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು ಶ್ರದ್ಧಾಂಜಲಿ ಸಲ್ಲಿಸಿದರು.

ಪಟ್ಟಣದ ಶ್ರೀ ಮಹದೇವಪ್ಪ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಪುಟ್ಟರಾಜು ಅವರ ಸಾಮಾಜಿಕ ಕಾರ್ಯವೈಖರಿ ಹಾಗೂ ಜನಪರ ಕಾಳಜಿಯ ಬಗ್ಗೆ ಮುಖಂಡರು ಪ್ರಶಂಸೆ ವ್ಯಕ್ತಪಡಿಸಿದರು. ಪುಟ್ಟರಾಜು ನಾಗರಿಕ ಸೇವಾ ಸಮಿತಿಯನ್ನು ಪ್ರಾರಂಭಿಸಿ ತಾಲೂಕಿನಲ್ಲಿದ್ದ ಅನೇಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ನಮ್ಮೊಡನೆ ಹೋರಾಟಕ್ಕೆ ಬೆಂಬಲವಾಗಿ ನಿಂತಿದ್ದರು. ಜತೆಗೆ ಖಾಸಗಿ ಬಸ್ ಮಾಲೀಕರಾಗಿ ಕಾರ್ಮಿಕರು, ನೊಂದವರ ಬಗ್ಗೆ ಕಾಳಜಿ ಹೊಂದಿದ್ದರು ಎಂದು ಸ್ಮರಿಸಿದರು.



ಹೊಸ ಸೇತುವೆ ನಿರ್ಮಾಣ, ಹಳೆ ಸೇತುವೆ ರಕ್ಷಣೆಯ ಹೋರಾಟದ ವೇಳೆ ಹಾಗೂ ಪಟ್ಟಣದ ವಿವಿಧ ಸಮಸ್ಯೆಗಳ ಬಗ್ಗೆ, ಕಾವೇರಿ ನದಿ ನೀರು ಹಂಚಿಕೆ ಹೋರಾಟದಲ್ಲಿ ನಿರಂತರವಾಗಿ ಸಂಘ–ಸಂಸ್ಥೆಗಳೊಂದಿಗೆ ತೊಡಗಿಸಿಕೊಂಡು ಸಾಕಷ್ಟು ಸಾಮಾಜಿಕ ಸೇವೆ ಮಾಡಿದ್ದರು. ತಿ.ನರಸೀಪುರ ಪಟ್ಟಣ ಪಂಚಾಯಿತಿಯನ್ನು ಪುರಸಭೆ ಮೇಲ್ದರ್ಜೆಗೇರಿಸಲು ಸಾಕಷ್ಟು ಪ್ರಯತ್ನಿಸಿದ್ದರು. ಖಾಸಗಿ ಬಸ್ ಏಜೆಂಟರ ಅಧ್ಯಕ್ಷರಾಗಿ ಸಾಕಷ್ಟು ಸೇವಾ ಕಾರ್ಯ, ಪ್ರತಿಭಾವಂತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಾಗೂ ವಿವಿಧ ಕಲಾವಿದರಿಗೆ ಅವಕಾಶಗಳನ್ನು ಕೊಡಿಸುವಲ್ಲಿ ಸಾಕಷ್ಟು ಶ್ರಮಿಸಿದ್ದರು. ಇವರ ಅಗಲಿಕೆ ನಮಗೆ ವೈಯಕ್ತಿಕವಾಗಿ ನೋವು ತಂದಿದೆ ಎಂದು ತಮ್ಮ ಭಾವನೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ವೈ.ಎನ್.ಶಂಕರೇಗೌಡ, ಮಹದೇಶ್ವರ ಭವನ್ ಮಾಲೀಕ ಹೋಟೆಲ್ ರಾಜಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ಬಾರ್ ಅನಂತು, ರಾಜಣ್ಣ, ಸುರೇಶ್, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ನಾಗರಾಜು, ಕರುಹಟ್ಟಿ ಮಹದೇವಯ್ಯ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ತಿರುಮಕೂಡಲು ಚೇತನ್, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮಲ್ಲಣ್ಣ, ಟಿ.ಎನ್.ಗುರುಪ್ರಸಾದ್, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್, ಫ್ಯಾನ್ಸಿ ಮೋಹನ್, ಸಿ.ಪುಟ್ಟಯ್ಯ, ಕುರುಬೂರು ಶಾಂತರಾಜು, ಎ.ಎನ್.ರಂಗುನಾಯಕ್, ವೆಂಕಟರಮಣಶೆಟ್ಟಿ, ಎನ್.ಲೋಕೇಶ್, ಬನ್ನಳ್ಳಿಹುಂಡಿ ಶಿವಕುಮಾರ್, ರೈತ ಮುಖಂಡ ಕಿರುಗಸೂರು ಶಂಕರ್, ಗಿರೀಶ್, ಪರಮೇಶ್, ನಾಗೇಂದ್ರ ಕುಮಾರ್, ಪಿ.ಸ್ವಾಮಿನಾಥ್‌ಗೌಡ, ಆಲಗೂಡು ಪಿಎಸಿಸಿಎಸ್ ಮಾಜಿ ಅಧ್ಯಕ್ಷ ವೀರಭದ್ರಪ್ಪ, ವೆಂಕು, ಬಸ್ ಏಜೆಂಟ್ ರಾಜಣ್ಣ, ಸಿದ್ದಪ್ಪ ಮಾದು, ಲೋಕಿ, ಹಲಸಳ್ಳಿ ಮಹದೇವಸ್ವಾಮಿ, ಕರುಹಟ್ಟಿ ಬಸವರಾಜು, ಮಣಿಕಂಠರಾಜ್‌ಗೌಡ, ತಿರುಮಕೂಡಲು ರಾಮು, ಲಕ್ಷ್ಮಣ, ಮಹದೇಶ್ವರ ಹೋಟೆಲ್ ಕುಮಾರ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮಂಟೆಲಿಂಗಪ್ಪ, ಏಜೆಂಟ್ ಶ್ರೀನಿವಾಸ್, ನಯನಜ ಕ್ಷತ್ರಿಯ ಸಂಘದ ಅಧ್ಯಕ್ಷ ನಾಗೇಂದ್ರ, ಇತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲಿವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, 800 (ತ): ಮ.1.15ಕ್ಕೆ, ಅಭಿರಾಮಚಂದ್ರ (ಕ): ಸಂ.4.25ಕ್ಕೆ, ದಿ ವ್ಯಾಕ್ಸಿನ್ ವಾರ್ (ಹಿಂ): ಸಂ.6.50ಕ್ಕೆ.
ಸ್ಕ್ರೀನ್ 2	ಕನ್ನೂರ ಸ್ಕ್ವಾಡ್ (ಮ): ಬೆ.10.40ಕ್ಕೆ, ರಥಂ (ತ): ಮ.1.45ಕ್ಕೆ, ರೂಲ್ಸ್ ರಂಜನ್ (ತೆ): ಸಂ.4.10ಕ್ಕೆ, ಮಿಷನ್ ರಾಣಿಗಂಜ್ (ಹಿಂ): ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ರಾಜಮಾರ್ತಾಂಡ (ಕ): ಬೆ.10.55ಕ್ಕೆ, ತೋತಾಪುರಿ 2 (ಕ): ಮ.1.35ಕ್ಕೆ, ಜವಾನ್ (ಹಿಂ): ಸಂ.4.05ಕ್ಕೆ, ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ): ರಾ.7.25ಕ್ಕೆ, ಚಾವರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (ಕ): ಬೆ.10.40ಕ್ಕೆ, ಬಾನ ದಾರಿಯಲ್ಲಿ (ಕ): ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮ್ಯಾಡ್ 2023 (ತೆ): ಸಂ.4.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಾನ ದಾರಿಯಲ್ಲಿ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	ಪಾವ್ ಪಟ್ರೋಲ್ (ಇಂ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ರಾ.8.15ಕ್ಕೆ, ಮಿಷನ್ ರಾಣಿಗಂಜ್ (ಹಿಂ): ಸಂ.5.15ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.11.55ಕ್ಕೆ, ಪಾವ್ ಪಟ್ರೋಲ್ (ಇಂ): ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ,
ಸ್ಕ್ರೀನ್ 4	ಮಿಷನ್ ರಾಣಿಗಂಜ್ (ಹಿಂ): ಬೆ.11ಕ್ಕೆ, ಮಾರಕಾಸ್ತ್ರ (ಕ): ಮ.3ಕ್ಕೆ, ಅಭಿರಾಮಚಂದ್ರ (ಕ): ಸಂ.6.20ಕ್ಕೆ, ಮ್ಯಾಡ್ (ತೆ): ರಾ.9ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ದ್ವಂದ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

11ನೇ ದಿನ, ಗುರುವಾರ 12–10–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. **ಹೊಗೇನಕಲ್ ಪ್ಲೇಟ್–1600 ಮೀ.** ರೇಟೆಡ್ 00 ರಿಂದ 25. ಮ.2.00ಕ್ಕೆ
1. ಡಿ ಮಿಡ್ ಟು ಪೈರ್ 2. ಲಿಟಲ್ ಏಜೆಂಟ್ 3. ರಷ್ಯನ್ ರೋಮಾನ್ಸ್

II. **ಭರಚುಕ್ಕಿ ಪ್ಲೇಟ್ ಡಿ2–1100 ಮೀ.** ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಹಿಯರ್ ಐ ಕಮ್ 2. ರೊಮ್ಯಾಂಟಿಕ್ ಹಾರ್ಟ್ 3. ಟಾಪ್ ರಾಂಕ್

III. **ಭರಚುಕ್ಕಿ ಪ್ಲೇಟ್ ಡಿ1–1100 ಮೀ.** ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.3.00ಕ್ಕೆ
1 ಕಂಟ್ರೀಸ್ ಮೇಜರ್ 2. ಮೆನಿ ಮೂನ್ಸ್ 3. ಲಕ್ಕಿಸನ್

IV. **ಗೂಲ್ ಅಂಡ್ ಸೋಲಿ ಪೂನಾವಾಲ ಮೆಮೋರಿಯಲ್ ಟ್ರೋಫಿ–1600 ಮೀ.** ರೇಟೆಡ್ 40 ರಿಂದ 65. ಸಂ.3.30ಕ್ಕೆ
1. ಸ್ಟಾರ್ ಮಿ ಓಶನ್ 2. ಟ್ವಿಲೈಟ್ ಟಾರ್‌ನಾಡೋ 3. ಕುಶಾಕ್

V. **ಚೀಫ್ ಮಿನಿಸ್ಟರ್ಸ್ ಟ್ರೋಫಿ** ರೇಟೆಡ್ 60 ಮತ್ತು ಮೇಲ್ಪರ್ಗ. ಸಂ.4.00ಕ್ಕೆ
1. ಲಾಸ್ಟ್ ವಿಶ್ 2. ಸೈರೆನಿಯಸ್ 3. ಗ್ಯಾಮು

VI. **ಬೇಲೂರು ಪ್ಲೇಟ್–1100 ಮೀ.** ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ಚುಲ್ ಬುಲ್ ರಾಣಿ 2 ಬಾಲ್ಟಿ ಮೋರ್ 3. ಫಸ್ಟ್ ಇಂಪ್ರೆಷನ್

VII. **ಮಂಡ್ಯ ಪ್ಲೇಟ್– 1200 ಮೀ.** ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1 ಓ ಮಂಚಾಲಿ 2 ಮಿಸ್ಟಿಕ್ ಡಿವೈನ್ 3. ಆಲ್‌ಗೋಳ್ಜ್

ದಿನದ ಅತ್ಯುತ್ತಮ	ಓ ಮಂಚಾಲಿ
ಡಬ್ಬಲ್	ಸ್ಟಾರ್ ಮಿ ಓಶನ್, ಲಾಸ್ಟ್ ವಿಶ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	3, 4 ಮತ್ತು 5
II ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಸ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಮೈಸೂರು ಎಂಜಿ ರಸ್ತೆ ಸದ್ಯ ವಾಹನ ಸಂಚಾರಕ್ಕೆ ಮುಕ್ತವಾಯ್ತು!

- ಇಲ್ಲಿರುವ ತರಕಾರಿ ಮಾರಾಟಗಾರರು ರಸ್ತೆ, ಫುಟ್‌ಪಾತ್ ಅತಿಕ್ರಮಿಸದಂತೆ ಪೊಲೀಸರ ಎಚ್ಚರಿಕೆ
- ಮಾರುಕಟ್ಟೆಗೆ ಹೊಂದಿಕೊಂಡ ಖಾಲಿ ಜಾಗದಲ್ಲಿ ವಾಹನಗಳಿಂದ ತರಕಾರಿ ಇಳಿಸಲು ಸೂಚನೆ



ಮೈಸೂರು,ಅ.11(ಆರ್‌ಕೆ)–ಮೈಸೂರಿನ ಇಟ್ಟಿಗೆಗೂಡು ಬಳಿಯ ಮಹಾತ್ಮ ಗಾಂಧಿ ರಸ್ತೆ (ಎಂಜಿ ರಸ್ತೆ)ಯಲ್ಲಿರುವ ತರಕಾರಿ ಮಾರುಕಟ್ಟೆ ಬಳಿ ವಾಹನ ಸವಾರರು ಪ್ರತಿ ನಿತ್ಯ ಅನುಭವಿಸುತ್ತಿದ್ದ ನರಕಯಾತನೆಗೆ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಕೊನೆಗೂ ಮುಕ್ತಿ ಹಾಡಿದ್ದಾರೆ.

ಇತ್ತೀಚೆಗೆ ಮೈಸೂರು ನಗರ ಸಂಚಾರ ವಿಭಾಗದ ಎಸಿಪಿಯಾಗಿಯೂ ಸೇವೆ ಸಲ್ಲಿಸಿದ್ದ ನಿವೃತ್ತ ಎಸ್‌ಪಿ ಶಂಕರೇಗೌಡರು ಈ ಸಂಬಂಧ ಪತ್ರ ಬರೆದ ನಂತರ ಸಂಚಾರ ವಿಭಾಗದ ಪೊಲೀಸರು ಎಚ್ಚೆತ್ತುಕೊಂಡು ಈ ರಸ್ತೆಯಲ್ಲಿ ವಾಹನಗಳು ಸುಗಮವಾಗಿ ಸಂಚರಿಸಲು ಅನುಕೂಲವಾಗುವಂತೆ ಕ್ರಮ ಕೈಗೊಂಡಿದ್ದಾರೆ.

ಮಾರುಕಟ್ಟೆಗೆ ತರಕಾರಿ ತರುವ ವಾಹನಗಳು ರಸ್ತೆ ಬದಿಯಲ್ಲಿ ನಿಲ್ಲುತ್ತಿದ್ದರಿಂದ ಇತರ ವಾಹನಗಳು ಸಂಚರಿಸುವುದು ದುಸ್ತರವಾಗಿತ್ತು. ತರಕಾರಿಯನ್ನು ಇಳಿಸಲು ಗಂಟೆಗಟ್ಟಲೆ ವಾಹನಗಳು ರಸ್ತೆ ಯಲ್ಲೇ ನಿಲ್ಲುತ್ತಿದ್ದವು. ಅ. 5ರಂದು ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಎಸ್. ಜಾಹ್ನವಿ ಹಾಗೂ ಎಸಿಪಿ ಪರಶುರಾಮಪ್ಪ ನಿರ್ದೇಶನದಂತೆ ಸಿದ್ಧಾರ್ಥನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿವರ್ಗ ತರಕಾರಿ ಮಾರುಕಟ್ಟೆ ಬಳಿ ತೆರಳಿ ರಸ್ತೆ ಬದಿ ನಿಲ್ಲಿಸಿದ್ದ ಎಲ್ಲಾ ವಾಹನಗಳನ್ನೂ ತೆರವುಗೊಳಿಸಿದರು. ಅಲ್ಲದೇ, ಯಾವುದೇ ವಾಹನ ರಸ್ತೆ ಬದಿ ನಿಲ್ಲಬಾರದು. ತರಕಾರಿ ಅನ್‌ಲೋಡ್ ಮಾಡಲು ವಾಹನಗಳನ್ನು ಮಾರುಕಟ್ಟೆ ಆವರಣದೊಳಗೆ ಕೊಂಡೊಯ್ಯಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರು. ಅಂದಿನಿಂದ ಪ್ರತಿದಿನ ತರಕಾರಿ ಮಾರುಕಟ್ಟೆ ಬಳಿ ಸಂಚಾರ ವಿಭಾಗದ ಪೊಲೀಸರನ್ನು ನಿಯೋಜಿಸಲಾಗಿದೆ. ಈ ಪೊಲೀಸರು ರಸ್ತೆಬದಿ ವಾಹನಗಳು ನಿಲ್ಲದಂತೆ ಕಟ್ಟುನಿಟ್ಟಾಗಿ ಕ್ರಮ ವಹಿಸುತ್ತಿದ್ದಾರೆ. ಇದರ ಪರಿಣಾಮವಾಗಿ ಈ ರಸ್ತೆಯಲ್ಲಿ ವಾಹನ ಸಂಚಾರ ಸುಗಮವಾಗಿದೆ. ಪೊಲೀಸರು ಕೆಲ ದಿನಗಳು ಮಾತ್ರ ಹಾಜರಿದ್ದು, ನಂತರ ನಾಪತ್ತೆಯಾಗುವ ಮೂಲಕ ಪರಿಸ್ಥಿತಿ ಮರುಕಳಿಸುವಂತೆ ಮಾಡಬಾರದು. ನಿರಂತರವಾಗಿ ಈ ರಸ್ತೆಯಲ್ಲಿ ಪೊಲೀಸರನ್ನು ನಿಯೋಜಿಸಿ, ರಸ್ತೆಬದಿ ವಾಹನಗಳು ನಿಲ್ಲದಂತೆ ಕ್ರಮ ವಹಿಸುವ ಮೂಲಕ ವಾಹನ ಸಂಚಾರಕ್ಕೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ವಾಹನ ಸವಾರರು ಮನವಿ ಮಾಡಿದ್ದಾರೆ.

ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಆಗುತ್ತಿರುವ ಬಗ್ಗೆ ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರ ಗಮನಕ್ಕೆ ತರಲಾಗಿತ್ತು. ಆಗ ಅವರು ಸೂಕ್ತ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದ್ದರಾದರೂ ಪೊಲೀಸರು ಗಮನಹರಿಸಿರಲಿಲ್ಲ. ಕೊನೆಗೆ ಸಂಚಾರ ಅವ್ಯವಸ್ಥೆ ಬಗ್ಗೆ ನಿವೃತ್ತ ಎಸ್‌ಪಿ ಶಂಕರೇಗೌಡರು ಪತ್ರ ಬರೆದ ನಂತರ ಸಂಚಾರ ಪೊಲೀಸರು ಎಚ್ಚೆತ್ತುಕೊಂಡು ಕ್ರಮ ವಹಿಸಿದ್ದಾರೆ.

ಎಂಜಿ ರಸ್ತೆಯಲ್ಲಿ ವಾಹನ ಸಂಚಾರ 'ಸಂಚಕಾರ'ದ ಬಗ್ಗೆ ಪೊಲೀಸರ ಗಮನ ಸೆಳೆದಿದ್ದ ನಿವೃತ್ತ ಎಸ್‌ಪಿ ಶಂಕರೇಗೌಡ



ಮೈಸೂರು,ಅ.11–ಮೈಸೂರಿನ ಇಟ್ಟಿಗೆಗೂಡು ಬಳಿ ಇರುವ ಎಂ.ಜಿ.ರಸ್ತೆಯ ತರ ಕಾರಿ ಮಾರುಕಟ್ಟೆ ಬಳಿ ಸುಗುಮ ಸಂಚಾರಕ್ಕೆ ಅನುವು ಮಾಡಿರುವ ಬಗ್ಗೆ ನಿವೃತ್ತ ಎಸ್‌ಪಿ ಶಂಕರೇಗೌಡ ಅವರಿಗೆ ಸಿದ್ಧಾರ್ಥನಗರ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಯೋಗೇಶ್ ಚಿತ್ರ ಸಹಿತ ವರದಿ ನೀಡಿದ್ದಾರೆ.

ಮೈಸೂರು ನಗರ ಸಂಚಾರ ವಿಭಾಗದ ಎಸಿಪಿಯಾಗಿಯೂ ಸೇವೆ ಸಲ್ಲಿಸಿದ್ದ ನಿವೃತ್ತ ಎಸ್ಪಿ ಶಂಕರೇಗೌಡರು ತರಕಾರಿ ಮಾರುಕಟ್ಟೆ ಬಳಿ ವಾಹನ ಸಂಚಾರಕ್ಕೆ ಅಡಚಣೆಯಾಗಿರುವ ಬಗ್ಗೆ ಸಿದ್ಧಾರ್ಥನಗರ ಸಂಚಾರ ಠಾಣೆಗೆ ಸುದೀರ್ಘ ಪತ್ರ ಬರೆದಿದ್ದರು. ಅವರ ಪತ್ರವನ್ನನುಸರಿಸಿಯೇ ಪೊಲೀಸರು ಈ ರಸ್ತೆಯಲ್ಲಿ ಸುಗುಮ ಸಂಚಾರಕ್ಕೆ ಕ್ರಮ ಕೈಗೊಂಡಿದ್ದಾರೆ.

ಎಂ.ಜಿ.ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ ಮಾರುಕಟ್ಟೆಗೆ ಬರುವ ಎಲ್ಲಾ ವಾಹನಗಳನ್ನು ರಸ್ತೆ ಬದಿಯೇ ನಿಲುಗಡೆ ಮಾಡುತ್ತಿದ್ದಾರೆ. ಇದರಿಂದ ಈ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ಸೂಕ್ತ ಬೆಳಕಿನ ವ್ಯವಸ್ಥೆ ಇಲ್ಲ. ಮಳೆ ಬಂದಾಗ ಮಾರುಕಟ್ಟೆಯಲ್ಲಿ ಕೆಸರು ತುಂಬಿಕೊಂಡು ಅವ್ಯವಸ್ಥೆಯಿಂದ ಕೂಡಿರುತ್ತದೆ. ಇದರಿಂದಾಗಿ ಮಾರುಕಟ್ಟೆಗೆ ತರಕಾರಿ ತರುವ ವಾಹನಗಳ ಪಾರ್ಕಿಂಗ್‌ಗೆ ತುಂಬಾ ತೊಂದರೆಯಾಗುತ್ತಿದೆ. ಮಾರುಕಟ್ಟೆಯನ್ನು ಸ್ಥಳಾಂತರ ಮಾಡಿ ಮಾರಾಟಗಾರರಿಗೆ ಬೇರೆ ವ್ಯವಸ್ಥೆ ಮಾಡಿಕೊಟ್ಟರೆ ಅಥವಾ ಸದರಿ ಸ್ಥಳದಲ್ಲಿಯೇ ಮಾರಾಟಗಾರರಿಗೆ ಮತ್ತು ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಒದಗಿಸಿ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಪತ್ರ ಬರೆದಿದ್ದರು.

ಅವರಿಗೆ ಉತ್ತರಿಸಿರುವ ಸಿದ್ಧಾರ್ಥ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್, ಈ ರಸ್ತೆಯಲ್ಲಿ ಸುಗುಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮಾರುಕಟ್ಟೆಯ ವರ್ತಕರ ಸಂಘದವರನ್ನು ಠಾಣೆಗೆ ಕರೆಯಿಸಿ ಸಭೆ ನಡೆಸಿ, ಸುಗಮ ಸಂಚಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಪೊಲೀಸರೊಂದಿಗೆ ಸಹಕರಿಸುವಂತೆ ಅವರಿಗೆ ಸೂಚಿಸಲಾಗಿದೆ. ಹಾಗೂ ಠಾಣೆಯಿಂದ ಪ್ರತಿನಿತ್ಯ ಸಂಜೆ 5ರಿಂದ ಬೆಳಗ್ಗೆ 9ರವರೆಗೆ 2 ಪಾಳಿಯಲ್ಲಿ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ನಿಯೋಜಿಸಿ ರಸ್ತೆಯಲ್ಲಿ ಯಾವುದೇ ತರಕಾರಿ ವಾಹನಗಳು ಬಿಡುಗಡೆ ಯಾಗದಂತೆ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ತಿಳಿಸಿರುವುದಲ್ಲದೆ, ಅದಕ್ಕೆ ಸಂಬಂಧಿಸಿದ ಫೋಟೋಗಳನ್ನು ಶಂಕರೇಗೌಡರಿಗೆ ರವಾನಿಸಲಾಗಿದೆ.

ಸಿ.ಸೋಮಶೇಖರ್ ನಿಧನ



ಮೈಸೂರು, ಅ.11–ಮೈಸೂರಿನ ಕುಂಬಾರಕೊಪ್ಪಲಿನ ನಿವಾಸಿ ಸಿ.ಸೋಮಶೇಖರ್ (ಇಎಸ್‌ಐ) ಅವರು ಬುಧವಾರ ನಿಧನರಾದರು.

ಅವರಿಗೆ 65 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ, ಮೊಮ್ಮಕ್ಕಳು ಹಾಗೂ ಸ್ನೇಹಿತರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 1 ಗಂಟೆಗೆ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

86ನೇ ಜನ್ಮದಿನೋತ್ಸವ



ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲೆ ಇರಲಿ

ಮಗ ವಿಶ್ವನಾಥ ಜಿ.ಎಸ್, 13ನೇ ಕ್ರಾಸ್, ಅಶೋಕಪುರ, ಮೈಸೂರು, ಮೊಮ್ಮಕ್ಕಳು ಶ್ರೇಯಸ್ ಎಸ್.ಜಿ, ಯಶಸ್ ಎಸ್.ಜಿ, ದಕ್ಷ ಎಸ್.ವಿ, ತೇಜಸ್ ಎಸ್.ವಿ, ಸೊಸೆಯರಾದ ಉಷಾ ಗಂಗಾಧರ ಸ್ವಾಮಿ, ನಂದಿನಿ ವಿಶ್ವನಾಥ್

ಲೇಟ್ ಶ್ರೀ ಸಿದ್ದಯ್ಯ
ನಿವೃತ್ತ ಸಹಾಯಕ ಕೃಷಿ ಅಧಿಕಾರಿ

9620839910

ಕಾಣೆಯಾಗಿದ್ದಾರೆ



ಸುಮಾರು 53 ವರ್ಷ ವಯಸ್ಸು, ಕೋಲು ಮುಖ ಸಾದಾರಣ ಮೈಕಟ್ಟು, ಎಣ್ಣೆಕೆಂಪು ಮೈಬಣ್ಣ ಇವರು ದಿ: 24.09.2023 ರಂದು ರಾತ್ರಿ 10 ಗಂಟೆಗೆ ಮನೆಯಿಂದ ಹೊರಗೆ ಹೋದವರು ಇದುವರೆಗೆ ಮನೆಗೆ ಬಂದಿರುವುದಿಲ್ಲ. ಮಾಹಿತಿ ಸಿಕ್ಕವರು ತಿಳಿಸಬೇಕಾಗಿ ವಿನಂತಿ.

ಯತಿರಾಜ್

8608604343/8618879920

ಹಸಿರು ನಮ್ಮ ಉಸಿರು

6ನೇ ವರ್ಷದ ಸವಿನೆನಪು



ಶ್ರೀಮತಿ ಶಾರದಮ್ಮ
ಕಂಪಲಾಪುರ
ನಿಧನ:11–10–2017

ಇಂತಿ ದುಃಖ ತಪ್ತರು ಕುಟುಂಬ ವರ್ಗದವರು ಕಂಪಲಾಪುರ, ಪಿರಿಯಾಪಟ್ಟಣ ತಾಲೂಕು

PUBLIC NOTICE

Notice is hereby given to general public, that my client is planned to purchase below mentioned schedule property from 1)Sri.RAMU.N S/o Late. B. Ningaiah, aged about 68 years, 2)Smt.Sudhamani.H.M, W/o Ramu. N, aged about 61 years, 3) Smt. Shruthi. M.R D/o. Ramu.N, aged about 38 years and Sri. Abhish M.R, S/o Ramu. N, aged about 37 years, all are residing at Door no: 3093, H.T. Double Road 2nd Stage, Vijaynagara, Mysuru-570017.

Whereas, any person/s claiming any interest on the schedule property are hereby required to communicate the same to me with documentary evidence within SEVEN (07) DAYS from today, or otherwise the sale will be completed without any such purported claim or interest, which shall be deemed & have waived for all intents and purposes.

SCHEDULE PROPERTY

All piece & parcel of the house property bearing door no-157, situated at Railway Workshop Layout, Ramabainagara, Mysuru, (site carved by Southern Railway Housing Society in Survey no-6/1, 6/2, 104/2, 104/3, 104/4 & 105/5 of Gorur Village, Kasaba Hobli, Mysuru Taluk & District), **measuring East to West 18.3 meters and North to South 12.2 meters,** having 148.92 Sq.mtrs RCC construction building with vitrified tiles floor, having separate electricity, water and sanitary connection facility bounded by-East by: Property bearing no-166, West by: Road. North by: Property bearing no-156, South by: Property bearing no-158.

Sd/- **V. RAVI KUMAR,** MBA, LL.M
Advocate, KAR-3176/2010.
"SURYA LAW CHAMBER", No-51,
Opp.Mandi Police Station. K.T.Street,
Mysuru-570021. Ph: 90081-62128.
Email:-advocatevravikumar@gmail.com.
Place: Mysore Date: 11.10.2023.

PUBLIC NOTICE

This is to inform and notify the public at large that my client Smt. BHRAMRAMBA W/o Late Mahadevappa K.M Residing at No.366, Rajath Mahal, 5h Cross, Udaygiri, Mandya has negotiated for sale transaction of the schedule mentioned property with theowner by name Nanjegowda. S S/o Late Shivanna, Residing atNo.101, 2nd main, 3rd cross, H-Block, Ramakrishnanagar, MysoreCity. Any person/s having any claim/ right/interest what so ever over the schedule property shall lodge their claim along with authentic documents to the undersigned within 10 days failing which it is deemed that there is no any such claim.

SCHEDULE

The Site property bearing No.101, situated in DatagalliLayout, 2nd main, 3rd Cross, H-Block, Chamaraja Mohalla, Mysore City,measuring East to West 18 Meters and North to South 12 Meters inall measuring 216.00 Sq Meter, bounded on the:

East by : Road
West by : Property No.110
North by : Property No.102
South by : Property No.100

Sd/- SRINIVAS.A
Advocate
No.111, 1st Floor, Panchamantra Road,
Kuvempunagar, Mysore-570 024.
Mob - 9945779916